www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರಿಗೆ
20ನೇ ವರ್ಷದ ಸಂಭ್ರಮ

◆ ಬೆಂಗಳೂರು ◆ ಮಂಗಳೂರು ◆ ಶಿವಮೊಗ್ಗ

VARTHABHARATHI KANNADA DAILY

REGD.NO: KA/BGW-1628/2021-23 RNI NO. KAR KAN/2008/31737 | 28 ಸೆಪ್ಟೆಂಬರ್ 2022 ಬುಧವಾರ | ● ಸಂಪುಟ 15 ● ಸಂಚಿಕೆ 208 ● ಬೆಂಗಳೂರು ● ಪುಟ 10 ● ಬೆಲೆ ರೂ. 4.00

AFYUN
PLYWOOD
1800 1234 027

## ಆಶಾ ಪಾರೇಖ್‌ಗೆ ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರ



ಹೊಸದಿಲ್ಲಿ, ಸೆ.27: ಭಾರತೀಯ ಚಿತ್ರರಂಗದ ಅತ್ಯುನ್ನತ ಪುರಸ್ಕಾರವಾದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಖ್ಯಾತ ಹಿರಿಯ ನಟಿ ಆಶಾ ಪಾರೇಖ್ ಅವರಿಗೆ ಮಂಗಳವಾರ ಘೋಷಿಸಲಾಗಿದೆ.

ಹೊಸದಿಲ್ಲಿಯಲ್ಲಿ ನಡೆಯಲಿರುವ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ 79 ವರ್ಷದ ಆಶಾ ಪಾರೇಖ್ ಅವರಿಗೆ 2020ನೇ ದಾದಾಸಾಹೇಬ್ ಫಾಲ್ಕೆ ಪುರಸ್ಕಾರವನ್ನು ನೀಡಲಾಗುವುದೆಂದು ಕೇಂದ್ರ ಮಾಹಿತಿ ಹಾಗೂ ಪ್ರಸಾರ ಖಾತೆಯ ಸಹಾಯಕ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ. 8ನೇ ಪುಟಕ್ಕೆ

### ಪಿಎಸ್ಸೈ ಹಗರಣ

## ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಪತಿಗೆ ಜಾಮೀನು



ಕಲಬುರಗಿ, ಸೆ.27: ಪಿಎಸ್ಸೈ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಆರೋಪಿ ರಾಜೇಶ್ ಹಾಗರಗಿಗೆ ಕಲಬುರಗಿ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ರಾಜೇಶ್ ಹಾಗರಗಿ ಅವರು ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿಯ ಪತಿ ಮತ್ತು ಜ್ಞಾನ ಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷರಾಗಿದ್ದಾರೆ. ಕಲಬುರಗಿ ಜ್ಞಾನಜ್ಯೋತಿ ಶಾಲೆ ಕೇಂದ್ರದಲ್ಲಿ ಪಿಎಸ್ಸೈ ಪರೀಕ್ಷೆ ಬರೆದ ಬಹುತೇಕರು ಆಯ್ಕೆಯಾಗಿದ್ದರು. ಹಗರಣ ಬೆಳಕಿಗೆ ಬರುತ್ತಿದ್ದಂತೆ ದಿವ್ಯಾ ಊರು ಬಿಟ್ಟಿದ್ದರು. ಅವರ ಪತಿ ರಾಜೇಶ್ ಹಾಗರಗಿಯನ್ನು ಸಿಐಡಿ ಪೊಲೀಸರು ಬಂಧಿಸಿದ್ದರು. ಇದಾದ 20 ದಿನಗಳ ಬಳಿಕ ದಿವ್ಯಾರನ್ನು ಸಿಐಡಿ ಅಧಿಕಾರಿಗಳು ಪುಣೆಯಲ್ಲಿ ಬಂಧಿಸಿ ಜೈಲಿಗಟ್ಟಿದ್ದಾರೆ. ಐದೂವರೆ ತಿಂಗಳಿನಿಂದ ಜೈಲಿನಲ್ಲಿದ್ದ ರಾಜೇಶ್ ಹಾಗರಗಿಗೆ ಇದೀಗ ಕಲಬುರಗಿ ಹೈಕೋರ್ಟ್‌ನಿಂದ ಜಾಮೀನು ಮಂಜೂರಾಗಿದೆ.

### ಲೈಂಗಿಕ ಕಿರುಕುಳ ಪ್ರಕರಣ

## ಅ.10ರವರೆಗೆ ಮುರುಘಾಶ್ರೀ ಬಂಧನದ ಅವಧಿ ವಿಸ್ತರಣೆ



ಚಿತ್ರದುರ್ಗ, ಸೆ.27: ಅಪ್ರಾಪ್ತ ವಯಸ್ಸಿನ ಬಾಲಕಿಯರಿಬ್ಬರಿಗೆ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯವೆಸಗಿದ ಆರೋಪದಲ್ಲಿ ಪೋಕ್ಸೊ ಕಾಯ್ದೆಯಡಿ ಬಂಧಿತರಾಗಿರುವ ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರಿಗೆ ಮತ್ತೆ ಕೋರ್ಟ್ ನ್ಯಾಯಾಂಗ ಬಂಧನ ವಿಸ್ತರಿಸಿದೆ.

ಮುರುಘಾ ಶ್ರೀಗೆ ಜಾಮೀನು ಕೋರಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಮನವಿ ಸಲ್ಲಿಸಲಾಗಿತ್ತು. ಎರಡು ಬಾರಿ ಜೈಲು ಅವಧಿಯನ್ನು ವಿಸ್ತರಣೆ ಮಾಡಿದ್ದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಗಳವಾರ ಮತ್ತೆ ಅ.10ರವರೆಗೆ ನ್ಯಾಯಾಂಗ ಬಂಧನವನ್ನು ವಿಸ್ತರಿಸಿ ಆದೇಶಿಸಿದ್ದಾರೆ.

# ಉದ್ಧವ್ ಬಣಕ್ಕೆ ಹಿನ್ನಡೆ

## ನೈಜ ಶಿವಸೇನೆಯನ್ನು ನಿರ್ಧರಿಸಲು ಚು.ಆಯೋಗಕ್ಕೆ ಸುಪ್ರೀಂ ಅನುಮತಿ

**ಹೊಸದಿಲ್ಲಿ, ಸೆ.27: ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ದೊಡ್ಡ ಹಿನ್ನಡೆಯುಂಟು ಮಾಡಿರುವಂತಹ ಬೆಳವಣಿಗೆಯೊಂದರಲ್ಲಿ ' ತನ್ನನ್ನು ನೈಜ ಶಿವಸೇನೆ ಎಂಬುದಾಗಿ ಪರಿಗಣಿಸಬೇಕು ಹಾಗೂ ಪಕ್ಷದ ಚುನಾವಣಾ ಚಿಹ್ನೆಯಾದ 'ಬಿಲ್ಲುಬಾಣ'ವನ್ನು ತನಗೆ ನೀಡಬೇಕೆಂಬ ಹಾಲಿ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಣದ ಮನವಿಯನ್ನು ಪರಿಶೀಲಿಸಲು ಚುನಾವಣಾ ಆಯೋಗಕ್ಕೆ ಮಂಗಳವಾರ ಅನುಮತಿ ನೀಡಿದೆ.**

'ನೈಜ' ಶಿವಸೇನೆ ಯಾವುದೆಂಬುದನ್ನು ನಿರ್ಧರಿಸದಂತೆ ಚುನಾವಣಾ ಆಯೋಗವನ್ನು ತಡೆಯಬೇಕೆಂದು ಕೋರಿ ಉದ್ಧವ್ ಠಾಕ್ರೆ ನೇತೃತ್ವದ ಬಣದ ಮನವಿಯನ್ನು ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ ನೇತೃತ್ವದ ಸಾಂವಿಧಾನಿಕ ಪೀಠ ತಿರಸ್ಕರಿಸಿದೆ.

''ಚುನಾವಣಾ ಆಯೋಗದ ಮುಂದಿರುವ ಈ ವಿಚಾರಣಾ ಕಲಾಪಗಳಿಗೆ ಯಾವುದೇ ತಡೆಯಾಜ್ಞೆಯಿರುವುದಿಲ್ಲವೆಂದು ನಾವು ನಿರ್ದೇಶನ ನೀಡಿದ್ದೇವೆ'' ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಕೃಷ್ಣ ಮುರಾರಿ, ಹಿಮಾ ಕೋಹ್ಲಿ ಹಾಗೂ ಪಿ.ಎಸ್. ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠ ತಿಳಿಸಿದೆ.

ಏಕನಾಥ ಶಿಂದೆ ಅವರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದ್ದು ಅವರು ಚುನಾವಣಾ ಆಯೋಗದ ಮೆಟ್ಟಲೇರುವಂತಿಲ್ಲವೆಂದು ಉದ್ಧವ್ ಠಾಕ್ರೆ ಪರ ವಕೀಲ ಕಪಿಲ್ ಸಿಬಲ್ ವಾದಿಸಿದ್ದಾರೆ. ಶಿವಸೇನೆಯಿಂದ ಸಿಡಿದು, ತನ್ನದೇ ಆದ ಬಣದ ಸ್ಥಾಪನೆಯವರೆಗೆ ಮಹಾರಾಷ್ಟ್ರದ ಹಾಲಿ ಮುಖ್ಯಮಂತ್ರಿಯ ಕೃತ್ಯಗಳು ಸಂವಿಧಾನದ 10ನೇ ಪರಿಚ್ಛೇದದ 2(1)(ಎ) ಅನ್ವಯ ಸ್ವಯಂಪ್ರೇರಿತವಾಗಿ ಪಕ್ಷದ ಸದಸ್ಯತ್ವವನ್ನು ತೊರೆದಿರುವುದಕ್ಕೆ ಸರಿಸಮಾನವಾಗಿದೆ ಎಂದವರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಏಕನಾಥ ಶಿಂದೆ ನೇತೃತ್ವದ ಬಣವು ಈ ವರ್ಷದ ಜೂನ್‌ನಲ್ಲಿ ಠಾಕ್ರೆ ವಿರುದ್ಧ ಬಂಡೆದ್ದ ಪರಿಣಾಮವಾಗಿ ಆಗಿನ ಮಹಾವಿಕಾಸ್ ಆಘಾಡಿ ಮೈತ್ರಿಕೂಟ ಸರಕಾರ ಪತನಗೊಂಡಿತ್ತು. ಆನಂತರ ಏಕನಾಥ ಶಿಂದೆ ಅವರು ಬಿಜೆಪಿಯ ಬೆಂಬಲದೊದಿಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ತನ್ನ ಬಣವು ಪಕ್ಷಕ್ಕೆ ರಾಜೀನಾಮೆ ನೀಡಿಲ್ಲ ಮತ್ತು ತಮ್ಮದು ನೈಜ ಶಿವಸೇನೆ ಎಂಬುದಾಗಿ ಶಿಂದೆ ಅವರು ಪ್ರತಿಪಾದಿಸುತ್ತಿದ್ದಾರೆ.



## ಇತಿಹಾಸದಲ್ಲೇ ಮೊದಲ ಬಾರಿಗೆ ಸುಪ್ರೀಂಕೋರ್ಟ್ ವಿಚಾರಣಾ ಕಲಾಪಗಳ ನೇರ ಪ್ರಸಾರ ಆರಂಭ



ಹೊಸದಿಲ್ಲಿ, ಸೆ.27: ಸುಪ್ರೀಂಕೋರ್ಟ್‌ನ ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರಮುಖ ಪ್ರಕರಣಗಳ ವಿಚಾರಣೆಯ ನೇರ ಪ್ರಸಾರ ಮಂಗಳವಾರ ಆರಂಭಗೊಂಡಿದೆ . ನ್ಯಾಶನಲ್ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್‌ನ ಯೂಟ್ಯೂಬ್ ಚಾನೆಲ್‌ನಲ್ಲಿ ಈ ನೇರ ಪ್ರಸಾರವನ್ನು ವೀಕ್ಷಿಸಬಹುದಾಗಿದೆ.

ಮಂಗಳವಾರದಂದು ಆರ್ಥಿಕ ದುರ್ಬಲ ವರ್ಗಗಳಿಗೆ ಶೇ. 10 ಮೀಸಲಾತಿ ನೀತಿಯ ಸಾಂವಿಧಾನಿಕ ಸಿಂಧುತ್ವ, ಶಿವಸೇನೆಯ ಎರಡು ಬಣಗಳ ನಡುವಿನ ವಿವಾದ ಹಾಗೂ ಅಖಿಲ ಭಾರತ ವಕೀಲಿ ಪರೀಕ್ಷೆ ಸಿಂಧುತ್ವವನ್ನು ಪ್ರಶ್ನಿಸಿದ ಅರ್ಜಿಗಳ ವಿಚಾರಣೆಗಳ ನೇರ ಪ್ರಸಾರ ನಡೆಸಿತು.

ಸುಪ್ರೀಂಕೋರ್ಟ್‌ನ ಎಲ್ಲಾ ಸಾಂವಿಧಾನಿಕ ಪೀಠಗಳು ನಡೆಸುವ ವಿಚಾರಣೆಗಳನ್ನು ನೇರ ಪ್ರಸಾರ ಮಾಡುವುದಕ್ಕಾಗಿ ಶೀಘ್ರದಲ್ಲೇ ಸುಪ್ರೀಂಕೋರ್ಟ್ ತನ್ನದೇ ಆದ ವೇದಿಕೆಯನ್ನು ಹೊಂದಲಿದೆಯೆಂದು ಭಾರತದ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಸೋಮವಾರ ಹೇಳಿದ್ದರು.

ಸುಪ್ರೀಂಕೋರ್ಟ್‌ನ ಕಲಾಪಗಳನ್ನು ನೇರ ಪ್ರಸಾರ ಮಾಡುವ ಹಕ್ಕನ್ನು ಯೂಟ್ಯೂಬ್‌ನಂತಹ ಖಾಸಗಿ ಜಾಲತಾಣ ವೇದಿಕೆಗಳಿಗೆ ಅವಕಾಶ ನೀಡಬಾರದು ಎಂದು ಆಗ್ರಹಿಸಿ ಬಿಜೆಪಿ ನಾಯಕ ಕೆ.ಎನ್.ಗೋವಿಂದಾಚಾರ್ಯ ಸಲ್ಲಿಸಿದ ಅರ್ಜಿಯ ವಿಚಾರಣೆಯ ವೇಳೆ ಅವರು ಈ ವಿಷಯವನ್ನು ಪ್ರಕಟಿಸಿದರು.

ಸಾರ್ವಜನಿಕವಾಗಿ ಮಹತ್ವದ್ದಾಗಿರುವ ಪ್ರಕರಣಗಳ ನೇರ ಪ್ರಸಾರ ಮಾಡುವುದಕ್ಕೆ 2018ರ ಸೆ.27ರಂದು ಆಗಿನ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರು ತಾತ್ವಿಕ ಸಮ್ಮತಿಯನ್ನು ನೀಡಿದ್ದರು.

### ರಾಜಸ್ಥಾನ ಕಾಂಗ್ರೆಸ್ ಬಿಕ್ಕಟ್ಟು


## ಗೆಹ್ಲೋಟ್ ನಿಷ್ಠರ ವಿರುದ್ಧ ಕ್ರಮಕ್ಕೆ ವೀಕ್ಷಕರ ಶಿಫಾರಸು



ಹೊಸದಿಲ್ಲಿ, ಸೆ.27: ರಾಜಸ್ಥಾನದಲ್ಲಿ ತಾರಕಕ್ಕೇರಿರುವ ರಾಜಕೀಯ ಬಿಕ್ಕಟ್ಟಿಗೆ ಕಾರಣರಾದ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ನಿಷ್ಠಾವಂತರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಪಕ್ಷದ ವೀಕ್ಷಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಅಜಯ್ ಮಾಕನ್ ಅವರು ಪಕ್ಷಾಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿದ್ದಾರೆ. ರಾಜಸ್ಥಾನದಲ್ಲಿ ಪರ್ಯಾಯ ಸಭೆಗಳನ್ನು ನಡೆಸುವ ಮೂಲಕ ತೀವ್ರ ಅಶಿಸ್ತನ್ನು ಪ್ರದರ್ಶಿಸಿದ ಹಲವಾರು ಭಿನ್ನಮತೀಯ ಕಾಂಗ್ರೆಸ್ ಶಾಸಕರು ರಾಜಕೀಯ ಬಿಕ್ಕಟ್ಟನ್ನು ಸೃಷ್ಟಿಸಿದ್ದಾರೆಂದು ವರದಿ ಅಸಮಾಧಾನ ವ್ಯಕ್ತಪಡಿಸಿದೆ.

ಆದರೆ ಹಾಲಿ ಮುಖ್ಯಮಂತ್ರಿ ಗೆಹ್ಲೋಟ್ ಅವರಿಗೆ ವರದಿಯಲ್ಲಿ ಕ್ಲೀನ್ ಚಿಟ್ ನೀಡಲಾಗಿದೆ. ರಾಜಸ್ಥಾನದಲ್ಲಿನ ನೂತನ ರಾಜಕೀಯ ಬೆಳವಣಿಗೆಗಳಿಗೆ ಗೆಹ್ಲೋಟ್ ಹೊಣೆಯಲ್ಲವೆಂದು ವೀಕ್ಷಕರು ಅಭಿಪ್ರಾಯಿಸಿದ್ದಾರೆ. ಆದಾಗ್ಯೂ, ಗೆಹ್ಲೋಟ್ ಅವರನ್ನು ಬೆಂಬಲಿಸಿ ಪರ್ಯಾಯ ಸಭೆಯನ್ನು ಕರೆದಿದ್ದ ಪಕ್ಷದ ಕೆಲವು ಪ್ರಮುಖ ನಾಯಕರ ವಿರುದ್ಧ ಶಿಸ್ತುಕ್ರಮಕ್ಕೆ ವರದಿ ಶಿಫಾರಸು ಮಾಡಿದೆ.

ಆದರೆ ಗೆಹ್ಲೋಟ್‌ರಿಗೆ ನಿಷ್ಠರಾಗಿರುವ ಸಚಿವರಾದ ಧರಿವಾಲ್, ಪ್ರತಾಪ್ ಸಿಂಗ್ ಖಚಾರಿವಾಹ ಹಾಗೂ ಕಾಂಗ್ರೆಸ್ ನಾಯಕ ಧರ್ಮೇಂದ್ರ ರಾಥೋಡ್ ವಿರುದ್ಧ ಶಿಸ್ತುಕ್ರಮಕ್ಕೆ ಒಂಭತ್ತು ಪುಟಗಳ ವರದಿಯಲ್ಲಿ ಶಿಫಾರಸು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.ಸಚಿನ್ ಪೈಲಟ್ ಅವರನ್ನು ಮುಂದಿನ ಮುಖ್ಯಮಂತ್ರಿಯನ್ನಾಗಿ ನಿಯೋಜಿಸುವ ಕಾಂಗ್ರೆಸ್ ಹೈಕಮಾಂಡ್‌ನ ಸಂಭಾವ್ಯ ನಡೆಯನ್ನು ವಿರೋಧಿಸಿ ಹಲವಾರು ಗೆಹ್ಲೋಟ್ ಬೆಂಬಲಿಗ ಶಾಸಕರು ರವಿವಾರ ರಾಜೀನಾಮೆಯ ಬೆದರಿಕೆ ಒಡ್ಡಿದ್ದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯುವುದಕ್ಕೆ ಮುಂಚಿತವಾಗಿ ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಬಂಡಾಯ ಭುಗಿಲೆದ್ದಿತ್ತು. 8ನೇ ಪುಟಕ್ಕೆ



## 80ಕ್ಕೂ ಅಧಿಕ ಪಿಎಫ್‌ಐ ಕಾರ್ಯಕರ್ತರು ವಶಕ್ಕೆ?

ಬೆಂಗಳೂರು, ಸೆ.27: ಇತ್ತೀಚೆಗೆ ಎಸ್‌ಡಿಪಿಐ ಹಾಗೂ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್‌ಐ) ಸಂಘಟನೆಯ ನಾಯಕರ ಮೇಲಿನ ಎನ್‌ಐಎ ದಾಳಿ ಖಂಡಿಸಿ ಪ್ರತಿಭಟನೆ ನಡೆಸಿದ್ದು ಸೇರಿದಂತೆ ಕಾನೂನು ಸುವ್ಯವಸ್ಥೆಗೆ ಧಕ್ಕೆ, ಕೋಮುಸೌಹಾರ್ದಕ್ಕೆ ಹಾನಿ ಆರೋಪದಡಿ ರಾಜ್ಯದ ವಿವಿಧ ಭಾಗಗಳಲ್ಲಿ 80ಕ್ಕೂ ಅಧಿಕ ಪಿಎಫ್‌ಐ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಮುಚ್ಚಳಿಕೆ ಪತ್ರ ಬರೆಸಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಮಂಗಳವಾರ ಬೆಳಗ್ಗಿನ ಜಾವ ಏಕಕಾಲದಲ್ಲಿ ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರ ಹಾಗೂ ನಗರ ಪೊಲೀಸ್ ಆಯುಕ್ತರ ವ್ಯಾಪ್ತಿಯಲ್ಲಿ ಠಾಣಾಧಿಕಾರಿ ಒಳಗೊಂಡ ಪೊಲೀಸರ ತಂಡಗಳು ಪಿಎಫ್‌ಐ ಕಾರ್ಯಕರ್ತರ ನಿವಾಸ, ಕಚೇರಿಗಳ ಮೇಲೆ ದಾಳಿ ನಡೆಸಿ 80ಕ್ಕೂ ಅಧಿಕ ಮಂದಿಯನ್ನು ವಶಕ್ಕೆ ಪಡೆದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದವು. ಬಳಿಕ ವಿಚಾರಣೆ ನಡೆಸಿ ಹಲವರಿಂದ ಮುಚ್ಚಳಿಕೆ ಪತ್ರ ಬರೆಸಿಕೊಂಡರೆ, ಕೆಲವರಿಗೆ ಸರಕಾರಿ ಉದ್ಯೋಗಿಗಳು ಅವರ ಪರವಾಗಿ ಶ್ಯೂರಿಟಿ ನೀಡಬೇಕೆಂದು ಸೂಚಿಸಲಾಗಿದೆ. ಅದೇ ರೀತಿ, ಮುಂದಿನ ದಿನಗಳಲ್ಲಿ ಶಾಂತಿ ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಇರಬೇಕು. ಕೋಮುದ್ವೇಷ ಭಾಷಣ, ಮಾತುಗಳನ್ನಾಡಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.




ಪಿಎಫ್‌ಐ ನಾಯಕರ ಹಾಗೂ ಕಾರ್ಯಾಲಯಗಳ ಮೇಲೆ ಎನ್‌ಐಎ ದಾಳಿಯನ್ನು ಖಂಡಿಸಿ ಮಂಗಳೂರಿನಲ್ಲಿ ಸೆಪ್ಟಂಬರ್ 22ರಂದು ಪ್ರತಿಭಟನೆ ನಡೆಸಿದ್ದ ಕಾರ್ಯಕರ್ತರು.

### ಪೊಲೀಸರ ಮುಂಜಾಗ್ರತಾ ಕ್ರಮ

#### ಮುಖ್ಯಮಂತ್ರಿ

ಬೆಂಗಳೂರು, ಸೆ.27: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್‌ಐ) ಕಾರ್ಯಕರ್ತರ ಮೇಲೆ ಪೊಲೀಸರು ನಡೆಸಿರುವುದು ದಾಳಿಯಲ್ಲ. ಪೊಲೀಸರು ಮುಂಜಾಗ್ರತಾ ಕ್ರಮಗಳನ್ನು ತಹಶೀಲ್ದಾರರ ಮೂಲಕ ಕೈಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಮಂಗಳವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸರು ಹತ್ತು ಹಲವಾರು ಮಾಹಿತಿಯ ಆಧಾರದ ಮೇಲೆ ಕೆಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅದನ್ನೇ ಕರ್ನಾಟಕ ಹಾಗೂ ಎಲ್ಲ ರಾಜ್ಯಗಳ ಪೊಲೀಸರು ಮಾಡಿದ್ದಾರೆ. ಎಷ್ಟು ಜನರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಪೊಲೀಸರ ಬಳಿ ಮಾಹಿತಿ ಪಡೆಯಲಾಗುವುದು ಎಂದರು.

## ಕಾನೂನು ಸುವ್ಯವಸ್ಥೆಗೆ ಧಕ್ಕೆ ಸಾಧ್ಯತೆ ಹಿನ್ನೆಲೆ ದಾಳಿ: ಎಡಿಜಿಪಿ



ಈಗಿನ ದಾಳಿ ಮತ್ತು ಎನ್‌ಐಎಗೂ ಸಂಬಂಧವಿಲ್ಲ. ದಾಳಿ ಸಂದರ್ಭದಲ್ಲಿ ಯಾವುದೇ ದಾಖಲೆಗಳನ್ನು ಜಪ್ತಿ ಮಾಡಿಲ್ಲ. ಈ ಹಿಂದೆ ದೊರೆತಿರುವ ಮಾಹಿತಿ ಆಧಾರದ ಮೇಲೆಯೇ ದಾಳಿ, ಶೋಧ ನಡೆಸಲಾಗಿದೆ ಎಂದು ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ತಿಳಿಸಿದ್ದಾರೆ.

ದಾಳಿ ಕುರಿತು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೀದರ್‌ನಿಂದ ಚಾಮರಾಜನಗರದವರೆಗೂ ಎಲ್ಲ ಜಿಲ್ಲೆಗಳಲ್ಲಿಯೂ ದಾಳಿ ನಡೆಸಲಾಗಿದೆ. ವಶಕ್ಕೆ ಪಡೆದುಕೊಂಡ ಪಿಎಫ್‌ಐ ಕಾರ್ಯಕರ್ತರನ್ನು ತಾಲೂಕು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದೆ. ಆನಂತರ, ಐಪಿಸಿ ಸೆಕ್ಷನ್ 107ರಡಿ ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳಲಾಗುವುದು. ವಶಕ್ಕೆ ಪಡೆದ ಮುಖಂಡರು ಮತ್ತು ಕಾರ್ಯಕರ್ತರು ಅಹಿತಕರ ಘಟನೆಯಲ್ಲಿ ಭಾಗಿಯಾಗಕೂಡದು ಎಂದು ಅವರು ಹೇಳಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಿಲ್ಲ ಎನ್ನುವ ರೀತಿ ಪಿಎಫ್‌ಐ ವರ್ತಿಸುತ್ತಿತ್ತು. ಅಶಾಂತಿಯ ವಾತಾವರಣ ಸೃಷ್ಟಿ, ಕುಮ್ಮಕ್ಕು ನೀಡುವ ಚಟುವಟಿಕೆಗಳಲ್ಲಿಯೂ ಆ ಸಂಘಟನೆಯವರಿದ್ದರು. ಹಾಗಾಗಿ, ಮಾಹಿತಿ ಕಲೆ ಹಾಕಿ ಈ ದಾಳಿ ನಡೆಸಲಾಗಿದೆ ಎಂದು ಅಲೋಕ್ ಕುಮಾರ್ ತಿಳಿಸಿದರು.

## ಜನರ ಮುಂದೆ ಸತ್ಯಾಂಶ ಇಡಬೇಕು

#### ಎಚ್‌ಡಿಕೆ ಆಗ್ರಹ

ಬೆಂಗಳೂರು, ಸೆ.27: ರಾಜ್ಯ ಪೊಲೀಸ್ ಇಲಾಖೆಯು ಪಿಎಫ್‌ಐ ಸಂಘಟನೆಯ ಮೇಲೆ ದಾಳಿ ನಡೆಸಿ ಸಂಘಟನೆಯ ಹಲವರನ್ನು ಬಂಧಿಸಿದೆ. ಇದರ ಬಗ್ಗೆ ರಾಜ್ಯ ಸರಕಾರವು ವಾಸ್ತವಾಂಶಗಳನ್ನು ರಾಜ್ಯದ ಜನತೆಯ ಮುಂದೆ ಇಡಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಮಂಗಳವಾರ ನಗರದಲ್ಲಿರುವ ಪಕ್ಷದ ಕಚೇರಿ ಜೆಪಿ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯ ಸರಕಾರದ ಮೇಲೆ ಅನೇಕ ಆರೋಪಗಳಿದ್ದು, ಬಿಎಂಎಸ್ ಶಿಕ್ಷಣ ಟ್ರಸ್ಟ್‌ನಲ್ಲಿ ನಡೆದಿರುವ ಅಕ್ರಮದ ಬಗ್ಗೆ ಸದನದಲ್ಲಿಯೇ ದಾಖಲೆಗಳ ಸಮೇತ ಮಾಹಿತಿ ನೀಡಿದ್ದೇನೆ. ಇದಲ್ಲದೆ, ಅನೇಕ ಹಗರಣ-ಅಕ್ರಮಗಳ ಬಗ್ಗೆ ಜನರು ಬೇಸರ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಒಂದು ವೇಳೆ ಪಿಎಫ್‌ಐ ಮೇಲೆ ನಡೆದಿರುವ ದಾಳಿ ಕುರಿತು ನೈಜ ಮಾಹಿತಿ ಕೊಡದಿದ್ದರೆ, ಆರೋಪ ಮತ್ತು ಹಗರಣಗಳ ಕುರಿತು ಜನರ ಗಮನ ಬೇರೆಡೆಗೆ ಸೆಳೆಯಲು ಈ ದಾಳಿ ನಡೆಸಲಾಗಿದೆ ಎಂದು ಭಾವಿಸಬೇಕಾಗುತ್ತದೆ ಎಂದು ಕುಮಾರಸ್ವಾಮಿ ತಿಳಿಸಿದರು. ಎರಡು ದಿನಗಳಿಂದ ಕರ್ನಾಟಕವೂ ಸೇರಿ ರಾಷ್ಟ್ರಮಟ್ಟದಲ್ಲಿ ಪಿಎಫ್‌ಐ ಮೇಲೆ ಎನ್‌ಐಎಯಿಂದ ದಾಳಿ ಆಗುತ್ತಿದೆ. ಆ ದಾಳಿ ಸಮಯದಲ್ಲಿ ಈ ಸಂಘಟನೆಯ ಪ್ರಮುಖ ವ್ಯಕ್ತಿಗಳ ಬಂಧನವೂ ಆಗಿತ್ತು. ಮತ್ತೆ ರಾಜ್ಯದ ನಾನಾ ಭಾಗದಲ್ಲಿ ಕಳೆದ ಮಧ್ಯರಾತ್ರಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಇದು ಸರಕಾರದ ಆದೇಶವೇ ಅಥವಾ ಪೊಲೀಸರ ಮಾಹಿತಿ ಆಧಾರದಲ್ಲಿ ದಾಳಿ ಆಗಿದೆಯೇ ಎಂದು ಅವರು ಪ್ರಶ್ನಿಸಿದರು. 'ಕಳೆದ ರಾತ್ರಿ ಏಕಾಏಕಿ ದಾಳಿ ಆಗಿರುವುದು ಸಣ್ಣಪುಟ್ಟ ಕಾರ್ಯಕರ್ತರಿಗೆ ಆತಂಕ ಉಂಟು ಮಾಡಿದೆ ಎನ್ನುವುದು ನಿಜ. ಈ ದಾಳಿಯ ವೇಳೆ ಏನು ಸಿಕ್ಕಿದೆ. ಯಾವ ದಾಖಲೆ ಇದೆ ಎಂಬುದನ್ನು ಜನರ ಮುಂದೆ ಇಡಬೇಕು. ದಾಳಿಯ ಬಗ್ಗೆ ಸತ್ಯ ಹೇಳದೇ ಹೋದರೆ ಕಾಂಗ್ರೆಸ್‌ನ 'ಪೇ ಸಿಎಂ ಅಭಿಯಾನ' ಡೈವರ್ಟ್ ಮಾಡುವುದಕ್ಕೆ ಸರಕಾರ ಹೀಗೆ ಮಾಡಿದೆ ಎಂಬ ಅನುಮಾನ ಜನರಿಗೆ ಬರುತ್ತದೆ' ಎಂದು ಕುಮಾರಸ್ವಾಮಿ ಹೇಳಿದರು.

### ■ ನೋಟು ನಿಷೇಧ

## ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ಇಂದು ಆರಂಭ

ಹೊಸದಿಲ್ಲಿ, ಸೆ.27: ನೋಟು ನಿಷೇಧ ಕ್ರಮದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಸರ್ವೋಚ್ಚ ನ್ಯಾಯಾಲಯವು,ಪ್ರಧಾನಿ ನರೇಂದ್ರ ಮೋದಿಯವರು ಈ ವಿವಾದಾಸ್ಪದ ಕ್ರಮವನ್ನು ಪ್ರಕಟಿಸಿದ ಆರು ವರ್ಷಗಳ ಬಳಿಕ ಕೊನೆಗೂ ಕೈಗೆತ್ತಿಕೊಳ್ಳಲಿದೆ.

ನ್ಯಾ.ಅಬ್ದುಲ್ ನಝೀರ್ ನೇತೃತ್ವದ ಐವರು ನ್ಯಾಯಾಧೀಶರ ಸಂವಿಧಾನ ಪೀಠವು ಬುಧವಾರ ಅರ್ಜಿಗಳ ವಿಚಾರಣೆಯನ್ನು ಆರಂಭಿಸಲಿದೆ. ಪೀಠವು ವಿವರವಾದ ವಿಚಾರಣೆಗಾಗಿ ದಿನಾಂಕವನ್ನು ನಿಗದಿಗೊಳಿಸುವ ನಿರೀಕ್ಷೆಯಿದೆ.

ನೋಟು ನಿಷೇಧ ಕ್ರಮದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿದ್ದ ಅರ್ಜಿಗಳನ್ನು 2016,ಡಿ.16ರಂದು ಸಂವಿಧಾನ ಪೀಠಕ್ಕೆ ಉಲ್ಲೇಖಿಸಲಾಗಿತ್ತು,ಆದರೆ ಈವರೆಗೂ ಪೀಠವು ರಚನೆಯಾಗಿರಲಿಲ್ಲ.

### ವಿಜ್ಞಾನಿಗಳಿಗೆ ನೀಡುವ 300ಕ್ಕೂ ಅಧಿಕ ಪ್ರಶಸ್ತಿಗಳಿಗೆ ಕತ್ತರಿ

## ನೊಬೆಲ್ ರೀತಿಯಲ್ಲಿ 'ವಿಜ್ಞಾನ ರತ್ನ'ಕ್ಕೆ ಕೇಂದ್ರದ ಚಿಂತನೆ

ಹೊಸದಿಲ್ಲಿ,ಸೆ.27: ಎಂಟು ವಿಜ್ಞಾನ ಮತ್ತು ಆರೋಗ್ಯ ಇಲಾಖೆಗಳು ನೀಡುತ್ತಿರುವ 300ಕ್ಕೂ ಅಧಿಕ ಪ್ರಶಸ್ತಿಗಳನ್ನು ನಿಲ್ಲಿಸುವಂತೆ ಮತ್ತು ನಿಜವಾಗಿಯೂ ಅರ್ಹ ಅಭ್ಯರ್ಥಿಗಳಿಗಾಗಿ ಉನ್ನತ ಸ್ಥಾನಮಾನದ ಪ್ರಶಸ್ತಿಯನ್ನು ಸ್ಥಾಪಿಸುವಂತೆ ಕೇಂದ್ರ ಗೃಹಸಚಿವಾಲಯವು ಅವುಗಳಿಗೆ ಸೂಚಿಸಿದೆ.

ಗೃಹ ಕಾರ್ಯದರ್ಶಿ ಅಜಯ ಭಲ್ಲಾ ಅವರು ಸೆ.16ರಂದು ವಿಜ್ಞಾನ ಮತ್ತು ಆರೋಗ್ಯ ಇಲಾಖೆಗಳ ಕಾರ್ಯದರ್ಶಿಗಳೊಂದಿಗೆ ನಡೆಸಿದ ಸಭೆಯಲ್ಲಿ ಸರಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರೊಂದಿಗೆ ಸಮಾಲೋಚಿಸಿ ನೊಬೆಲ್ ಪುರಸ್ಕಾರದ ಮಾದರಿಯಲ್ಲಿ ವಿಜ್ಞಾನಿಗಳಿಗಾಗಿ 'ವಿಜ್ಞಾನ ರತ್ನ'ಪ್ರಶಸ್ತಿಯನ್ನು ಸ್ಥಾಪಿಸುವಂತೆ ಸಲಹೆ ನೀಡಿದ್ದಾರೆ.

ಪ್ರಶಸ್ತಿ ವಿಜೇತರ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವಸ್ತುನಿಷ್ಠತೆಯ ಮೇಲೆ ಗಮನವನ್ನು ಕೇಂದ್ರೀಕರಿಸುವ ಮೂಲಕ ವಿಶ್ವಾಸಾರ್ಹತೆ ಮತ್ತು ನಂಬಿಕೆಯನ್ನು ಮೂಡಿಸಲು ವಿವಿಧ ಕ್ರಮಗಳ ಜಾರಿಗೆ ಪ್ರಧಾನಿ ನರೇಂದ್ರ ಮೋದಿಯವರು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ. 8ನೇ ಪುಟಕ್ಕೆ

## ದ್ವೇಷ ಭಾಷಣ: ಕಾರಂತ್ ವಿಚಾರಣೆಗೆ ಕಾನೂನು ಅಧಿಕಾರಿಗಳ ಸಮ್ಮತಿ

■ ಜಿ.ಮಹಾಂತೇಶ್

**ವಿಶೇಷ ವರದಿ**

ಬೆಂಗಳೂರು, ಸೆ.27: ಕಳೆದ ಐದು ವರ್ಷಗಳ ಹಿಂದೆ ಪುತ್ತೂರಿನ ಕಸ್ಬಾ ಗ್ರಾಮದ ಕಿಲ್ಲೆ ಮೈದಾನದಲ್ಲಿ ಹಿಂದೂ ಜಾಗರಣ ವೇದಿಕೆಯ ಜಗದೀಶ್ ಕಾರಂತ್ ವಿವಾದಾತ್ಮಕ ಮತ್ತು ಪ್ರಚೋದನಾಕಾರಿ ಭಾಷಣ ಮಾಡಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಲು ಪೂರ್ವಾನುಮತಿ ನೀಡಬಹುದು ಎಂದು ಕಾನೂನು ಅಧಿಕಾರಿಗಳು ಸರಕಾರಕ್ಕೆ ಅಭಿಪ್ರಾಯ ನೀಡಿರುವುದು ಇದೀಗ ಬಹಿರಂಗವಾಗಿದೆ.

ಜಗದೀಶ್ ಕಾರಂತ್ ಅವರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಬೇಕು ಎಂದು ವಿಧಾನಪರಿಷತ್‌ನ ಸದಸ್ಯ ಎನ್.ರವಿಕುಮಾರ್ ಮತ್ತಿತರರು ಸರಕಾರದ ಮೇಲೆ ಒತ್ತಡ ಹೇರಿರುವ ಬೆನ್ನಲ್ಲೇ ಪುತ್ತೂರಿನ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಲು ಪೂರ್ವಾನುಮತಿ ನೀಡಲು ಕಾನೂನು ಅಧಿಕಾರಿಗಳು ಸಮ್ಮತಿ ವ್ಯಕ್ತಪಡಿಸಿರುವುದು ಮಹತ್ವ ಪಡೆದುಕೊಂಡಿದೆ. ಈ ಕುರಿತು 'the-file.in'ಗೆ ಕೆಲ ಟಿಪ್ಪಣಿ ಹಾಳೆಗಳು ಲಭ್ಯವಾಗಿವೆ.




ಜಗದೀಶ್ ಕಾರಂತ್

ಕಾನೂನು ಅಧಿಕಾರಿಯ ಅಭಿಪ್ರಾಯವಿದು: ಪ್ರಸಕ್ತ ಪ್ರಕರಣದ ಸಂಪೂರ್ಣ ಕಡತ, ಮಂಗಳೂರು ಪಶ್ಚಿಮ ವಲಯದ ಡಿಜಿ/ಐಜಿಪಿ, ಅವರು ಸಲ್ಲಿಸಿದ್ದ ಪ್ರಸ್ತಾವನೆಗಳು, ದೋಷಾರೋಪಣೆ ಪಟ್ಟಿ ಹಾಗೂ ಇತರ ದಾಖಲಾತಿಗಳನ್ನು ಇಲಾಖೆಯು ಪರಿಶೀಲಿಸಿದೆ. ಪ್ರಕರಣದ ಪರಿಷ್ಕೃತ ಪ್ರಸ್ತಾವನೆ, ದೋಷಾರೋಪಣೆ ಪಟ್ಟಿಯೊಂದಿಗೆ ವಿವಾದಿತ ಭಾಷಣದ ಆಡಿಯೊ, ವೀಡಿಯೊ ಚಿತ್ರೀಕರಣಗಳನ್ನೊಳಗೊಂಡ ಸೀಡಿಯನ್ನು ಪರಿಶೀಲಿಸಲಾಯಿತು.

ಆರೋಪಿ ಪ್ರತಿಭಟನಾ ಸಭೆಯಲ್ಲಿ ವಿವಾದಾತ್ಮಕ ಹಾಗೂ ಪ್ರಚೋದನಾಕಾರಿ ಭಾಷಣ ಮಾಡಿರುವುದು ಕಂಡುಬಂದಿರುತ್ತದೆ. ತನಿಖಾಧಿಕಾರಿಗಳೂ ಸಲ್ಲಿಸಿರುವ ಪುನರ್ ನಿವೇದನೆಯ ಆಧಾರದಲ್ಲಿ ಹಾಗೂ ದೋಷಾರೋಪ ಪಟ್ಟಿಯೊಂದಿಗೆ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಹಿನ್ನೆಲೆಯಲ್ಲಿ ಐಪಿಸಿ ಕಲಂ 153(ಎ) 505(1)(ಬಿ) 505(2), 189, 504 ಅಡಿಯಲ್ಲಿ ಆರೋಪಿ ವಿರುದ್ಧದ ಆರೋಪಗಳು ದೃಢಪಟ್ಟಿವೆ.

ಆರೋಪಿಯನ್ನು ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಲು ಸಿಆರ್‌ಪಿಸಿ ಕಲಂ 196(1) ಮತ್ತು 196(1ಎ) ಅಡಿ ಸರಕಾರವು ಪೂರ್ವಾನುಮತಿ ನೀಡಬಹುದು ಎಂದು ಹಿರಿಯ ಕಾನೂನು ಅಧಿಕಾರಿ ಅವರು 2022ರ ಸೆ.15ರಂದು ಅಭಿಪ್ರಾಯ ನೀಡಿರುವುದು ಟಿಪ್ಪಣಿ ಹಾಳೆಯಿಂದ ಗೊತ್ತಾಗಿದೆ.

ಪುತ್ತೂರು ತಾಲೂಕು ಕಸ್ಬಾ ಗ್ರಾಮದ ಕಿಲ್ಲೆ ಮೈದಾನದಲ್ಲಿ ಪುತ್ತೂರು ಹಿಂದೂ ಜಾಗರಣಾ ವೇದಿಕೆಯು ಸಂಪ್ಯ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರಾದ ಅಬ್ದುಲ್ ಖಾದರ್, ಚಂದ್ರ ಮತ್ತು ರುಕ್ಮಯ್ಯ ಅವರ ವಿರುದ್ಧ 2017ರ ಸೆ.15ರಂದು ಪ್ರತಿಭಟನಾ ಸಭೆಯನ್ನು ಆಯೋಜಿಸಿತ್ತು.

## ಎಚ್‌ಎಎಲ್‌ಗೆ ಮತ್ತೊಂದು ಸದವಕಾಶ: ಮುರ್ಮು




ಬೆಂಗಳೂರು, ಸೆ.27: ಕ್ರಯೋಜೆನಿಕ್ ಇಂಜಿನ್‌ಗಳನ್ನು ದೇಶದಲ್ಲೇ ಉತ್ಪಾದಿಸುವ ಮೂಲಕ ಬೆಂಗಳೂರಿನ ಎಚ್‌ಎಎಲ್‌ಗೆ ಮತ್ತೊಮ್ಮೆ ತನ್ನ ಸಾಮರ್ಥ್ಯ ತೋರಿಸುವ ಸದವಕಾಶ ಒದಗಿ ಬಂದಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಮಂಗಳವಾರ ನಗರದ ಎಚ್‌ಎಎಲ್‌ನಿಂದ ಪ್ರಾಯೋಗಿಕ ಕ್ರಯೋಜೆನಿಕ್ ಉತ್ಪಾದನಾ ಸೌಲಭ್ಯ ಉದ್ಘಾಟನೆ ಹಾಗೂ ರಾಷ್ಟ್ರೀಯ ವೈರಾಲಜಿ ಕೇಂದ್ರದ ಶಂಕುಸ್ಥಾಪನೆ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡಿದರು.

ಅತ್ಯಾಧುನಿಕ ತಂತ್ರಜ್ಞಾನದಡಿ ಕ್ರಯೋಜೆನಿಕ್ ಇಂಜಿನ್ ಉತ್ಪಾದನೆ ದೇಶದ ವಿಜ್ಞಾನ ಕ್ಷೇತ್ರದಲ್ಲಿ ಒಂದು ದೊಡ್ಡ ಮೈಲಿಗಲ್ಲು. ಕ್ರಯೋಜೆನಿಕ್ ಇಂಜಿನ್ ಉತ್ಪಾದಿಸುತ್ತಿರುವ ಜಗತ್ತಿನ ಆರು ದೇಶದಲ್ಲಿ ಭಾರತವೂ ಒಂದು. ಅತ್ಯಾಧುನಿಕ ತಂತ್ರಜ್ಞಾನದಡಿ ಕ್ರಯೋಜೆನಿಕ್ ಇಂಜಿನ್ ಉತ್ಪಾದನಾ ಕಾರ್ಯ ಒಂದು ದೊಡ್ಡ ಮೈಲಿಗಲ್ಲು ಎಂದು ರಾಷ್ಟ್ರಪತಿ ಬಣ್ಣಿಸಿದರು.

ಕ್ರಯೋಜೆನಿಕ್ ಇಂಜಿನ್ ಬಾಹ್ಯಾಕಾಶ ಉಪಗ್ರಹ ವಾಹಕಗಳಿಗೆ ಅತಿ ಅವಶ್ಯಕ. ಅಲ್ಲದೆ, ಎಚ್‌ಎಎಲ್ 1993 ರಿಂದಲೂ ಇಸ್ರೋದ ಬಾಹ್ಯಾಕಾಶ ಸಂಶೋಧನೆಗಳಿಗೆ ಒತ್ತಾಸೆಯಾಗಿ ನಿಂತಿದೆ ಎಂದು ಅವರು ಹೇಳಿದರು.

Cyan Magenta Yellow Black

# ವಿವಿಧ ಜಿಲ್ಲೆಗಳಲ್ಲಿ ಪಿಎಫ್‌ಐ, ಎಸ್‌ಡಿಪಿಐ ಮುಖಂಡರ ಮನೆಗಳ ಮೇಲೆ ಪೊಲೀಸ್ ದಾಳಿ

## ಕೋಲಾರದಲ್ಲಿ 7, ಮೈಸೂರಿನಲ್ಲಿ 3, ಚಾಮರಾಜನಗರದಲ್ಲಿ ಇಬ್ಬರು ಕಾರ್ಯಕರ್ತರ ವಶಕ್ಕೆ

**ಕೋಲಾರ,** ಸೆ.27: ಪಿ.ಎಫ್‌ಐ ಹಾಗೂ ಎಸ್‌ಡಿಪಿಐನ ಏಳು ಮಂದಿ ಮುಖಂಡರನ್ನು ಮಂಗಳವಾರ ಬೆಳಗ್ಗೆ ಕೋಲಾರ ಪೊಲಿಸರು ವಶಕ್ಕೆ ಪಡೆದಿರುವುದು ವರದಿಯಾಗಿದೆ.

ನಗರ ಠಾಣೆಯಲ್ಲಿ ಐದು ಮಂದಿ ಮತ್ತು ಗಲ್‌ಪೇಟೆ ಠಾಣೆ ವ್ಯಾಪ್ತಿಯಲ್ಲಿ ಇಬ್ಬರನ್ನು ಬಂಧಿಸಲಾಗಿದೆ. ಗಲಭೆ ಸೃಷ್ಟಿಗೆ ಯತ್ನ, ಅಕ್ರಮ ಕೂಟ, ಗಲಭೆಗೆ ಪ್ರಚೋದನೆ ಮಾಡಿದ ಆರೋಪದಡಿ, ವಿನಾಯಕನಗರದ ನಿವಾಸಿ ಇಮ್ತಿಯಾಝ್ ಬಿನ್ ಅಬ್ದುಲ್ ರಶೀದ್ (36) ಪಿಎಫ್‌ಐ ಸಂಘಟನೆ ಜಿಲ್ಲಾಧ್ಯಕ್ಷ, ಎಸ್.ಎಸ್.ಮಖಾನ್‌ನ ಸಿದ್ದಿಕ್ ಪಾಷಾ ಬಿನ್ ಲೇಟ್ ಬಹದ್ದೂರ್ ಪಾಷಾ, ವಾಸಿಂ ಪಾಷಾ ಬಿನ್ ಅನ್ಸರ್ ಪಾಷಾ(28), ಅಲ್ಲಾ ಬಕ್ಷ್ ಬಿನ್ ಇಲಿಯಾಜ್ ಪಾಷಾ (28), ಮಿಲ್ಲತ್ ನಗರದ ನಯಾಝ್ ಪಾಷಾ ಬಿನ್ ಮೆಹಬೂಬ್ ಪಾಷಾ (24), ಶಹೀನ್ ಷಾ ನಗರದ ಶಹಬಾಜ್ ಪಾಷಾ (30), ಶಾಹೀದ್ ನಗರದ ನೂರ್ ಪಾಷಾ(31) ಇವರನ್ನು ವಶಕ್ಕೆ ಪಡೆಯಲಾಗಿದೆ.

ವೈದ್ಯಕೀಯ ಪರೀಕ್ಷೆ ನಂತರ ತಹಶೀಲ್ದಾರ್ ನಾಗರಾಜ್ ಎದುರು ಹಾಜರುಪಡಿಸಿ ತಹಶೀಲ್ದಾರ್ ಆದೇಶದ ಮೇರೆಗೆ ಮುನ್ನೆಚ್ಚರಿಕೆಯ ಕ್ರಮವಾಗಿ ಏಳು ಜನರನ್ನು ಸೆಕ್ಷನ್ ASPA 107, 151, ಅಡಿ ಬಂಧಿಸಿ ವಿಚಾರಣೆ ಮುಂದುವರಿಸಿದ್ದಾರೆ ಎಂದು ಬಂಧನದ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೇವರಾಜ್ ಮಾಧ್ಯಮಗಳಿಗೆ ತಿಳಿಸಿದರು.

ಇದೇ ವೇಳೆ ತಹಶೀಲ್ದಾರ್ ಅವರನ್ನು ಭೇಟಿ ಮಾಡಿದ ಮಾಜಿ ಸಚಿವ ವರ್ತೂರ್ ಪ್ರಕಾಶ್ ನಡೆ ಚರ್ಚೆಗೆ ಗ್ರಾಸವಾಗಿದೆ.

**ಮೈಸೂರು,** ಸೆ.27: ಗುಪ್ತಚರ ವರದಿ ಹಿನ್ನೆಲೆಯಲ್ಲಿ ಮೈಸೂರಿನ ಪಿಎಫ್‌ಐ ಜಿಲ್ಲಾಧ್ಯಕ್ಷ ಸೇರಿದಂತೆ ಮೂವರನ್ನು ಸ್ಥಳೀಯ ಪೊಲೀಸರು ವಶಕ್ಕೆ ಪಡೆದು ಗುಪ್ತ ಸ್ಥಳದಲ್ಲಿ ವಿಚಾರಣೆ ನಡೆಸುತ್ತಿರುವುದು ವರದಿಯಾಗಿದೆ.

ಕಳೆದ ವಾರ ದೇಶಾದ್ಯಂತ ಪಿಎಫ್‌ಐ ಸಂಘಟನೆಯ ಕಚೇರಿ ಮೇಲೆ ಹಾಗೂ ಮನೆಗಳ ಮೇಲೆ ಎನ್‌ಐಎ ಅಧಿಕಾರಿಗಳು ದಾಳಿ ಮಾಡಿ ಪಿಎಫ್‌ಐ ಕಾರ್ಯಕರ್ತರು ಹಾಗೂ ಮುಖಂಡರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದು, ಇದರ ಬೆನ್ನಲ್ಲೆ ರಾಜ್ಯದ ಪೊಲೀಸ್ ಇಲಾಖೆ ಪಿಎಫ್‌ಐ ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದಾರೆ.

ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಪಿಎಫ್‌ಐ ಜಿಲ್ಲಾಧ್ಯಕ್ಷ ಬಿಲಾಲ್ ಷರೀಫ್ ಅವರನ್ನು ಕಲ್ಯಾಣಗಿರಿ ನಿವಾಸದಲ್ಲಿ ವಶಕ್ಕೆ ಪಡೆದು ಗುಪ್ತ ಸ್ಥಳದಲ್ಲಿ ವಿಚಾರಣೆ ನಡೆಸುತ್ತಿದ್ದಾರೆ. ಮತ್ತೊಬ್ಬ ಮೈಸೂರು ಜಿಲ್ಲಾ ಪಿಎಫ್‌ಐ ಮಾಜಿ ಕಾರ್ಯದರ್ಶಿ ಜಾಫರ್ ಷರೀಫ್ ಹಾಗೂ ಪಿಎಫ್‌ಐ ಸಕ್ರಿಯ ಕಾರ್ಯಕರ್ತ ಫೈರೋಝುಲ್ಲಾ ಷರೀಫ್ ಅವರನ್ನು ಮನೆಗಳಲ್ಲಿ ಮಂಗಳವಾರ ಬೆಳಗ್ಗೆ ವಶಕ್ಕೆ ಪಡೆದು ಗುಪ್ತ ಸ್ಥಳದಲ್ಲಿ ವಿಚಾರಣೆ ನಡೆಸಿದ್ದಾರೆ ಎನ್ನಲಾಗಿದೆ.

**ಚಾಮರಾಜನಗರ,** ಸೆ.27: ಚಾಮರಾಜನಗರ ಪಟ್ಟಣದಲ್ಲಿ ಪೊಲೀಸರು ಪಿಎಫ್‌ಐ ಕಾರ್ಯಕರ್ತರ ನಿವಾಸಗಳ ಮೇಲೆ ದಾಳಿ ನಡೆಸಿ ಜಿಲ್ಲಾಧ್ಯಕ್ಷ ಹಾಗೂ ಕಾರ್ಯದರ್ಶಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದು ವರದಿಯಾಗಿದೆ.

ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ನೇತೃತ್ವದಲ್ಲಿ ಪಟ್ಟಣದ ಗಾಳೀಪುರ, ವರದರಾಜಪುರ ಸೇರಿದಂತೆ ಕೆಲವು ಬಡಾವಣೆಯಲ್ಲಿ ದಾಳಿ ನಡೆಸಿದ ಪೊಲೀಸರು ಪಿಎಫ್‌ಐ ಜಿಲ್ಲಾಧ್ಯಕ್ಷ ಕಫೀಲ್ ಅಹ್ಮದ್ ಹಾಗೂ ಕಾರ್ಯದರ್ಶಿ ಸುಹೇಬ್ ಖಾನ್ ರವರನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಧೀಶರು ಬಂಧಿತರಿಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ನೀಡಿದ್ದಾರೆ.

## ಪಿಎಫ್‌ಐ ಮಂಡ್ಯ ಜಿಲ್ಲಾಧ್ಯಕ್ಷ ಸೇರಿ ಮೂವರು ಕಾರ್ಯಕರ್ತರ ಬಂಧನ

**ಮಂಡ್ಯ,** ಸೆ.27: ಪಿಎಫ್‌ಐ ಜಿಲ್ಲಾಧ್ಯಕ್ಷ ಇರ್ಫಾನ್ ಪಾಷಾ ಅವರನ್ನು ನಗರದ ಗುತ್ತಲು ಬಡಾವಣೆಯ ತನ್ನ ಮನೆಯಲ್ಲಿ ಮಂಗಳವಾರ ಮುಂಜಾನೆ ಪೊಲೀಸರು ಬಂಧಿಸಿದ್ದು, ಇದನ್ನು ವಿರೋಧಿಸಿ ಪ್ರತಿಭಟಿಸಿದ ಮೂವರು ಕಾರ್ಯಕರ್ತರನ್ನೂ ಬಂಧಿಸಿರುವುದು ವರದಿಯಾಗಿದೆ.

ಎಸ್ಪಿ ಎನ್.ಯತೀಶ್ ನೇತೃತ್ವದ ಪೊಲೀಸರ ತಂಡ ಮಂಗಳವಾರ ಬೆಳಗ್ಗೆ ಇರ್ಫಾನ್ ಅವರನ್ನು ಬಂಧಿಸಿ ಪೂರ್ವ ಪೊಲೀಸ್ ಠಾಣೆಗೆ ಕರೆದೊಯ್ದರು. ಸ್ಥಳಕ್ಕೆ ಆಗಮಿಸಿದ ಕಾರ್ಯಕರ್ತರು ಪ್ರತಿಭಟಿಸಿದರು. ನಂತರ, ಇರ್ಫಾನ್ ಅವರನ್ನು ತಹಶೀಲ್ದಾರ್ ಮುಹಮ್ಮದ್ ಕುಂಞ ಅವರ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಯಾವುದೇ ಮುನ್ಸೂಚನೆ ನೀಡದೆ ಸಂಘಟನೆಯ ಅಧ್ಯಕ್ಷರನ್ನು ಬಂಧಿಸಿರುವುದು ಖಂಡನೀಯವೆಂದು ಕಾರ್ಯಕರ್ತರು ಪ್ರತಿಭಟಿಸಿ ಧಿಕ್ಕಾರ ಕೂಗಿದರು. ಆಗ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಈ ವೇಳೆ ಇಬ್ರಾಹಿಂ, ದಾದಾಪೀರ್ ಹಾಗೂ ಮುಖ್ತಾರ್ ಅಹ್ಮದ್ ಅವರನ್ನೂ ಪೊಲೀಸರು ಬಂಧಿಸಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಸಾದತ್ ಪಾಷಾ ಮಾತನಾಡಿ, ಪಿಎಫ್‌ಐ ಅಧ್ಯಕ್ಷರನ್ನು ಬಂಧಿಸಿರುವ ಕ್ರಮ ಪ್ರಶ್ನಿಸಿದ ಮೂವರು ಕಾರ್ಯಕರ್ತರನ್ನೂ ಬಂಧಿಸಿ ಸಂಘಟನೆಯನ್ನು ಹತ್ತಿಕ್ಕುವ ಕೆಲಸವನ್ನು ಪೊಲೀಸರು ಮಾಡುತ್ತಿದ್ದಾರೆ. ಸಂಘಟನೆ ಕಾನೂನು ವಿರೋಧಿ ಚಟುವಟಿಕೆ ನಡೆಸುತ್ತಿಲ್ಲ. ಎಷ್ಟು ಜನರನ್ನು ಬಂಧಿಸಿದರೂ ಭಯಪಡುವುದಿಲ್ಲ. ಕಾನೂನು ಹೋರಾಟದ ಮೂಲಕ ನಮ್ಮ ಮುಖಂಡರನ್ನು ಬಿಡುಗಡೆ ಮಾಡಿಸಿಕೊಂಡು ಬರುತ್ತೇವೆ ಎಂದರು.

## ವಂಚನೆ ಆರೋಪ: ಇಬ್ಬರ ಬಂಧನ

ಕೊಳ್ಳೇಗಾಲ, ಸೆ.27: ಮೊದಲು ಅಸಲಿ ಚಿನ್ನ ತೋರಿಸಿ ಬಳಿಕ ಆಭರಣ ವ್ಯಾಪಾರಿಗಳಿಗೆ ತಿಳಿಯದಂತೆ ನಕಲಿ ಚಿನ್ನ ಕೊಟ್ಟು ವಂಚಿಸುತ್ತಿದ್ದ ಆರೋಪದಡಿ ಇಬ್ಬರು ಮಹಿಳೆಯರನ್ನು ಕೊಳ್ಳೇಗಾಲ ಪೊಲೀಸರು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಟಿ.ಪಿ. ಶಿವಕುಮಾರ್ ತಿಳಿಸಿದ್ದಾರೆ.

ಕೊಳ್ಳೇಗಾಲ ಪಟ್ಟಣದ ಪೊಲೀಸ್ ಠಾಣೆ ಉಪ ವಿಭಾಗದ ಉಪಾಧೀಕ್ಷಕರಾದ ಕಚೇರಿಯಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನ ಸೇಲಂ ಮೂಲದ ಧನಂ(54) ಹಾಗೂ ವಸಂತ(36) ಬಂಧಿತ ಮಹಿಳೆಯರು. ಕೆಲವು ದಿನಗಳ ಹಿಂದೆಯಷ್ಟೆ ಕೊಳ್ಳೇಗಾಲದ ವೈವಿಧ್ಯ ಜುವೆಲರ್ಸ್ ನಲ್ಲಿ ವ್ಯಾಪಾರ ಮಾಡಲು ಬಂದ ಈ ಇಬ್ಬರು ಮಹಿಳೆಯರು ಮೊದಲು ಅಸಲಿ ಒಡವೆಗಳನ್ನು ತೋರಿಸಿ ಬಳಿಕ ಮಾಲಕನಿಗೆ ತಿಳಿಯದಂತೆ ನಕಲಿ ಚಿನ್ನ ಕೊಟ್ಟು ಬರೋಬ್ಬರಿ 71 ಗ್ರಾಂ ಚಿನ್ನ ಖರೀದಿಸಿ ಯಾಮಾರಿಸಿದ್ದರು ಎಂದು ತಿಳಿಸಿದರು.

ಈ ಇಬ್ಬರನ್ನು ಬಂಧಿಸಿ 151 ಗ್ರಾಂ ಚಿನ್ನ ವಶಪಡಿಸಿಕೊಂಡಿದ್ದು ಇದೇ ರೀತಿ ಇವರ ವಿರುದ್ಧ ದಾಖಲಾಗಿದ್ದ ಮೂರು ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಮಾಹಿತಿ ನೀಡಿದರು.

## ಚಿನ್ನಾಭರಣ ಕಳವು: ಮಹಿಳೆ ಬಂಧನ

ಬೆಂಗಳೂರು, ಸೆ.27: ಕೆಲಸ ಮಾಡುವ ಮನೆಯಲ್ಲಿಯೇ ಚಿನ್ನಾಭರಣ ಕಳವು ಮಾಡಿದ ಆರೋಪದಡಿ ಮಹಿಳೆಯೊಬ್ಬರನ್ನು ಅನ್ನಪೂರ್ಣೇಶ್ವರಿ ನಗರ ಠಾಣಾ ಪೊಲೀಸರು ಬಂಧಿಸಿರುವುದು ವರದಿಯಾಗಿದೆ.

ಶಿವಮೊಗ್ಗದ ವೆಂಕಟೇಶ ನಗರದ ಉಮಾದೇವಿ(43) ಬಂಧಿತ ಆರೋಪಿ. ಅನ್ನಪೂರ್ಣೇಶ್ವರಿ ನಗರದ ಅಪರ್ಣಾ ಅವರು ತಮ್ಮ ವೃದ್ಧ ತಂದೆಯನ್ನು ನೋಡಿಕೊಳ್ಳಲು ಕೆಲಸಕ್ಕೆ ಆರೋಪಿ ಮಹಿಳೆಯನ್ನು ನೇಮಕ ಮಾಡಿಕೊಂಡಿದ್ದರು ಎಂದು ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಆದರೆ, ಆರೋಪಿಯು ಮನೆಯಲ್ಲಿ ಯಾರೂ ಇಲ್ಲದಿರುವ ಸಮಯದಲ್ಲಿ ಸೆ.21ರಂದು ನಗದು, ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದಳು ಎನ್ನಲಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿದ ಅನ್ನಪೂರ್ಣೇಶ್ವರಿ ನಗರ ಠಾಣಾ ಪೊಲೀಸರು ಆಕೆಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, 230 ಗ್ರಾಂಚಿನ್ನ, 750 ಗ್ರಾಂ ಬೆಳ್ಳಿಯ ಆಭರಣಗಳು ಹಾಗೂ 5.01 ಲಕ್ಷ ರೂ. ನಗದು ಸೇರಿ ಒಟ್ಟು 15 ಲಕ್ಷ ರೂ.ಮೌಲ್ಯದ ಸೊತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

## ಜೂಜಾಟ: 9 ಮಂದಿ ಬಂಧನ

ಬೆಂಗಳೂರು, ಸೆ.27: ಜೂಜಾಟ ಆಡುತ್ತಿದ್ದ ಆರೋಪದಡಿ 9 ಮಂದಿಯನ್ನು ಬಂಧಿಸಿರುವ ಸಿಸಿಬಿ ಪೊಲೀಸರು 84 ಸಾವಿರ 740 ರೂ. ಗಳನ್ನು ವಶಪಡಿಸಿಕೊಂಡಿರುವುದು ವರದಿಯಾಗಿದೆ.

ಚಂದ್ರಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಜೂಜಾಟದಲ್ಲಿ ತೊಡಗಿದ್ದ ಖಚಿತ ಮಾಹಿತಿಯನ್ನು ಆಧರಿಸಿ ದಾಳಿ ನಡೆಸಿ 9 ಮಂದಿಯನ್ನು ಬಂಧಿಸಿದ್ದಾರೆ.

ಈ ಸಂಬಂಧ ಚಂದ್ರಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

## ಕಾರು ಢಿಕ್ಕಿ: ಐವರಿಗೆ ಗಾಯ

ಮಳವಳ್ಳಿ, ಸೆ.27: ಕಾರೊಂದು ಅಪರಿಚಿತ ವಾಹನಕ್ಕೆ ಕಾರು ಢಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಐವರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ಸಂಜೆ ಪಟ್ಟಣದ ಮದ್ದೂರು-ಮಳವಳ್ಳಿ ಮುಖ್ಯರಸ್ತೆಯಲ್ಲಿರುವ ದೊಡ್ಡಕೆರೆ ಏರಿಯ ಮೇಲೆ ನಡೆದಿರುವುದು ವರದಿಯಾಗಿದೆ.

ಗಾಯಗೊಂಡವರನ್ನು ಕೋಲಾರದ ಜಹೀರ್, ಅಝುರ್, ಖಿಹೀಫ್, ಸುಹೇಲ್, ಅಫ್ರೋಝ್ ಎಂದು ಗುರುತಿಸಲಾಗಿದೆ. ಐವರು ಸ್ನೇಹಿತರಾಗಿದ್ದು, ತಾಲೂಕಿನ ಶಿವನಸಮುದ್ರ ಬಳಿಯ ದರ್ಗಾಕ್ಕೆ ತೆರಳುತ್ತಿದ್ದು, ಚಾಲಕ ಸೇರಿದಂತೆ ಎಲ್ಲರೂ ಕಬ್ಬು ತಿನ್ನುತ್ತಾ ಕಾರನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬಂದಿದ್ದಾರೆ ಎನ್ನಲಾಗಿದೆ. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿ ಎದುರಿನಿಂದ ಸಂಚರಿಸುತ್ತಿದ್ದ ವಾಹನವೊಂದರ ಹಿಂಬದಿಗೆ ಕಾರು ಢಿಕ್ಕಿಯಾಗಿ ಘಟನೆ ನಡೆದಿದೆ ಎನ್ನಲಾಗಿದೆ.

ಸ್ಥಳಕ್ಕೆ ಗ್ರಾಮಾಂತ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಸುಗಮ ಸಂಚಾರಕ್ಕೆ ಅನುವು ಮಾಡುವುದರ ಜತೆಗೆ ಅಪಘಾತದ ನಂತರ ಪರಾರಿಯಾಗಿರುವ ಅಪರಿಚಿತ ವಾಹನದ ಪತ್ತೆಗೆ ಕ್ರಮ ವಹಿಸಿದ್ದಾರೆ. ತೀವ್ರವಾಗಿ ಗಾಯಗೊಂಡ ಗಾಯಾಳುಗಳನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದ್ದು, ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಮಾದಕ ವಸ್ತುಗಳ ವಿರುದ್ಧ ಸಿಸಿಬಿ ಕಾರ್ಯಾಚರಣೆ

# ವಿದೇಶಿ ಪ್ರಜೆ ಸೇರಿ ಹಲವರ ಬಂಧನ, 7.80 ಕೋಟಿ ರೂ.ಮೌಲ್ಯದ ಸೊತ್ತು ಜಪ್ತಿ

ಬೆಂಗಳೂರು, ಸೆ.27: ಮಾದಕ ವಸ್ತುಗಳ ಸಾಗಾಟ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಿಸಿಬಿ ಪೊಲೀಸರು ಓರ್ವ ವಿದೇಶಿ ಪ್ರಜೆ ಸೆರೆ ಹಲವರನ್ನು ಬಂಧಿಸಿ 7 ಕೋಟಿ 80 ಲಕ್ಷರೂ. ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿರುವುದು ವರದಿಯಾಗಿದೆ.




ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಸಿಸಿಬಿಯ ಡಿಸಿಪಿ ಡಾ.ಎಸ್.ಡಿ.ಶರಣಪ್ಪ ಮಾತನಾಡಿ, ಆಂಧ್ರಪ್ರದೇಶದ ಸಿಂತಪಲ್ಲಿಯ ಬುದ್ಧಿವಿಜಯ, ದೇವಿ, ಪಂಗಿ ಪನೋರಮಾ ಹಾಗೂ ಗುಂಡೇರಿ ಪುಷ್ಪಾ ಸೇರಿದಂತೆ ಈ ದಂಧೆಯಲ್ಲಿ ತೊಡಗಿದ್ದ ವಿದೇಶಿ ಪ್ರಜೆಯನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಕೆಲ ದಿನಗಳ ಹಿಂದೆ ಮಾದಕ ವಸ್ತು ಮಾರಾಟ ದಂಧೆಯಲ್ಲಿ ತೊಡಗಿದ್ದ ಡಿಜೆಯೊಬ್ಬನನ್ನು ಬಂಧಿಸಲಾಗಿತ್ತು. ಆತ ವಿಚಾರಣೆಯಲ್ಲಿ ಆಂಧ್ರದ ಸಿಂತಪಲ್ಲಿ ಅರಣ್ಯದಿಂದ ನಗರಕ್ಕೆ ರೈಲಿನಲ್ಲಿ ಮಾದಕ ವಸ್ತು ಸರಬರಾಜು ಮಾಡುತ್ತಿದ್ದ ಮಾಹಿತಿಯನ್ನು ಬಾಯ್ಬಿಟ್ಟಿದ್ದ ಎಂದು ಅವರು ತಿಳಿಸಿದರು.

ಯಾವುದೇ ಅನುಮಾನ ಬಾರದಂತೆ ನಗರದ ಪೆಡ್ಲರ್‌ಗಳಿಗೆ ಮಾದಕ ವಸ್ತುಗಳನ್ನು ಮಹಿಳೆಯರು ಸರಬರಾಜು ಮಾಡುವುದನ್ನು ಆತ ತಿಳಿಸಿದ್ದು ವಿಸ್ತೃತ ತನಿಖೆಯಲ್ಲಿ ಬಂಧಿತ ಮಹಿಳೆಯರು ಬೆಂಗಳೂರು, ಚೆನ್ನೈ, ಹೈದರಾಬಾದ್, ಕೊಚ್ಚಿನ್‌ಗೂ ಮಾದಕ ವಸ್ತು ಸಾಗಾಟ ಮಾಡುತ್ತಿರುವುದು ಪತ್ತೆಯಾಗಿತ್ತು ಎಂದು ಶರಣಪ್ಪ ಹೇಳಿದರು.

ಬಳಿಕ, ಸೆ.24ರಂದು ಪ್ರಶಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಬಂದು ಪುಟ್ಟಪರ್ತಿಯ ರೈಲ್ವೆ ನಿಲ್ದಾಣದ ಹೊರಗಡೆ ಆಟೊ ನಿಲ್ಲಿಸಿಕೊಂಡು ಮಾದಕ ವಸ್ತು ಸರಬರಾಜು ಮಾಡಲು ನಿಂತಿದ್ದ ಮಹಿಳೆಯರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಅವರು ವಿವರಿಸಿದರು.

ಬಂಧಿತರಿಂದ 7 ಕೋಟಿ 80 ಲಕ್ಷರೂ. ಮೌಲ್ಯದ 8 ಕೆಜಿ ಆಶಿಷ್ ಆಯಿಲ್, 10ಕೆಜಿ ಗಾಂಜಾ, 1 ಕೆಜಿಎಂಡಿಎಂಎ ಕ್ರಿಸ್ಟಲ್‌ಗಳನ್ನು ಜಪ್ತಿ ಮಾಡಿ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

### ಸಾಗುವಾನಿ, ಬೀಟೆ ಮರಗಳನ್ನು ಕಡಿದು ಸಾಗಣೆ

## ಆರೋಪಿ ಸಮೇತ ಮರಗಳ ವಶ: ಪ್ರಕರಣ ದಾಖಲು

ಎಚ್.ಡಿ.ಕೋಟೆ, ಸೆ.27: ಮೇಟಿಕುಪ್ಪೆ ವಲಯ ಅರಣ್ಯಾಧಿಕಾರಿಗಳ ತಂಡ ಸೋಮವಾರ ಬೆಳಗ್ಗೆ ಕಾರ್ಯಾಚರಣೆ ನಡೆಸಿ, ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಲಕ್ಷಾಂತರ ರೂ.ಮೌಲ್ಯದ ಸಾಗುವಾನಿ ಮತ್ತು ಬೀಟೆ ಮರಗಳ ಸಮೇತ ಆರೋಪಿಯನ್ನು ಬಂಧಿಸಿರುವುದು ವರದಿಯಾಗಿದೆ.

ಬಂಧಿತನನ್ನು ಎಚ್.ಡಿ.ಕೋಟೆ ಪಟ್ಟಣದ ಬೆಳಗನಹಳ್ಳಿಯ ಮಂಜುಶೆಟ್ಟಿ ಎಂದು ಗುರುತಿಸಲಾಗಿದೆ. ಮರದ ತುಂಡುಗಳನ್ನು ವಶಕ್ಕೆ ಪಡೆದುಕೊಂಡ ಮೇಟಿಕುಪ್ಪೆ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

ಏನಿದು ಘಟನೆ: ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಮೇಟಿಕುಪ್ಪೆ ವನ್ಯಜೀವಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ತೇಗ, ಬೀಟೆ ಮರಗಳನ್ನು ಅಕ್ರಮವಾಗಿ ಕಡಿದು ಸಾಗಣೆ ಮಾಡಿದ ಪ್ರಕರಣದಲ್ಲಿ ಮೇಟಿಕುಪ್ಪೆ ಹಾಡಿಯ ದಾಸ ಎಂಬವನನ್ನು 3ದಿನಗಳ ಹಿಂದೆ ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಮರಗಳನ್ನು ಇತರರೊಂದಿಗೆ ಕಳವು ಮಾಡಿ ಸೋಗಳ್ಳಿ ಸಿದ್ದೇಗೌಡ ಎಂಬವರಿಗೆ ಮಾರಾಟ ಮಾಡಿವುದಾಗಿ ಮಾಹಿತಿ ನೀಡಿದ್ದರು ಎನ್ನಲಾಗಿದೆ.

ಸಿದ್ದೇಗೌಡನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಎಚ್.ಡಿ.ಕೋಟೆ ಪಟ್ಟಣದ ಬೆಳಗನಹಳ್ಳಿ ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಮನೆ ಮಾಲಕ ಮಂಜುಶೆಟ್ಟಿ ಅವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ. ಕೂಡಲೆ ಬಂಧಿತರ ಸಮೇತ ಸೋಮವಾರ ಮಂಜುಶೆಟ್ಟಿ ಮನೆಯ ಮೇಲೆ ಅರಣ್ಯ ಇಲಾಖೆ ದಾಳಿ ನಡೆಸಿದಾಗ ಲಕ್ಷಾಂತರ ಮೌಲ್ಯದ ಮರ ತುಂಡುಗಳು ದೊರೆತಿದ್ದು, ಆರೋಪಿ ಸಮೇತ ಮರಗಳನ್ನು ವಶಕ್ಕೆ ತೆಗೆದುಕೊಂಡ ಅರಣ್ಯ ಇಲಾಖೆ ಮೂವರ ವಿರುದ್ಧ ಪ್ರಕರಣ ದಾಖಲಿಸಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

## ನಿಧನ

### ಡಾ.ಎಂ.ಪಿ.ರಾಜಣ್ಣ



ಮಂಡ್ಯ, ಸೆ.27: ವಿ.ಸಿ.ಫಾರಂ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕ ಡಾ.ಎಂ.ಪಿ. ರಾಜಣ್ಣ(58) ಅವರು ಮಂಗಳವಾರ ನಿಧನರಾದರು.


ತಮ್ಮ ನಿವಾಸದಲ್ಲಿ ಆಕಸ್ಮಿಕವಾಗಿ ಕೆಳಗೆ ಬಿದ್ದು ಗಾಯಗೊಂಡಿದ್ದ ಅವರನ್ನು ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಮೃತ ರಾಜಣ್ಣ ಅವರು ತಮ್ಮ ಜೀವಿತಾವಧಿಯಲ್ಲಿ ಹಲವಾರು ಭತ್ತದ ತಳಿಗಳನ್ನು ಅಭಿವೃದ್ಧಿಪಡಿಸಿ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದಾರೆ.

ಮೃತರು ಪತ್ನಿ ಶೋಭಾ, ಪುತ್ರ ಶ್ರೇಯಸ್, ಪುತ್ರಿ ಸ್ಫೂರ್ತಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಬುಧವಾರ ಬೆಳಗ್ಗೆ ಮೃತರ ಹುಟ್ಟೂರು ಟಿ.ನರಸೀಪುರ ತಾಲೂಕಿನ ಮಾವಿನಹಳ್ಳಿ ಗ್ರಾಮದಲ್ಲಿ ಬೆಳಗ್ಗೆ 11ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಎಸ್.ಸಿ.ಸಣ್ಣಲಿಂಗಯ್ಯ



ಮಂಡ್ಯ, ಸೆ.27: ತಾಲೂಕಿನ ಶಿವಳ್ಳಿ ಗ್ರಾಮದ ಚನ್ನೇಗೌಡ ಚಿತ್ರಮಂದಿರದ ಮಾಲಕ ಎಸ್.ಸಿ.ಸಣ್ಣಲಿಂಗಯ್ಯ (93) ವಯೋಸಹಜ ಕಾಯಿಲೆಯಿಂದ ಮಂಗಳವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಮೂವರು ಪುತ್ರರು, ಆರು ಮಂದಿ ಪುತ್ರಿಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಶಿವಳ್ಳಿ ಗ್ರಾಮದ ಅವರ ಜಮೀನಿನಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು.

ಶಾಸಕ ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಎಚ್.ಬಿ. ರಾಮು, ಕೆಪಿಸಿಸಿ ಸದಸ್ಯ ಎಲ್.ಡಿ. ರವಿ ಸೇರಿದಂತೆ ಹಲವು ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

### ಮಹಿಳೆಯೊಂದಿಗೆ ಕೆಎಸ್‌ಒಯು ಕುಲಪತಿ ಅಶ್ಲೀಲ ಮಾತುಕತೆ: ಆರೋಪ

## ಮಾಜಿ ಸಿಂಡಿಕೇಟ್ ಸದಸ್ಯ ಡಾ.ಕೆ.ಮಹದೇವ್ ಮೇಲೆ ಹಲ್ಲೆಗೆ ಯತ್ನ: ಪತ್ರಕರ್ತರ ಸಂಘದಿಂದ ದೂರು

ಮೈಸೂರು, ಸೆ.27: ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಡಾ.ವಿದ್ಯಾಶಂಕರ್ ತಮ್ಮ ಸಂಸ್ಥೆಯ ಮಹಿಳಾ ಉದ್ಯೋಗಿಯೊಂದಿಗೆ ದೂರವಾಣಿಯಲ್ಲಿ ಅಶ್ಲೀಲವಾಗಿ ಮಾತನಾಡಿ ಒಂದು ಸಂಸಾರವನ್ನೇ ಹಾಳು ಮಾಡಿದ್ದಾರೆ ಎಂದು ಆರೋಪಿಸಿ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಕೆ.ಮಹದೇವ್ ಹಾಗೂ ವಿಶ್ರಾಂತ ಕುಲಪತಿ ಡಾ.ರಾಮೇಗೌಡ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸುತ್ತಿರುವ ವೇಳೆ ಕೆಎಸ್‌ಒಯು ಮಂಡ್ಯ ರೀಜನಲ್ ಡೈರೆಕ್ಟರ್ ಸುಧಾಕರ್ ಹೊಸಹಳ್ಳಿ ಎಂಬವವರು ಏಕಾಏಕಿ ನುಗ್ಗಿ ಗಲಾಟೆ ಮಾಡಿ ಹಲ್ಲೆಗೆ ಯತ್ನಿಸಿರುವ ಘಟನೆ ನಡೆದಿರುವುದು ವರದಿಯಾಗಿದೆ.

ಮಾಜಿ ಸಿಂಡಿಕೇಟ್ ಸದಸ್ಯ ಡಾ.ಕೆ.ಮಹದೇವ್ ಮತ್ತು ವಿಶ್ರಾಂತ ಕುಲಪತಿ ಡಾ.ರಾಮೇಗೌಡ ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಕೆಎಸ್‌ಒಯು ಕುಲಪತಿ ಡಾ.ವಿದ್ಯಾಶಂಕರ್ ಮಹಿಳಾ ಉದ್ಯೋಗಿಯೊಬ್ಬರ ಜೊತೆ ಅಶ್ಲೀಲವಾಗಿ ಮಾತನಾಡಿ ಆಕೆಯ ಗಂಡ ವಿದ್ಯಾಶಂಕರ್‌ಗೆ ಬೈದಿರುವ ಆಡಿಯೋ ಬಿಡುಗಡೆ ಮಾಡಿದರು. ಈ ವೇಳೆ ದಿಢೀರನೇ ನುಗ್ಗಿ ಒಳ ಬಂದ ಸುಧಾಕರ್ ಹೊಸಹಳ್ಳಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿದ್ದಾರೆ ಎನ್ನಲಾಗಿದೆ. ಈ ಸಮಯದಲ್ಲಿ ಪತ್ರಕರ್ತರು ಮಧ್ಯಪ್ರವೇಶಿಸಿ ಸುಧಾಕರ್ ಹೊಸಹಳ್ಳಿ ಅವರನ್ನು ಹೊರಕ್ಕೆ ಕಳುಹಿಸಿದ್ದಾರೆ.

ಬಳಿಕ ಮಾತನಾಡಿದ ಡಾ.ಕೆ.ಮಹದೇವ್ ಕೆಎಸ್‌ಒಯು ಕುಲಪತಿ ಡಾ.ವಿದ್ಯಾಶಂಕರ್ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಉದ್ಯೋಗಿಯೊಬ್ಬರಿಗೆ ಹಣದ ಆಮಿಷ ತೋರಿಸಿ ಅವರೊಂದಿಗೆ ಸಲುಗೆಯಿಂದ ಮಾತನಾಡಿ ಆ ಸಂಸಾರವನ್ನೇ ಹಾಳುಮಾಡಿದ್ದಾರೆ. ವಿಚಾರ ಗೊತ್ತಾಗಿ ಆಕೆಯ ಪತಿ ಡಾ.ವಿದ್ಯಾಶಂಕರ್ ಅವರಿಗೆ ದೂರವಾಣಿಯಲ್ಲಿ ಬೈದಿದ್ದಾರೆ. ಡಾ.ವಿದ್ಯಾಶಂಕರ್ ಒಬ್ಬ ಭ್ರಷ್ಟ ಮತ್ತು ವಂಚಕ, ಆತನ ಬಗ್ಗೆ ಸಾಕ್ಷಿ ನೀಡಿ ಎಂದು ಮಾಧ್ಯಮದವರು ಕೇಳುತ್ತಿದ್ದಿರಿ ಅದಕ್ಕೆ ಈ ಆಡಿಯೋ ಬಿಡುಗಡೆ ಮಾಡುತ್ತಿದ್ದೇನೆ. ಇನ್ನು ಈತನ ಬಗ್ಗೆ ಹಲಾವಾರು ಆರೋಪಗಳಿದ್ದು ಎಲ್ಲವನ್ನು ಸಾಕ್ಷಿ ಸಮೇತ ಬಿಡುಗಡೆ ಮಾಡುತ್ತೇನೆ ಎಂದು ಹೇಳಿದರು.

ಪತ್ರಕರ್ತರ ಸಂಘದಲ್ಲಿ ನಡೆದ ಈ ಘಟನೆಗೆ ಸಂಬಂಧಪಟ್ಟಂತೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಸುಧಾಕರ್ ಹೊಸಹಳ್ಳಿ ವಿರುದ್ಧ ಕೆ.ಆರ್.ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದು ವರದಿಯಾಗಿದೆ.

## ಬುದ್ಧಿಮಾಂದ್ಯನಿಗೆ ಥಳಿತ: ವೀಡಿಯೊ ವೈರಲ್

ಹಾಸನ, ಸೆ.27: ಮಕ್ಕಳ ಕಳ್ಳ ಎಂದು ಶಂಕಿಸಿ ಮಾತುಬಾರದ ಬುದ್ಧಿಮಾಂದ್ಯನ ಮೇಲೆ ಅಮಾನವೀಯವಾಗಿ ಥಳಿಸಿರುವ ಘಟನೆ ಹಾಸನ ನಗರ ಸಮೀಪದ ಕಟ್ಟಾಯ ಹೋಬಳಿ ಆವರಳ್ಳಿ ಕೊಪ್ಪಲು ಗ್ರಾಮದಲ್ಲಿ ನಡೆದಿರುವುದು ವರದಿಯಾಗಿದೆ.

ಹಲ್ಲೆಗೆ ಒಳಗಾದ ಯುವಕ ಮಾತುಬಾರದ ಬುದ್ಧಿಮಾಂದ್ಯನಾಗಿದ್ದು. ಮೂರು ವರ್ಷಗಳಿಂದ ಸಕಲೇಶಪುರ ಪಟ್ಟಣದ ಜನರಿಗೆ ಚಿರಪರಿಚಿತರಾಗಿದ್ದ ಎನ್ನಲಾಗಿದ್ದು, ಹಸಿದಾಗ ಊಟನೀಡುವಂತೆ ಜನರಲ್ಲಿ ಬೇಡುತ್ತಿದ್ದ ಮಳೆಗಾಲದಲ್ಲಿ ಹಾದಿಬೀದಿಯಲ್ಲಿ ಮಲಗುತ್ತಾ ಜೀವನ ಸಾಗಿಸುತ್ತಿದ್ದ ಎನ್ನಲಾಗಿದೆ.

ಈ ಬುದ್ಧಿಮಾಂದ್ಯ ಯುವಕನನ್ನು ಥಳಿಸುತ್ತಿರುವ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಇದನ್ನು ಕಂಡ ಸಕಲೇಶಪುರದ ಪಟ್ಟಣದ ಜನರ ಆತಂಕ ವ್ಯಕ್ತಪಡಿಸಿದ್ದಾರೆ.

ಮಕ್ಕಳ ಕಳ್ಳ ಎಂಬ ಅನುಮಾನದಲ್ಲಿ ಮನಸೋ ಇಚ್ಛೆ ಥಳಿಸಿರುವುದು ಅಮಾನವೀಯ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಉತ್ತರ ಭಾರತದ ಕೆಲವು ಪ್ರದೇಶದಲ್ಲಿ ಮಕ್ಕಳ ಕಳ್ಳರು ಎಂಬ ಹೆಸರಿನಲ್ಲಿ ಅಮಾಯಕರನ್ನು ಥಳಿಸುವುದು, ಕೊಲ್ಲುವ ಪ್ರಕರಣಗಳು ಕೇಳಿಬರುತ್ತಿದ್ದವು. ಆದರೆ ಇಂತಹ ಅಮಾನವೀಯ ಪ್ರಕರಣ ಹಾಸನ ಜಿಲ್ಲೆಯಲ್ಲಿ ನಡೆದಿರುವುದು ಆತಂಕಕ್ಕೆ ಈಡಾಗಿದೆ.

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಮಕ್ಕಳನ್ನು ಕದಿಯಲು ಬರುತ್ತಿದ್ದಾರೆ ಎಂದು ಅಪರಿಚಿತ ವ್ಯಕ್ತಿಗಳ ಫೋಟೊಗಳನ್ನು ಹಾಕಿ ಹರಿ ಬಿಡುತ್ತಿದ್ದಾರೆ. ಇದರಿಂದ ಜನರು ಆತಂಕಕ್ಕೆ ಒಳಗಾಗಿದ್ದು, ಜಿಲ್ಲಾಡಳಿತ ಇಂತಹ ಗಾಳಿಸುದ್ದಿಗಳ ಕಡಿವಾಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ**
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಸಂ.: ಎ3(ಎ)/ಬಿಯುಡಿ/ಸೋ-ಟೆಂಡರ್/ಸಿಆರ್-65/22-23 ದಿನಾಂಕ: 21-09-2022

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)**

ಈ ಮೂಲಕ ಸಾರ್ವಜನಿಕರಿಗೆ ಮತ್ತು ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವವರಿಗೆ ತಿಳಿಯಪಡಿಸುವುದೇನೆಂದರೆ 2022-23 ನೇ ಸಾಲಿನಲ್ಲಿ ರಾಮನಗರ ವಿಭಾಗದ ಚನ್ನಪಟ್ಟಣ ಮತ್ತು ಸಾತನೂರು ವಲಯ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಟೆಂಟಕಲ್ ಸೋಲಾರ್ ತಂತಿ ಬೇಲಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ-ಟೆಂಡರ್ ಕರೆಯಲಾಗಿದೆ. ಇ-ಟೆಂಡರ್‌ನಲ್ಲಿ ದಿನಾಂಕ : 10-10-2022 ರಂದು ಅಪರಾಹ್ನ 4.00 ಗಂಟೆಯವರೆಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಟೆಂಡರ್ ಮೂಲಕ ಭಾಗವಹಿಸಬಹುದಾಗಿದೆ. ಇ-ಟೆಂಡರ್ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 11-10-2022 ರಂದು ಅಪರಾಹ್ನ 4.30 ಗಂಟೆಗೆ. ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 12-10-2022 ರ ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ದಿನಾಂಕ : 10-10-2022 ರಂದು ಇ-ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : 19-10-2022 ರಂದು ಅಪರಾಹ್ನ 4.00 ಗಂಟೆಯವರೆಗೆ ಭಾಗವಹಿಸಬಹುದಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 20-10-2022 ರ ಅಪರಾಹ್ನ 4.30 ಗಂಟೆಗೆ. ಹಾಗೂ ಆರ್ಥಿಕ ಬಿಡ್‌ನ್ನ ದಿನಾಂಕ : 21-10-2022 ರ ಸಂಜೆ 5.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಆಸಕ್ತಿಯುಳ್ಳವರು ಷರತ್ತುಗಳನ್ವಯ ಟೆಂಡರ್‌ನ್ನು ಹಾಕಿ ಪಡೆದುಕೊಳ್ಳಬಹುದಾಗಿದೆ. ಇತರೆ ಮಾಹಿತಿ ಬೇಕಾದಲ್ಲಿ ಕರ್ನಾಟಕ ಸರ್ಕಾರದ ಅಂತರ್ಜಾಲದ ವೆಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/245/ಮಣಿಪಾಲ್/2022-23

**ಲೋಕೋಪಯೋಗಿ ಇಲಾಖೆ**
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ : 080-22133370 ಫ್ಯಾಕ್ಸ್ ಸಂಖ್ಯೆ : 080-22133365
ಇ-ಮೇಲ್ : eepwdbngdn@yahoo.com ವೆಬ್‌ಸೈಟ್ : www.kpwd.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 22/2022-23 ದಿನಾಂಕ: 27.09.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಹೊಸಕೋಟೆ ಉಪವಿಭಾಗಕ್ಕೆ ಸಂಬಂಧಿಸಿದಂತೆ 02 ಸಂಖ್ಯೆಯ (ರೂ. 201.00 ಮತ್ತು 499.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

**ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ : **27.09.2022** ರಿಂದ. (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : **11.10.2022 ಸಂಜೆ 4.00 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ : **12.10.2022 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. **ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.**

ಸಹಿ/-
ಕಾರ್ಯಪಾಲಕ ಅಭಿಯಂತರರು,
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

ವಾ.ಸಂ.ಇ/ಬೆಂ.ನಗರ/ಶ್ರೇಷ್ಠ/2391/2022-23

ಕರ್ನಾಟಕ ಸರ್ಕಾರ
**ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೋಕ್ರೈನಾಲಜಿ & ರೀಸರ್ಚ್, ಬೆಂಗಳೂರು.**
(ಕರ್ನಾಟಕ ಸರ್ಕಾರದ ನೋಂದಾಯಿತ ಸ್ವಾಯತ್ತ ಸಂಸ್ಥೆ)
ಹಳೇ ಮದ್ರಾಸ್ ರಸ್ತೆ ಇಂದಿರಾನಗರ, ಬೆಂಗಳೂರು - 560 038.
ದೂರವಾಣಿ: +91 8025283013, +91-80-24492900 । ವೆಬ್‌ಸೈಟ್: www.kierbengaluru.karnataka.gov.in

ಸಂಖ್ಯೆ: ಕೆಐಇಆರ್/ಟಿಎಸ್/02-ಕಾಲ್-2/2022-23 ದಿನಾಂಕ: 26.09.2022

**ಟೆಂಡರ್ ಅಧಿಸೂಚನೆ**

ಕೆಐಇಆರ್ ಸಂಸ್ಥೆಯಲ್ಲಿ ಕಸ್ಟಮೈಸ್ ಮಾಡಿದ ಪಾದರಕ್ಷೆ ತಯಾರಿಕಾ ಘಟಕದ ಜೊತೆಗೆ ಆರ್ಥೋಸಿಸ್ ಮತ್ತು ಪ್ರೊಸ್ಥೆಸಿಸ್ ಸೇವಾ ಘಟಕವನ್ನು ಪ್ರಾರಂಭಿಸಲು ಅರ್ಹ ಟೆಂಡರ್‌ದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತದೆ. ಇ.ಎಂ.ಡಿ. ಮತ್ತು ಸೆಕ್ಯುರಿಟಿ ಡೆಪಾಸಿಟ್: **ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಿರುವಂತೆ.** ಟೆಂಡರ್ ದಸ್ತಾವೇಜುಗಳನ್ನು https://eproc.karnataka.gov.in ಇಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸಬಹುದಾದ **ದಿನಾಂಕ: 26.09.2022.**

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 12.10.2022 ರಂದು ಮಧ್ಯಾಹ್ನ 04.00 ಗಂಟೆಯವರೆಗೆ.** ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ:14.10.2022 ರಂದು ಬೆಳಗ್ಗೆ 11.00 ಗಂಟೆಗೆ.**

ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ **ಬೆಳಗ್ಗೆ 10.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ** ಸಂಸ್ಥೆಯ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಟೆಂಡರನ್ನು ಯಾವುದೇ ಕಾರಣಗಳನ್ನು ನೀಡದೆ ಅಂಗೀಕರಿಸುವ, ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಹೊಂದಿರುತ್ತದೆ.

ಸಹಿ/- ಆಡಳಿತಾಧಿಕಾರಿಗಳು,
ಕೆಐಇಆರ್, ಬೆಂಗಳೂರು

ವಾಸಾಸಂಇ/ವಾಪ್ರ/ಜೆಎ/1397/2022-23

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಬಂದರು ಮತ್ತು ಮೀನುಗಾರಿಕಾ ವಿಭಾಗ, 2ನೇ ಮಹಡಿ, ಶಾಮಿಲಿ ಹಾಲ್, ಅಂಬಲಪಾಡಿ, ಉಡುಪಿ-576103
ಪೋ/ಫ್ಯಾಕ್ಸ್: 0820-2532961, Website:www.kpwd.gov.in, Email: pfdudupi@gmail.com
ಸಂ:ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರ್ ಪ್ರಕಟಣೆ-12/2022-23 ದಿ: 23.09.2022

**ಅಲ್ಪಾವಧಿ ಟೆಂಡರು ಪ್ರಕಟಣೆ (3ನೇ ಕರೆ)**
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು **www.eproc.karnataka.gov.in** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

**ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ್:** (1) Development of Gurupura River Islands in Karnataka. ಟೆಂಡರಿಗಿಟ್ಟ ಮೊತ್ತ **ರೂ. 6,87,51,210.92,** ಇಎಂಡಿ **ಮೊತ್ತ:** Rs.10.31 lakhs (Rs.1.00 lakh e-payment + Rs.9.31 lakh as mentioned in bid document.) **ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: 07.10.2022 ರಂದು 16.00 ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: 10.10.2022 ರಂದು 17.00** ಗಂಟೆಯವರೆಗೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ

ವಾಸಾಇ/ಸನಿಉ/ಎಂಸಿಎ/456/22-23 ದಿ: 27.09.2022

**ಕುರ್‌ಆನ್ ವಚನಗಳು**

.....ಇನ್ನು ನೀವು ತೀರ್ಮಾನ ಮಾಡುವುದಾದಲ್ಲಿ ಅವರ ನಡುವೆ ನ್ಯಾಯೋಚಿತ ತೀರ್ಮಾನವನ್ನೇ ಮಾಡಿರಿ. ಖಂಡಿತವಾಗಿಯೂ ಅಲ್ಲಾಹನು ನ್ಯಾಯ ಪಾಲಿಸುವವರನ್ನು ಪ್ರೀತಿಸುತ್ತಾನೆ.
5:42

. ......ನೀವು ಜನರಿಗೆ ಅಂಜಬೇಡಿ. ನನಗೆ ಮಾತ್ರ ಅಂಜಿರಿ.......(5:44)

ADVT

# ‘ಹಿಮಾಲಯ ವೆಲ್ನೆಸ್ ಕಂಪೆನಿ-ನಿಮ್ಹಾನ್ಸ್ ಸಹಭಾಗಿತ್ವದಲ್ಲಿ ಸುರಕ್ಷಾ ಯೋಜನೆ ಪ್ರಾರಂಭ’

ಬೆಂಗಳೂರು, ಸೆ.27: ರಾಜ್ಯದ ಜಿಲ್ಲೆಗಳಲ್ಲಿ ಮಾನಸಿಕ ಆರೋಗ್ಯ ಸುಧಾರಿಸುವಿಕೆಯ ಲಭ್ಯತೆಗಾಗಿ ಭಾರತದ ಪ್ರಮುಖ ಸ್ವಾಸ್ಥ್ಯ ಬ್ರಾಂಡ್‌ಗಳಲ್ಲಿ ಒಂದಾದ ಹಿಮಾಲಯ ವೆಲ್ನೆಸ್ ಕಂಪೆನಿಯು ಸ್ಥಳೀಯವಾಗಿ ಪ್ರಾಯೋಗಿಕ ಮಾದರಿಯಲ್ಲಿ ‘ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್)ಯೊಂದಿಗೆ ಒಡಂಬಡಿಕೆ ಹೊಂದಿದೆ.

ಪ್ರಾಶಿ ಸುರಕ್ಷಾ ಎಂಬ ಪ್ರಾಯೋಗಿಕ ಕಾರ್ಯಕ್ರಮದಲ್ಲಿ ಸಮುದಾಯ ಆಧಾರಿತ ಆತ್ಮಹತ್ಯೆ ತಡೆಗಟ್ಟುವ ಕಾರ್ಯಕ್ರಮಗಳ ಕಾರ್ಯಸಾಧ್ಯತೆ, ಸ್ವೀಕಾರಾರ್ಹತೆ ಮತ್ತು ವೆಚ್ಚ-ಪರಿಣಾಮಕಾರಿತ್ವವನ್ನು ರೈತರು, ಕಾರ್ಮಿಕರು, ದಿನಗೂಲಿ ನೌಕರರು, ವಿದ್ಯಾರ್ಥಿ ಸಮುದಾಯಗಳು, ಮಾಧ್ಯಮ ವೃತ್ತಿಪರರು ಮತ್ತು ಮಹಿಳೆಯರ ಸಂಘಗಳನ್ನು ಒಳಗೊಂಡ ವಿವಿಧ ನೋಡಲ್ ಮಧ್ಯಸ್ಥಗಾರರ ಗುಂಪುಗಳಲ್ಲಿ ನಿರ್ಣಯಿಸಲಾಗುತ್ತದೆ.

ಇದು ಭವಿಷ್ಯದ ದೀರ್ಘಕಾಲೀನ ಅಧ್ಯಯನಗಳಿಗೆ ಒಂದು ಸಮೂಹವನ್ನು ಸ್ಥಾಪಿಸುತ್ತದೆ, ಅಂದರೆ ಒಂದು ಅವಧಿಯಲ್ಲಿ ಸಂಭವಿಸಬಹುದಾದ ಯಾವುದೇ ಬದಲಾವಣೆಗಳನ್ನು ಪತ್ತೆಹಚ್ಚಲು ಅದೇ ವ್ಯಕ್ತಿಗಳನ್ನು ಪದೇ ಪದೇ ಪರೀಕ್ಷಿಸಲಾಗುತ್ತದೆ. ಈ ಪ್ರಾಯೋಗಿಕ ಸಂಶೋಧನೆ ಮತ್ತು ಕಾರ್ಯಸಾಧ್ಯತೆಯ ಅಧ್ಯಯನದ ನಂತರ ಯೋಜನೆಯನ್ನು ಮೂರು ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲಾಗುವುದು.

ಯೋಜನೆಯ ಕುರಿತು ಮಾಹಿತಿ ನೀಡಿರುವ ಹಿಮಾಲಯ ವೆಲ್ನೆಸ್ ಕಂಪೆನಿಯ ಮಾನವ ಸಂಪನ್ಮೂಲ ನಿರ್ದೇಶಕ ಕೆ.ಜೆ. ಉಮೇಶ್, ನಿಮ್ಹಾನ್ಸ್ ನೊಂದಿಗಿನ ಪಾಲುದಾರಿಕೆಯ ಮೂಲಕ ಆತ್ಮಹತ್ಯೆ ತಡೆಗಟ್ಟುವಿಕೆಯ ಸಮರ್ಥನೀಯತೆ ಮತ್ತು ಪರಿಣಾಮಕಾರಿತ್ವವನ್ನು ಖಚಿತಪಡಿಸಿಕೊಳ್ಳಲು ‘ಸಮುದಾಯ ಆಧಾರಿತ ಆತ್ಮಹತ್ಯೆ: ಕಣ್ಗಾವಲು ಕಾರ್ಯಕ್ರಮ’ವನ್ನು ನಿರ್ಮಿಸಲು ನಾವು ಪ್ರಯತ್ನಿಸುತ್ತೇವೆ, ಇದರಿಂದಾಗಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಆತ್ಮಹತ್ಯೆ ಪ್ರಮಾಣವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.

ಸುರಕ್ಷಾ ಯೋಜನೆಯ ಪ್ರಧಾನ ತನಿಖಾಧಿಕಾರಿ ಹಾಗೂ ಮನೋವೈದ್ಯಕೀಯ ಸಾಮಾಜಿಕ ವಿಭಾಗದ ಸಹ ಪ್ರಾಧ್ಯಾಪಕ ಡಾ.ಅನೀಶ್ ವಿ.ಚೆರಿಯನ್ ತಿಳಿಸಿರುವಂತೆ, ಆತ್ಮಹತ್ಯೆ ತಡೆಗಟ್ಟುವ ಪ್ರಯತ್ನಗಳಿಗೆ ಸಮಾಜದ ಬಹು ವಲಯಗಳ ನಡುವೆ ಸಮನ್ವಯ ಮತ್ತು ಸಹಯೋಗದ ಅಗತ್ಯವಿದೆ. ಈ ಪ್ರಯತ್ನಗಳು ಅಂತರ್ಗತವಾಗಿರಬೇಕು ಮತ್ತು ಸಮಗ್ರವಾಗಿರಬೇಕು ಎಂದು ಹೇಳಿದ್ದಾರೆ.

ಸುರಕ್ಷಾ ಯೋಜನೆಯನ್ನು ಮೂರು ಹಂತಗಳಲ್ಲಿ ಜಾರಿಗೊಳಿಸಲಾಗುವುದು. ಪ್ರಸ್ತುತ ಅಸ್ತಿತ್ವದಲ್ಲಿರುವ ಸಮಗ್ರ ಆತ್ಮಹತ್ಯೆ ತಡೆಗಟ್ಟುವ ಕಾರ್ಯಕ್ರಮಗಳನ್ನು ವಿಶ್ಲೇಷಿಸುವುದು ಮತ್ತು ಜಿಲ್ಲೆಗಳಲ್ಲಿ ಪ್ರಸ್ತುತ ಸಾರ್ವಜನಿಕ ಆರೋಗ್ಯ ಪರಿಸ್ಥಿತಿ, ಸಂಸ್ಕೃತಿ/ಪ್ರದೇಶ-ನಿರ್ದಿಷ್ಟ ಮಧ್ಯಸ್ಥಿಕೆಗಳನ್ನು ಅಭಿವೃದ್ಧಿಪಡಿಸಲು ಕಾರ್ಯಾಗಾರಗಳು, ಮಧ್ಯಸ್ಥಿಕೆಗಳ ಅನುಷ್ಠಾನ ಮತ್ತು ಮೌಲ್ಯಮಾಪನ ಎಂದು ಅವರು ತಿಳಿಸಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

# ಮಂಡ್ಯ ಕಾಂಗ್ರೆಸ್ ಕಾರ್ಯಕರ್ತರಿಂದ ‘ಪೇಸಿಎಂ’ ಅಭಿಯಾನ

ಮಂಡ್ಯ, ಸೆ.27: ಗುತ್ತಿಗೆ ಬಿಲ್‌ನಲ್ಲಿ 40 ಪರ್ಸೆಂಟ್ ವಿರುದ್ಧ ರಾಜಧಾನಿ ಬೆಂಗಳೂರಿನಲ್ಲಿ ಕಾಂಗ್ರೆಸ್ ಆರಂಭಿಸಿದ್ದ ಪೇಸಿಎಂ ಅಭಿಯಾನ ಮಂಡ್ಯಕ್ಕೂ ವಿಸ್ತರಣೆಯಾಗಿದೆ. ಮಂಗಳವಾರ ನಗರದಲ್ಲೂ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ‘ಪೇಸಿಎಂ’ ಅಭಿಯಾನ ನಡೆಸಿದ್ದಾರೆ.

ನಗರದ ಕುರುಬರ ಹಾಸ್ಟೆಲ್ ಬಳಿ ಜಮಾಯಿಸಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗಿ ಪೇಸಿಎಂ ಪೋಸ್ಟರ್ ಮೆರವಣಿಗೆ ನಡೆಸಿದರು. ಪ್ರಮುಖ ಬೀದಿಗಳ ಗೋಡೆಗಳ ಮೇಲೆ ಪೋಸ್ಟರ್ ಅಂಟಿಸಿ ಸರಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಪೋಸ್ಟರ್ ಅಂಟಿಸುವುದಕ್ಕೆ ಪೊಲೀಸರು ತಡೆಯೊಡ್ಡಲು ಯತ್ನಿಸಿದಾಗ ಕಾಂಗ್ರೆಸ್ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಬಿರುಸಿನ ಮಾತಿನ ಚಕಮಕಿ ನಡೆಯಿತು.




ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್ ಮಾತನಾಡಿ, ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ನಿರಂತರವಾಗಿ ಹಗರಣಗಳು ನಡೆಯುತ್ತಿವೆ. ಇದನ್ನೂ ಕಂಡೂ ಕಾಣದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು.

> ನ್ಯಾಯಕ್ಕಾಗಿ ‘ಪೇಸಿಎಂ’ ಅಭಿಯಾನ ಆರಂಭಿಸಿದ್ದೇವೆ. ಇದನ್ನು ಪೊಲೀಸರು ಅರ್ಥಮಾಡಿಕೊಳ್ಳಬೇಕು. ಕೋವಿಡ್, ಅತಿವೃಷ್ಟಿ ಸಂದರ್ಭದಲ್ಲಿ ದೋಚಿದವರೆಲ್ಲಾ ಸಚಿವರಾಗಿದ್ದಾರೆ. ಅಶೋಕ್, ಅಶ್ವತ್ಥನಾರಾಯಣ ಸೇರಿದಂತೆ ಪ್ರಮುಖರು ಲೂಟಿ ಮಾಡುವುದನ್ನೂ ಇನ್ನೂ ಬಿಟ್ಟಿಲ್ಲ.
> ■ ಡಾ.ಎಚ್.ಎನ್.ರವೀಂದ್ರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಪ್ಪಾಜಿಗೌಡ, ನಗರಸಭೆ ಸದಸ್ಯ ರಾಮಲಿಂಗಣ್ಣ, ಮಾಜಿ ಸದಸ್ಯ ಮಂಜುನಾಥ್, ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಂತೋಷ್, ಚಂದ್ರು, ಪ್ರಸನ್ನ, ಗುಣವಂತ, ನಿರಂಜನ್, ರಮೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

# ಬೆಂಗಳೂರಿನಲ್ಲಿ ಅ.2ರವರೆಗೆ ಸಾಧಾರಣ ಮಳೆ: ಹವಾಮಾನ ಇಲಾಖೆ

ಬೆಂಗಳೂರು, ಸೆ.27: ಹವಾಮಾನದಲ್ಲಿ ಬದಲಾವಣೆಗಳು ಉಂಟಾಗಿದ್ದರಿಂದ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಅ.2ರವರೆಗೆ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ ಎಂದು ರಾಜ್ಯ ಹವಾಮಾನ ಇಲಾಖೆ ತಿಳಿಸಿದೆ.

ಪಶ್ಚಿಮ ಬಂಗಾಳಕೊಲ್ಲಿ ಸಮುದ್ರದಲ್ಲಿ ಮೇಲ್ಮೈ ಸುಳಿಗಾಳಿ ಸೃಷ್ಟಿಯಾಗಿದೆ. ಒಡಿಶಾ ಕರಾವಳಿ ಭಾಗದತ್ತ ಈ ಸುಳಿಗಾಳಿ ತೆರಳಲಿದ್ದು, ಬಳಿಕ ದುರ್ಬಲವಾಗಲಿದೆ. ಹವಾಮಾನದ ಈ ಬದಲಾವಣೆಯಿಂದ ಬೆಂಗಳೂರು ನಗರ ಜಿಲ್ಲೆ ಸೇರಿ ಒಳನಾಡು ಜಿಲ್ಲೆಗಳಲ್ಲಿ ಮಳೆ ವಾತಾವರಣ ಕಂಡು ಬಂದಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ನಾನಾ ಜಿಲ್ಲೆಗಳ ಕೆಲವು ಕಡೆಗಳಲ್ಲಿ ಅ.2ರವರೆಗೆ ಸಾಧಾರಣವಾಗಿ ಮಳೆ ಆಗಲಿದೆ.

ಬೆಳಗಾವಿ, ಹಾವೇರಿ, ಬಾಗಲಕೋಟೆ, ಹಾವೇರಿ, ಗದಗ, ಯಾದಗಿರಿ, ಕೊಪ್ಪಳ ಭಾಗದಲ್ಲಿ ಗುಡುಗುಸಹಿತ ಜೋರು ಮಳೆ ಬೀಳುವ ಸಾಧ್ಯತೆ ಇದೆ. ಹಾಗೂ ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ ಸಹ ತುಂತುರು ಮಳೆ ಆಗಬಹುದು ಎಂದು ಇಲಾಖೆ ಮಾಹಿತಿ ನೀಡಿದೆ.

# ‘ಸಿಸೇರಿಯನ್ ಹೆರಿಗೆ ತಡೆಯಲು ಮಹಿಳೆಯರಿಗೆ ಕೌನ್ಸೆಲಿಂಗ್ ಅನಿವಾರ್ಯ’

ಬೆಂಗಳೂರು, ಸೆ.27: ‘ಮಹಿಳೆಯರಿಗೆ ತಜ್ಞರ ಸಲಹೆ ಮತ್ತು ನೆರವು ಇಲ್ಲದ ಕಾರಣ, ದೇಶದಲ್ಲಿ ಸಿಸೇರಿನ್ ಹೆರಿಗೆಗಳು(ಸಿ-ಸೆಕ್ಷನ್) ಹೆಚ್ಚುತ್ತಿವೆ. ಸಕಾಲದಲ್ಲಿ ಮಹಿಳೆಯರಿಗೆ ಕೌನ್ಸಿಲಿಂಗ್ ನಡೆಸಿ, ಸಿಸೇರಿಯನ್ ಹೆರಿಗೆಗಳನ್ನು ತಡೆಯಬೇಕಾಗಿದೆ’ ಎಂದು ಆಫ್ರಿಕಾ ಫೌಂಡೇಶನ್‌ನ ಸಂಸ್ಥಾಪಕಿ ಹಾಗೂ ಪ್ರಸೂತಿ ತಜ್ಞೆ ಡಾ.ಜಾಹ್ನವಿ ನಿಲೇಕಣಿ ತಿಳಿಸಿದ್ದಾರೆ.

ಮಂಗಳವಾರ ನಗರದಲ್ಲಿರುವ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ಆಫ್ರಿಕಾ ಫೌಂಡೇಶನ್ ವತಿಯಿಂದ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ 2015-16ರಲ್ಲಿ ಸಿ-ಸೆಕ್ಷನ್ ಪ್ರಮಾಣ ಶೇ.40.3ರಷ್ಟಿದ್ದು, ಇಂದು ಶೇ.52.5ಕ್ಕೆ ಹೆಚ್ಚಳವಾಗಿದೆ. ಹಾಗಾಗಿ ಮಹಿಳೆಯರಲ್ಲಿ ಪ್ರಸವದ ಒತ್ತಡ, ಶಸ್ತ್ರಚಿಕಿತ್ಸೆ ಮತ್ತು ಎಪಿಸಿಯೊಟೊಮಿಗಳು ಹೆಚ್ಚುತ್ತಿರುವ ಬಗ್ಗೆ ಸರಕಾರವು ಸೇರಿ ಎನ್‌ಜಿಒಗಳು ಶ್ರಮವಹಿಸುವುದು ಅಗತ್ಯವಾಗಿದೆ. ಸಿಸೇರಿಯನ್ ಹೆರಿಗೆಗಳಿಂದ ಎದುರಾಗಬಹುದಾದ ಹಾನಿಗಳ ಬಗ್ಗೆ ಜನರಲ್ಲಿ, ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಜಾಗೃತಿ ಮೂಡಿಸಬೇಕಾಗಿದೆ’ ಎಂದರು.

ಫರ್ನಾಂಡೀಸ್ ಫೌಂಡೇಶನ್‌ನ ಪ್ರಸೂತಿ ತಜ್ಞೆ ಡಾ.ಪಲ್ಲವಿ ಚಂದ್ರ ಮಾತನಾಡಿ, ‘ತಾಯಿಯಾಗುತ್ತಿರುವವರ ಆರೈಕೆಯಲ್ಲಿ ಸಹಭಾಗಿತ್ವದ ಅಗತ್ಯವಿದ್ದು, ಸಾರ್ವಜನಿಕ ಆರೋಗ್ಯ ಆರೈಕೆ ಸೌಲಭ್ಯಗಳಲ್ಲಿ ಮಿಡ್ ವೈಫರಿ-ಲೆಡ್ ಕೇರ್ ಯೂನಿಟ್‌ಗಳನ್ನು ಸ್ಥಾಪಿಸುವುದು ಅಗತ್ಯ’ ಎಂದರು.

ಸಂವಾದದಲ್ಲಿ ಔರೋವಿಲ್ಲೆ ಫೌಂಡೇಶನ್‌ನ ಕಾರ್ಯದರ್ಶಿ ಡಾ.ಜಯಂತಿ ಎಸ್.ರವಿ, ಬನ್ಯಾನ್ ಅಕಾಡಮಿಯ ವಿಸಿಟಿಂಗ್ ಸೈಂಟಿಸ್ಟ್ ಡಾ.ನಚಿಕೇತ್ ಮೋರ್, ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ನ ಅಧ್ಯಕ್ಷ ಡಾ.ಟಿ.ದಿಲೀಪ್ ಕುಮಾರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

■ ಸೈಂಟ್ ಜೋಸೆಫ್ ವಿವಿ ಉದ್ಘಾಟನೆ

# ವಿದ್ಯಾರ್ಥಿಗಳ ಉತ್ತಮ ಭವಿಷ್ಯ ರೂಪಿಸಲು ಶಿಕ್ಷಣ ಸಂಸ್ಥೆಗಳಿಗೆ ರಾಷ್ಟ್ರಪತಿ ಕರೆ

ಬೆಂಗಳೂರು, ಸೆ.27: ಎಲ್ಲ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣದೊಂದಿಗೆ, ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಅಗತ್ಯ ತರಬೇತಿಯನ್ನು ನೀಡಲು ಕ್ರಮವಹಿಸಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶಿಕ್ಷಣ ಸಂಸ್ಥೆಗಳಿಗೆ ಕರೆ ನೀಡಿದ್ದಾರೆ.

ಮಂಗಳವಾರ ನಗರದ ರಿಚ್ಮಂಡ್ ವೃತ್ತದ ಬಳಿಯಿರುವ ಸೈಂಟ್ ಜೋಸೆಫ್ ಕಾಲೇಜಿನ ಸಭಾಂಗಣದಲ್ಲಿ ‘ಸಂತ ಜೋಸೆಫ್ ವಿಶ್ವವಿದ್ಯಾನಿಲಯ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ಶಿಕ್ಷಣವು ಮುಖ್ಯ ಪಾತ್ರ ವಹಿಸುವುದರಿಂದ ಸಮಾಜದಲ್ಲಿ ಉತ್ತಮ ರೀತಿಯ ಬದಲಾವಣೆ ತರಲು ಗುಣಮಟ್ಟದ ಶಿಕ್ಷಣ ಅತ್ಯಗತ್ಯ. ದೇಶ ಅಭಿವೃದ್ಧಿ ಹೊಂದಬೇಕಾದರೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಭಿವೃದ್ಧಿ ಹೊಂದಬೇಕು. ಭಾರತದಲ್ಲಿರುವ ಶಿಕ್ಷಣ ಸಂಸ್ಥೆಗಳು ವಿಶ್ವದಲ್ಲೇ ಅತ್ಯಂತ ಉತ್ತಮ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಾಡಿಸಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಅವರು ತಿಳಿಸಿದರು.




1882ರಲ್ಲಿ ಆರಂಭವಾದ ಸೈಂಟ್ ಜೋಸೆಫ್ ಶಿಕ್ಷಣ ಸಂಸ್ಥೆಯು 140 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ. ಇವತ್ತು ಈ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಸ್ಥಾನಮಾನ ಸಿಗುತ್ತಿರುವುದು ಕೇವಲ ಕರ್ನಾಟಕ ರಾಜ್ಯ ಮಾತ್ರವಲ್ಲದೇ, ದೇಶವೇ ಹೆಮ್ಮೆ ಪಡುವ ವಿಷಯ. ಇಲ್ಲಿ ಕಲಿತಿರುವ ಹಲವಾರು ವಿದ್ಯಾರ್ಥಿಗಳು ಕಲೆ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ಸೇನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಉನ್ನತ ಸಾಧನೆಯನ್ನು ಮಾಡಿದ್ದಾರೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ-2020 ದೇಶದ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಿದ್ದು, ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಸಕಾರಾತ್ಮಕ ಬದಲಾವಣೆ ತರುವಲ್ಲಿ ಸಹಕಾರಿಯಾಗಲಿದೆ ಎಂದು ರಾಷ್ಟ್ರಪತಿ ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಶಿಕ್ಷಣ ಸಂಸ್ಥೆಗಳು ಜ್ಞಾನದ ಕೇಂದ್ರಗಳಾಗಿದ್ದು, ಮಾನವೀಯ ಹಾಗೂ ಸರಳ ವ್ಯಕ್ತಿತ್ವವನ್ನು ತನ್ನ ವಿದ್ಯಾರ್ಥಿಗಳಲ್ಲಿ ತುಂಬಬೇಕು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅತ್ಯಂತ ಸರಳ ವ್ಯಕ್ತಿತ್ವದವರಾಗಿದ್ದು, ಶಿಕ್ಷಕರಾಗಿ, ಜನಪ್ರತಿನಿಧಿಯಾಗಿ, ರಾಜ್ಯಪಾಲರಾಗಿ ಸೇವೆಯನ್ನು ಸಲ್ಲಿಸಿದ್ದಾರೆ ಎಂದರು.

ಭವ್ಯ ಪರಂಪರೆಯನ್ನು ಹೊಂದಿರುವ ಸೈಂಟ್ ಜೋಸೆಫ್ ಶಿಕ್ಷಣ ಸಂಸ್ಥೆ ವಿವಿಧ ಕಾಲಮಾನಗಳ ಶಿಕ್ಷಣ ಕ್ಷೇತ್ರದ ಬದಲಾವಣೆಗಳನ್ನು ಕಂಡಿದೆ. 21ನೇ ಶತಮಾನ ಜ್ಞಾನದ ಶತಮಾನವಾಗಿದ್ದು, ಸೈಂಟ್ ಜೋಸೆಫ್ ಶಿಕ್ಷಣ ಸಂಸ್ಥೆ ಜ್ಞಾನದ ಕೇಂದ್ರವಾಗಿದೆ. ಸಂಸ್ಥೆಯು ಈ ಜ್ಞಾನದ ಶಕ್ತಿಯನ್ನು ತನ್ನ ವಿದ್ಯಾರ್ಥಿಗಳಿಗೆ ಧಾರೆಯೆರೆಯುತ್ತಿರುವುದು ಅತ್ಯಂತ ಸಂತೋಷದ ವಿಚಾರ ಎಂದು ಮುಖ್ಯಮಂತ್ರಿ ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ, ಬೆಂಗಳೂರಿನ ಆರ್ಚ್ ಬಿಷಪ್ ನ ಡಾ.ಪೀಟರ್ ಮಚಾದೊ, ಕುಲಪತಿ ಫಾ.ಡೈನಿಸಿಯಸ್ ವಾಝ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಸೈಂಟ್ ಜೋಸೆಫ್ ವಿದ್ಯಾ ಸಂಸ್ಥೆ ಬೆಂಗಳೂರಿನಲ್ಲಿ ಮಾತ್ರವಲ್ಲದೇ ಇಡೀ ಕರ್ನಾಟಕದಲ್ಲಿ ತನ್ನ ಛಾಪನ್ನು ಮೂಡಿಸಿದೆ. ಶಿಕ್ಷಣ ಸಂಸ್ಥೆಯು ಉತ್ತಮ ವಿದ್ಯಾರ್ಥಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಸಂಸ್ಥೆ ಒತ್ತು ನೀಡುತ್ತಾ ಬಂದಿದೆ. ವಿದ್ಯಾರ್ಥಿಗಳು ಉತ್ತಮ ಭವಿಷ್ಯ ಹಾಗೂ ಉತ್ತಮಜೀವನಕ್ಕಾಗಿ ಸೈಂಟ್ ಜೋಸೆಫ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆಯಲು ಬಯಸುತ್ತಾರೆ.
> ■ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

# ದಲಿತ ಮಹಿಳೆಯ ಭೂಮಿ ಕಬಳಿಸಿದ ರವಿಶಂಕರ್ ಗುರೂಜಿ ಆಶ್ರಮ

ಆರೋಪ

ನಾಳೆ ಪ್ರತಿಭಟನೆ

ಬೆಂಗಳೂರು, ಸೆ.27: ‘ಶ್ರೀ ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಮವು ದಲಿತ ವೃದ್ಧೆಗೆ ಸೇರಿದ ಎರಡು ಎಕರೆ ಭೂಮಿ ಕಬಳಿಸಿರುವ ಪ್ರಕರಣ ಈಗ ಬೆಳಕಿಗೆ ಬಂದಿದ್ದು, ಇದನ್ನು ಖಂಡಿಸಿ ಕನಕಪುರ ರಸ್ತೆಯ ಉದಿಪಾಳ್ಯ ಆಶ್ರಮದ ಮುಂದೆ ಸೆ.29ರಂದು ಪ್ರತಿಭಟನೆ ನಡೆಸಲಾಗುತ್ತಿದೆ’ ಎಂದು ಸಮತಾ ಸೈನಿಕ ದಳವು ಎಚ್ಚರಿಕೆ ನೀಡಿದೆ.

ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಸಮತಾ ಸೈನಿಕ ದಳದ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಆರ್.ಚಂದ್ರಶೇಖರ್ ಮಾತನಾಡಿ, ಕನಕಪುರ ರಸ್ತೆಯ ಉದೀಪಾಳ್ಯ ಗ್ರಾಮದ ಸರ್ವೇ ನಂ. 132/62ರಲ್ಲಿರುವ ಎರಡು ಎಕರೆ ಜಮೀನು ಸುಮಾರು 70 ವರ್ಷ ವಯೋವೃದ್ಧ ದಲಿತ ಮಹಿಳೆ ರಂಗಮ್ಮನಿಗೆ ಸೇರಿದೆ ಎಂದರು.

ಆದರೆ, ಈ ಎರಡು ಎಕರೆ ಜಮೀನನ್ನು ಬೇನಾಮಿ ಹೆಸರುಗಳನ್ನು ಸೃಷ್ಟಿಸಿ, ಆಶ್ರಮವು ಕಬಳಿಸಿದೆ. ತಕ್ಷಣವೇ ಈ ಜಮೀನನ್ನು ರಂಗಮ್ಮನಿಗೆ ಬಿಟ್ಟುಕೊಡಬೇಕು. ಇಲ್ಲವಾದಲ್ಲಿ ನ್ಯಾಯ ಸಿಗುವ ತನಕ ಹೋರಾಟ ಮುಂದುವರಿಸುತ್ತೇವೆ ಎಂದು ತಿಳಿಸಿದರು.

‘ಆರ್ಟ್ ಆಫ್ ಲೀವಿಂಗ್’ನ ಹೆಸರಿನಲ್ಲಿ ಅಪಾರ ಸಂಪತ್ತನ್ನು ಸೃಷ್ಟಿಸಿಕೊಂಡಿರುವ ಶ್ರೀ ರವಿಶಂಕರ್ ಗುರೂಜಿ ಆಶ್ರಮವು ಕನಕಪುರ ರಸ್ತೆಯ ಉದಿಪಾಳ್ಯ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸಿಸುವ ಜನರ ಬದುಕನ್ನು ಬೀದಿಪಾಲು ಮಾಡಿದೆ. ಮೊದಲ ಬಾರಿಗೆ ಹತ್ತು ವರ್ಷಗಳ ಹಿಂದೆಯೇ ಆಶ್ರಮದ ಎದುರು ಭಾರೀ ಪ್ರತಿಭಟನೆ ನಡೆಸಿ ಕಂದಾಯ ಇಲಾಖೆಯ ಅಧಿಕಾರಿಗಳ ಮೂಲಕ ಹತ್ತಾರು ಮೂಲ ವಾರಸುದಾರರಿಗೆ ಭೂಮಿ ವಾಪಸ್ ಕೊಡಿಸಿದ್ದೇವೆ. ಇದೀಗ ದಲಿತರಿಗೆ ಸರಕಾರ ಮತ್ತು ಪೊಲೀಸರು ರಕ್ಷಣೆ ನೀಡಬೇಕು ಎಂದು ಅವರು ಮನವಿ ಮಾಡಿದರು.

> ದಲಿತರ ಭೂಮಿ ಬಿಟ್ಟುಕೊಡಬೇಕೆಂದು ಶ್ರೀ ರವಿಶಂಕರ್ ಗುರೂಜಿಗೆ ಆ.13ರಂದು ಪತ್ರ ಬರೆದು ಖುದ್ದಾಗಿ ಒತ್ತಾಯಿಸಿದ್ದೇವೆ. ಆಶ್ರಮದ ವಕ್ತಾರರೊಂದಿಗೆ ಭೂಮಿ ಬಿಟ್ಟುಕೊಡುವಂತೆ ಚರ್ಚಿಸಿದ್ದು, ಅದರಿಂದ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ನಿರಂತರ ಹೋರಾಟ ಆರಂಭಿಸುತ್ತಿದ್ದೇವೆ.
> ■ ಆರ್.ಚಂದ್ರಶೇಖರ್, ಸಮತಾ ಸೈನಿಕ ದಳದ ಬೆಂ.ನಗರ ಜಿಲ್ಲಾಧ್ಯಕ್ಷ

ಸುದ್ದಿಗೋಷ್ಠಿಯಲ್ಲಿ ಸಮತಾ ಸೈನಿಕ ದಳದ ಬೆಂ.ದಕ್ಷಿಣ ವಿಭಾಗದ ಅಧ್ಯಕ್ಷ ಎಸ್.ಕೆಂಚಯ್ಯ, ಬೆಂ.ದಕ್ಷಿಣ ವಿಭಾಗದ ಪ್ರಧಾನ ಕಾರ್ಯದರ್ಶಿ ಜಿ.ಕೆ.ಗೋಪಾಲ್, ರಂಗಮ್ಮ ಮತ್ತಿತರರು ಉಪಸ್ಥಿತರಿದ್ದರು.

# ‘ಭಾರತ್ ಜೋಡೋ’ ಯಾತ್ರೆಯ ದಾರಿ ಬದಲು ಸಾಧ್ಯತೆ: ಡಾ.ಜಿ.ಪರಮೇಶ್ವರ್

ತುಮಕೂರು, ಸೆ.27: ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆಯ ದಾರಿ ಬದಲಾಗುವ ಸಾಧ್ಯತೆ ಇದೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಭಾರತ್ ಜೋಡೋ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ತುಮಕೂರು ಜಿಲ್ಲೆಯಲ್ಲಿಯೇ ಹೆಚ್ಚಿನ ಅವಧಿಯಲ್ಲಿ ರಾಹುಲ್ ಗಾಂಧಿ ಸಂಚರಿಸಲಿದ್ದಾರೆ, ಇದನ್ನು ಯಶಸ್ವಿಗೊಳಿಸಬೇಕಾದ ಹೊಣೆಗಾರಿಕೆ ಜಿಲ್ಲೆಯ ನಾಯಕರ ಮೇಲಿದೆ ಎಂದರು.

ಭಾರತ್ ಜೋಡೋ ಯಾತ್ರೆ ಮೂಲ ಆದಿಚುಂಚನಗಿರಿ, ತುರುವೇಕೆರೆ, ಚಿಕ್ಕನಾಯಕಹಳ್ಳಿ, ಹುಳಿಯಾರು ಮೂಲಕ ಚಿತ್ರದುರ್ಗ ಜಿಲ್ಲೆಗೆ ಹೋಗಬೇಕಿತ್ತು, ಆ ದಾರಿಯಲ್ಲಿ ಗ್ರಾಮಗಳ ಸಂಖ್ಯೆ ಕಡಿಮೆ ಇರುವುದರಿಂದ ಕೆಪಿಸಿಸಿ ಅಧ್ಯಕ್ಷರು ಮಾರ್ಗ ಬದಲಾವಣೆ ಮಾಡಿದ್ದರು. ಈಗ ಮೂಲ ಮಾರ್ಗದಲ್ಲಿಯೇ ಯಾತ್ರೆ ಸಾಗಬೇಕು ಎಂದು ರಾಹುಲ್ ಗಾಂಧಿ ಕಚೇರಿಯಿಂದ ಪತ್ರ ಬಂದಿದ್ದು, ಮೂಲ ಮಾರ್ಗದ ಬಗ್ಗೆ ತಾಂತ್ರಿಕ ತಂಡ ಪರಿಶೀಲನೆ ನಡೆಸುತ್ತಿದೆ ಎಂದರು.




ಮಾರ್ಗ ಯಾವುದೇ ಆದರೂ ಅಕ್ಟೋಬರ್ 8ರಂದು ಜಿಲ್ಲೆಯ ಟಿಬಿ ಕ್ರಾಸ್‌ನಲ್ಲಿ ಪ್ರಾರಂಭವಾಗಲಿರುವ ಯಾತ್ರೆಗೆ ಕನಿಷ್ಠ 5 ಸಾವಿರ ಜನರು ಅವರೊಂದಿಗೆ ಹೆಜ್ಜೆ ಹಾಕಬೇಕಿದ್ದು, ಯೂತ್ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಆದಿಚುಂಚನಗಿರಿ ಅಥವಾ ತುರುವೇಕೆರೆಯಲ್ಲಿ ವಾಸ್ತವ್ಯ ಹೂಡಬೇಕೆಂದು ಡಾ.ಜಿ.ಪರಮೇಶ್ವರ್ ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಮಾಜಿ ಸಚಿವೆ ಉಮಾಶ್ರೀ, ಮಾಜಿ ಸಚಿವ ಟಿ.ಬಿ.ಜಯಚಂದ್ರ, ಶಾಸಕ ವೆಂಕಟರಮಣಪ್ಪ, ಡಾ. ಎಚ್.ಡಿ.ರಂಗನಾಥ್, ಡಿಸಿಸಿ ಅಧ್ಯಕ್ಷ ರಾಮಕೃಷ್ಣ ಮುಖಂಡರಾದ ಪ್ರಸನ್ನಕುಮಾರ್, ಹೊನ್ನಗಿರಿಗೌಡ ಮಾತನಾಡಿದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಶಾಸಕ ಬಿ.ಬಿ.ರಾಮಸ್ವಾಮಿಗೌಡ, ಆರ್. ನಾರಾಯಣ್, ಷಡಕ್ಷರಿ, ಡಾ.ರಫೀಕ್ ಅಹ್ಮದ್, ಮುಖಂಡರಾದ ಬೆಮಲ್ ಕಾಂತರಾಜು, ಪಾವಗಡ ವೆಂಕಟೇಶ್, ಗುರುಪ್ರಸಾದ್, ರಾಯಸಂದ್ರ ರವಿಕುಮಾರ್, ವೈ.ಸಿ.ಸಿದ್ದರಾಮಯ್ಯ, ಯಲಚವಾಡಿ ನಾಗರಾಜ್, ಅತೀಕ್ ಅಹಮದ್, ಇಕ್ಬಾಲ್ ಅಹ್ಮದ್, ಎಚ್.ಸಿ.ಹನುಮಂತಯ್ಯ, ಜಿ.ಪಂ. ಮಾಜಿ ಸದಸ್ಯ ಕೆಂಚಮಾರಯ್ಯ, ಡಿ.ಟಿ.ವೆಂಕಟೇಶ್, ಲೋಕೇಶ್ವರ್, ಶಶಿ ಹುಲಿಕುಂಟೆಮಠ್ ಇನ್ನಿತರರು ಉಪಸ್ಥಿತರಿದ್ದರು.

# ಬಿಬಿಎಂಪಿ ಮುಖ್ಯ ಆಯುಕ್ತರ ವಿರುದ್ಧ ಲೋಕಾಯುಕ್ತಕ್ಕೆ ದೂರು ದಾಖಲು

ಬೆಂಗಳೂರು, ಸೆ.27: ನ್ಯಾಯಾಲಯದ ಆದೇಶ ಉಲ್ಲಂಘಿಸಿ ಬಿಬಿಎಂಪಿ ಯೋಜನೆಗಳಲ್ಲಿ ಜನಪ್ರತಿನಿಧಿ, ಸಚಿವರ ಭಾವಚಿತ್ರ ಮತ್ತು ಹೆಸರನ್ನು ಪ್ರದರ್ಶಿಸುವ ಮೂಲಕ ನಾಗರಿಕರನ್ನು ತಪ್ಪು ದಾರಿಗೆ ಎಳೆಯುತ್ತಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ಲೋಕಾಯುಕ್ತರಿಗೆ ನೈಜ ಹೋರಾಟಗಾರರ ವೇದಿಕೆ ದೂರು ಸಲ್ಲಿಸಿದೆ.

ಮಂಗಳವಾರ ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ವೇದಿಕೆಯ ಹೋರಾಟಗಾರ ಎಚ್.ಎಂ.ವೆಂಕಟೇಶ್, ಸರಕಾರದ ಯೋಜನೆಗಳಿಗೆ ರಾಷ್ಟ್ರಪತಿ, ಮುಖ್ಯ ನ್ಯಾಯಮೂರ್ತಿ, ಪ್ರಧಾನಮಂತ್ರಿ, ರಾಜ್ಯಪಾಲ ಮತ್ತು ಮುಖ್ಯಮಂತ್ರಿಯ ಭಾವಚಿತ್ರಗಳನ್ನು ಮಾತ್ರ ಹಾಕಲು ಅವಕಾಶ ಇದೆ. ಈ ಸಂಬಂಧ ನ್ಯಾಯಾಲಯ ಆದೇಶ ಹೊರಡಿಸಿದೆ ಎಂದರು. ಆದರೂ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಸರಕಾರ ಯೋಜನೆಗಳಲ್ಲಿ ಜನಪ್ರತಿನಿಧಿ, ಸಚಿವರ ಭಾವಚಿತ್ರ ಮತ್ತು ಹೆಸರನ್ನು ಪ್ರದರ್ಶಿಸುತ್ತಿದ್ದಾರೆ. ಕಾರ್ಯಾಂಗದಲ್ಲಿರುವ ಅಧಿಕಾರಿ ತಮ್ಮ ಕರ್ತವ್ಯಲೋಪ ಮತ್ತು ಅಧಿಕಾರ ದುರುಪಯೋಗಪಡಿಸಿ ರಾಜಕಾರಣಿಗಳೊಂದಿಗೆ ಶಾಮೀಲಾಗಿ ಅಧಿಕಾರವನ್ನು ದುರುಪಯೋಗಪಡಿಸಿ ಕರ್ತವ್ಯಲೋಪವೆಸಗುತ್ತಿದ್ದಾರೆ ಎಂದು ಆರೋಪಿಸಿದರು.



> ‘ಕಾನೂನು ಕ್ರಮ ಕೈಗೊಳ್ಳಲಿ’
> ತುಷಾರ್ ಗಿರಿನಾಥ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಅವರಿಗೆ ದೂರು ನೀಡಿದರೂ, ಎಫ್‌ಐಆರ್ ದಾಖಲಿಸಲಿಲ್ಲ. ಅವರು ತಮ್ಮ ಸಹೋದ್ಯೋಗಿಯನ್ನು ರಕ್ಷಿಸುತ್ತಿರುವುದು ಬಹಿರಂಗವಾಗಿದೆ ಎಂದು ವೆಂಕಟೇಶ್ ದೂರಿದರು.
> ಈ ಸಂಬಂಧ ಪ್ರತಾಪ್ ರೆಡ್ಡಿ ಹಾಗೂ ತುಷಾರ್ ಗಿರಿನಾಥ್ ವಿರುದ್ಧ ಕರ್ನಾಟಕ ಮುಕ್ತ ಸ್ಥಳಗಳ ವಿರೂಪಗೊಳಿಸುವ ಕಾಯ್ದೆ 1981 ಅಡಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸದೆ ಅಧಿಕಾರ ದುರುಪಯೋಗ ಮತ್ತು ಕರ್ತವ್ಯಲೋಪವೆಸಗಿದ ಬಗ್ಗೆ ಕಾನೂನು ಕ್ರಮ ಜರುಗಿಸಬೇಕೆಂದು ಅವರು ಒತ್ತಾಯಿಸಿದರು.

# ಸಚಿವ ಸೋಮಶೇಖರ್‌ರಿಂದ ಯುವ ದಸರಾ ಪೋಸ್ಟರ್ ಬಿಡುಗಡೆ

ಮೈಸೂರು, ಸೆ.27: ಯುವ ದಸರಾ ಕಾರ್ಯಕ್ರಮದ ಪೋಸ್ಟರ್‌ಅನ್ನು ಸಹಕಾರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಮಂಗಳವಾರ ಬಿಡುಗಡೆ ಮಾಡಿದ್ದಾರೆ.

ಬಳಿಕ ಮಾತನಾಡಿದ ಅವರು, ಸೆ.28ಕ್ಕೆ ‘ಅಪ್ಪು ನಮನ’ ಹಮ್ಮಿಕೊಳ್ಳಲಾಗಿದೆ. ದಸರಾಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ. ಯುವ ದಸರಾದಲ್ಲಿ ಗೋಲ್ಡ್ ಪಾಸ್ ಹೊರತುಪಡಿಸಿ ಯಾವುದೇ ಪಾಸ್ ಇರುವುದಿಲ್ಲ ಎಂದರು.

ಯುವ ಸಂಭ್ರಮ/ಯುವ ದಸರಾ ಉಪ ಸಮಿತಿ ವತಿಯಿಂದ ಸೆ.28ರಿಂದ ಅ.3ರವರೆಗೆ ಯುವ ದಸರಾ ಕಾರ್ಯಕ್ರಮವನ್ನು ಮಹಾರಾಜ ಕಾಲೇಜು ಮೈದಾನದಲ್ಲಿ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

## ಇಂದು ಅಪ್ಪು ನಮನ ಕಾರ್ಯಕ್ರಮ

ಯುವ ದಸರಾ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ದಿ.ನಟ ಪುನೀತ್ ರಾಜ್ ಕುಮಾರ್ ಪತ್ನಿ ಅಶ್ವಿನಿ ಹಾಗೂ ನಟ ಶಿವರಾಜ್ ಕುಮಾರ್ ಆಗಮಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ನಾಳೆ ಸಂಜೆ 7ಗಂಟೆಯಿಂದ ಅಪ್ಪು ನಮನ ಕಾರ್ಯಕ್ರಮ ನಡೆಯಲಿದ್ದು ಖ್ಯಾತ ಹಿನ್ನೆಲೆ ಗಾಯಕರಾದ ಗುರುಕಿರಣ್, ವಿಜಯ ಪ್ರಕಾಶ್, ಕುನಾಲ್ ಗಾಂಜಾವಾಲ ಕಾರ್ಯಕ್ರಮ ನೀಡಲಿದ್ದಾರೆ.

ಸೆ.29ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಸ್ಥಳೀಯ ನೃತ್ಯ ತಂಡದಿಂದ ನೃತ್ಯ ಪ್ರದರ್ಶನ, ಪವನ್ ಡ್ಯಾನ್ಸರ್ ಹಾಗೂ ಇತರರಿಂದ ನೃತ್ಯ ರೂಪಕ, ಹಿನ್ನೆಲೆ ಗಾಯಕಿ ಕನ್ನಿಕಾ ಕಪೂರ್ ರವರಿಂದ ಸಂಗೀತ ರಸಸಂಜೆ ನಡೆಯಲಿದೆ.

ಸೆ.30ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮ, ಲೇಸರ್ ಆಕ್ಟ್ ಮತ್ತು ಸಿಗ್ನೇಚರ್ ಗ್ರೂಪ್ ನೃತ್ಯ ತಂಡದಿಂದ ನೃತ್ಯ ರೂಪಕ, ಸ್ಯಾಂಡಲ್ ವುಡ್ ನೈಟ್ ನಡೆಯಲಿದೆ. ಅ.1ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಹಿನ್ನೆಲೆ ಗಾಯಕ ಸೋನು ನಿಗಮ್, ಗಾಯಕಿ ಡಾ.ಶಮಿತಾ ಮಲ್ನಾಡ್ ರಿಂದ ಸಂಗೀತ ರಸಮಂಜರಿ ಇರಲಿದೆ.

ಅ.2ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಖ್ಯಾತ ಚಿತ್ರತಾರೆಯರಾದ ಹರ್ಷಿಕಾ ಪೂಣಚ್ಚ, ವಿಜಯರಾಘವೇಂದ್ರ ಅವರಿಂದ ಕನ್ನಡ ಸ್ಟಾರ್ ನೈಟ್, ಗಾಯಕಿ ಮಂಗ್ಲಿ ಅವರಿಂದ ಸಂಗೀತ ರಸಮಂಜರಿ, ಗಾಯಕ ಅಮಿತ್ ತ್ರಿವೇದಿ ಅವರಿಂದ ಸಂಗೀತ ರಸಮಂಜರಿ ನಡೆಯಲಿದೆ.

ಅ.3ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಸುಪ್ರಿಯಾ ರಾಮ್ ಮಹಿಳಾ ಬ್ಯಾಂಡ್ ತಂಡದವರಿಂದ ಪ್ರದರ್ಶನ, ಫ್ಯಾಷನ್ ಶೋ, ಗಾಯಕಿ ಸುನಿಧಿ ಚೌಹಾಣ್‌ರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದು ಯುವ ದಸರಾ ಉಪಸಮಿತಿ ವಿಶೇಷಾಧಿಕಾರಿ ಆರ್.ಚೇತನ್ ಇದೇ ವೇಳೆ ತಿಳಿಸಿದರು.

ಭಿತ್ತಿ ಪತ್ರ ಬಿಡುಗಡೆ ಸಮಾರಂಭದಲ್ಲಿ ಸಂಸದ ಪ್ರತಾಪಸಿಂಹ, ಮೇಯರ್ ಶಿವಕುಮಾರ್, ಸಮಿತಿಯ ಕಾರ್ಯಾಧ್ಯಕ್ಷ ವೆಂಕಟರಾಜು ಎನ್ ಸಿ, ಅಧ್ಯಕ್ಷ ಕಿರಣ್ ಗೌಡ, ಉಪಾಧ್ಯಕ್ಷರುಗಳಾದ ಎಂ.ಬದರೀಶ್, ಸಂತೋಷ್ ಕುಮಾರ್, ಎಂ.ಮಹೇಂದ್ರ, ಕಾರ್ಯದರ್ಶಿ ಆಶಾದ್ ರಹ್ಮಾನ್ ಶರೀಫ್, ಡಾ.ನಿಂಗರಾಜು ಆರ್. ಮತ್ತಿತರರು ಉಪಸ್ಥಿತರಿದ್ದರು.

# ಲೋಕಾಯುಕ್ತವನ್ನು ಸಿದ್ದರಾಮಯ್ಯ ಮುಚ್ಚಿಹಾಕಿದ್ದರು: ನಳಿನ್ ಕುಮಾರ್ ಕಟೀಲು

ವಿಜಯಪುರ, ಸೆ.27: ತಾನು ಜೈಲಿಗೆ ಹೋಗಬಾರದೆಂದು ಲೋಕಾಯುಕ್ತವನ್ನು ಸಿದ್ದರಾಮಯ್ಯ ಮುಚ್ಚಿಹಾಕಿದ್ದರು. ಲೋಕಾಯುಕ್ತಕ್ಕೆ ಮತ್ತೆ ಶಕ್ತಿ ತುಂಬುವ ಕೆಲಸವನ್ನು ನಮ್ಮ ಸರಕಾರ ಮಾಡಲಿದೆ. ಈ ರಾಜ್ಯದಲ್ಲಿ ಪೇಮೆಂಟ್ ಮುಖ್ಯಮಂತ್ರಿ ಇದ್ದರೆ ಅದು ಸಿದ್ದರಾಮಯ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲು ಆರೋಪಿಸಿದ್ದಾರೆ.

ಮಂಗಳವಾರ ವಿಜಯಪುರದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಪೇಸಿಎಂ ಕಾಂಗ್ರೆಸ್, ಭ್ರಷ್ಟಾಚಾರದ ಇನ್ನೊಂದು ಹೆಸರು ಕಾಂಗ್ರೆಸ್. ದೇಶ ಮತ್ತು ರಾಜ್ಯವನ್ನು ಲೂಟಿ ಮಾಡಿದ್ದು ಕಾಂಗ್ರೆಸ್. ಹಗರಣ, ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಕಾಂಗ್ರೆಸ್‌ನವರಿಗೆ ನೈತಿಕತೆ ಇಲ್ಲ ಎಂದರು. ಖರ್ಗೆ, ಪರಮೇಶ್ವರ್ ಅವರಂಥ ಹಿರಿಯ ನಾಯಕರಿದ್ದರು. ದಲಿತ ಸಿಎಂ ವಿಚಾರ ಆಗ ಜೋರಾಗಿ ಚರ್ಚೆಯಲ್ಲಿತ್ತು. ಡಿ.ಕೆ.ಶಿವಕುಮಾರ್, ದೇಶ್‌ಪಾಂಡೆಯವರಂತಹ ಪ್ರಮುಖರ ಮಧ್ಯೆ ಸಿದ್ದರಾಮಯ್ಯ ಹಣ ಕೊಟ್ಟೇ ಮುಖ್ಯಮಂತ್ರಿ ಆಗಿದ್ದಾರೆ. 5 ವರ್ಷ ಮೇಡಂಗೆ ಹಣ ಕೊಟ್ಟೇ ಆ ಸ್ಥಾನವನ್ನು ಉಳಿಸಿಕೊಂಡಿದ್ದಾರೆ ಎಂದು ನಳಿನ್ ಕುಮಾರ್ ಕಟೀಲು ಆರೋಪಿಸಿದರು.

‘ಪೇ ಕಾಂಗ್ರೆಸ್ ಮೇಡಂ’ ಎಂಬ ಅರ್ಥ ‘ಪೇಸಿಎಂ’ ಎಂಬುದರಲ್ಲಿ ಅಡಗಿದೆ. ಇದನ್ನು ಬುದ್ಧಿವಂತಿಕೆಯಿಂದ ಡಿ.ಕೆ.ಶಿವಕುಮಾರ್ ‘ಪೇಸಿಎಂ’ ಮಾಡಿದ್ದಾರೆ. ಸಿದ್ದರಾಮಯ್ಯರನ್ನು ಉದ್ದೇಶಿಸಿ ಈ ಶಬ್ದ ತಂದಿದ್ದಾರೆ. ನಮ್ಮಲ್ಲಿ ಇದನ್ನು ಹೇಳಿಸಲು ಡಿ.ಕೆ.ಶಿವಕುಮಾರ್ ಇದನ್ನು ಮಾಡಿದ್ದಾರೆ ಎಂದು ದೂರಿದರು.

> ಪಿಎಫ್‌ಐ, ಕೆಎಫ್‌ಡಿ, ಎಸ್‌ಡಿಪಿಐ ಈ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿವೆ. ಇದು ಗಂಭೀರವಾಗಲು ಸಿದ್ದರಾಮಯ್ಯ ಕಾರಣ. ಈ ದೇಶವಿರೋಧಿ ಸಂಘಟನೆಗಳ ನಿಷೇಧ ಕುರಿತಂತೆ ಅಗತ್ಯ ದಾಖಲೆ ಸಂಗ್ರಹಿಸಲಾಗುತ್ತಿದೆ. ಪೂರಕ ದಾಖಲೆಗಳು ಸಿಕ್ಕಿದರೆ ಭವಿಷ್ಯದಲ್ಲಿ ನಿಷೇಧ ಕುರಿತು ಸರಕಾರ ತೀರ್ಮಾನ ಕೈಗೊಳ್ಳಲಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ 3 ನಿರ್ಧಾರಗಳನ್ನು ತೆಗೆದುಕೊಂಡರು. ಸುಮಾರು 2 ಸಾವಿರ ಜನ ಗಲಭೆಕೋರರ ಮೇಲಿದ್ದ ಕೇಸುಗಳನ್ನು ಬಿ ರಿಪೋರ್ಟ್ ಹಾಕಿ ಹಿಂದಕ್ಕೆ ಪಡೆದರು. ಗಲಭೆ, ಹತ್ಯೆ ಮಾಡಲು ಅವರಿಗೆ ಇದು ಪ್ರೇರಣೆಯಾಯಿತು.
> ■ ನಳಿನ್ ಕುಮಾರ್ ಕಟೀಲು, ಬಿಜೆಪಿ ರಾಜ್ಯಾಧ್ಯಕ್ಷ

# ರಕ್ಷಿತಾಬಾಯಿ ಕುಟುಂಬಕ್ಕೆ ಪರಿಹಾರ ವಿತರಿಸಿದ ಸಚಿವ ಬಿ.ಎ.ಬಸವರಾಜ

ಬೆಂಗಳೂರು, ಸೆ.27: ಕೆಲವು ದಿನಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಸೋಮನಹಳ್ಳಿ ತಾಂಡ್ಯಾದ ರಕ್ಷಿತಾಬಾಯಿ(17) ಎಂಬ ವಿದ್ಯಾರ್ಥಿನಿ ಕಾಲೇಜಿಗೆ ತೆರಳಲು ಬಸ್ ಹತ್ತುವಾಗ ಕೆಳಗೆ ಬಿದ್ದ ಪರಿಣಾಮ ತಲೆಗೆ ಪೆಟ್ಟು ಬಿದ್ದು ಮೆದುಳು ನಿಷ್ಕ್ರಿಯಗೊಂಡಿತ್ತು. ಆಕೆಯ ರಕ್ಷಿತಾ ಪೋಷಕರು ಅಂಗಾಂಗಗಳನ್ನು ದಾನ ಮಾಡಿ ಸಾರ್ಥಕತೆ ಮೆರೆದಿದ್ದರು. ನಗರಾಭಿವೃದ್ಧಿ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ(ಬೈರತಿ) ಮಂಗಳವಾರ ಸೋಮನಹಳ್ಳಿ ತಾಂಡ್ಯಾಕ್ಕೆ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದ್ದಾರೆ.

ಅಲ್ಲದೆ, ಜಿಲ್ಲಾಡಳಿತ ವತಿಯಿಂದ ರಕ್ಷಿತಾಬಾಯಿ ಕುಟುಂಬಕ್ಕೆ ಐದು ಲಕ್ಷ ರೂ.ಗಳ ಚೆಕ್ ಹಾಗೂ ಬೈರತಿ ಬಸವರಾಜ ಅವರು ವೈಯಕ್ತಿಕವಾಗಿ ಎರಡು ಲಕ್ಷ ರೂ. ಮೊತ್ತದ ಚೆಕ್ ನೀಡಿದರು. ಇದೇ ವೇಳೆ ಕಡೂರು ಶಾಸಕ ಬೆಳ್ಳಿ ಪ್ರಕಾಶ್ ವೈಯಕ್ತಿಕವಾಗಿ ಒಂದು ಲಕ್ಷ ರೂ. ಮೊತ್ತದ ಚೆಕ್ ನೀಡಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

# ಬೊಮ್ಮಾಯಿ ಸರಕಾರದ ಸರ್ವಿಸ್ ಪ್ರಾಬ್ಲಮ್: ಸುರ್ಜೆವಾಲಾ



ಬೆಂಗಳೂರು, ಸೆ.27: ಬೆರಳಂಚಿನಲ್ಲಿ ಸೇವೆ ನೀಡುವ ಬಸವರಾಜ ಬೊಮ್ಮಾಯಿ ಅವರ ಟೊಳ್ಳು ಭರವಸೆ ಭರವಸೆಯಾಗಿ ಉಳಿಯಿತೇ ಹೊರತು ಬೆರಳಂಚಿಗೆ ಸೇವೆ ಸಿಗಲಿಲ್ಲ. ಬೆರಳಂಚಿಗೆ ಸೇವೆ ನೀಡುವುದಿರಲಿ ಜನ ಕಚೇರಿ ಮುಂದೆ ಕ್ಯೂ ನಿಂತರೂ ಸೇವೆ ಸಿಗುತ್ತಿಲ್ಲ. ಡಬಲ್ ಇಂಜಿನ್ ಸರಕಾರದ ಡಿಜಿಟಲ್ ಇಂಡಿಯಾ ಕಥೆಯಿದು. ಇದು ಸರ್ವರ್ ಪ್ರಾಬ್ಲಮ್ ಅಲ್ಲ, ಬೊಮ್ಮಾಯಿ ಸರಕಾರದ ಸರ್ವಿಸ್ ಪ್ರಾಬ್ಲಮ್ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಟ್ವೀಟ್ ಮಾಡಿದ್ದಾರೆ.



ವಿಶ್ವವಿಖ್ಯಾತ ಮೈಸೂರು ದಸರಾ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಅರಮನೆ ಮೈದಾನದಲ್ಲಿ ರಂಗೋಲಿ ಸ್ಪರ್ಧೆ ನಡೆಯಿತು. ಸುಮಾರು 200ಕ್ಕೂ ಹೆಚ್ಚು ಮಂದಿ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

# ವಿಜ್ಞಾನ, ಅಧ್ಯಾತ್ಮ ಒಂದೇ ನಾಣ್ಯದ ಎರಡು ಭಾಗಗಳು

## ಸಿಎಂ ಬೊಮ್ಮಾಯಿ



ಬೆಂಗಳೂರು, ಸೆ.27: ವಿಜ್ಞಾನ ಮತ್ತು ಆಧ್ಯಾತ್ಮ ಒಂದೇ ನಾಣ್ಯದ ಎರಡು ಭಾಗಗಳಿದ್ದಂತೆ. ವಿಜ್ಞಾನದಿಂದ ಅಧ್ಯಾತ್ಮಕ್ಕೆ ದಾರಿ. ಅಧ್ಯಾತ್ಮದಿಂದ ವಿಜ್ಞಾನಕ್ಕೆ ಸ್ಫೂರ್ತಿ. ಇದು ನಿರಂತರವಾಗಿ ನಡೆದಿರುವ ಪ್ರಕ್ರಿಯೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಮಂಗಳವಾರ ನಗರದ ಕಾಚರಕನಹಳ್ಳಿಯಲ್ಲಿರುವ ದಕ್ಷಿಣ ಅಯೋಧ್ಯ ಮೈದಾನದಲ್ಲಿನ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿ ವಿವೇಕಾನಂದ ಸೇವಾ ಸಮಿತಿ ವತಿಯಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧಾರ್ಮಿಕ ಆಚರಣೆಗಳಿಂದ ಆತ್ಮಸ್ಥೈರ್ಯ, ಸ್ಫೂರ್ತಿ ತುಂಬುವ ಕೆಲಸವಾದರೆ, ಜ್ಞಾನದ ಬಲದಿಂದ ಹಲವು ಆವಿಷ್ಕಾರಗಳನ್ನು ಸಾಧಿಸಿ, ಆರೋಗ್ಯ ರಕ್ಷಾ ಕವಚವನ್ನು ಮಾನವನಿಗೆ ನೀಡುವ ಕೆಲಸವನ್ನು ವಿಜ್ಞಾನ ಸಮರ್ಥವಾಗಿ ಮಾಡುತ್ತಿದೆ. ಇಂದು ಎನ್‌ಐವಿಯ ವೈರಾಲಜಿ ಬಗ್ಗೆ ದಕ್ಷಿಣ ವಲಯದ ಸಂಸ್ಥೆಯ ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಲಾಗಿದೆ ಎಂದು ಅವರು ಹೇಳಿದರು.

**ಧನ್ವಂತರಿ ಹೋಮ ತತ್ವಜ್ಞಾನ ಮತ್ತು ವಿಜ್ಞಾನ ಸಂಗಮ:** ಧನ್ವಂತರಿ ಯಾಗ ಬಹಳ ಅವಶ್ಯಕತೆ ಇದೆ. ನಮ್ಮ ಜೀವನ ಶೈಲಿ ವಿವಿಧ ರೀತಿಯಲ್ಲಿದ್ದು, ಹಲವು ರೋಗರುಜಿನಗಳನ್ನು ಮಾನವ ಕುಲವನ್ನು ಕಾಡುತ್ತಿದೆ. ರೋಗನಿರೋಧಕವಾಗಿರುವ ಮಹಾ ಧನ್ವಂತರಿಯನ್ನು ಪೂಜಿಸಿ ಉತ್ತಮ ಗುಣಗಳ ಶಕ್ತಿಯನ್ನು ಪಡೆದು ಮಾನವ ಕುಲಕ್ಕೆ ಬರುವ ಆರೋಗ್ಯದ ಆತಂಕಗಳನ್ನು ಅತ್ಯಂತ ಯಶಸ್ವಿಯಾಗಿ ಎದುರಿಸಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

> “ಲಸಿಕೆಗಳನ್ನು ಸಂಶೋಧಿಸಿದ ಲ್ಯಾಬ್‌ನಿಂದ ದಕ್ಷಿಣ ಭಾರತದಲ್ಲಿ ವೈರಾಲಜಿ ಸಂಶೋಧನೆಯ ದೊಡ್ಡ ಲ್ಯಾಬ್ ನಿರ್ಮಾಣವಾಗಲಿದೆ. ವಿಜ್ಞಾನಿಗಳು ಅಧ್ಯಾತ್ಮದಲ್ಲಿ ನಂಬಿಕೆಯಿರಿಸಿದವರಾಗಿದ್ದಾರೆ. ಧಾರ್ಮಿಕ, ಆಧ್ಯಾತ್ಮಿಕತೆಯಲ್ಲಿ ನಂಬಿಕೆಯಿಟ್ಟು, ತಮ್ಮ ಸಂಶೋಧನೆಗಳಿಂದ ಮಾನವ ಕಲ್ಯಾಣ ಮಾಡುತ್ತಿದ್ದಾರೆ.
> -ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

# ರಾಷ್ಟ್ರಪತಿ ದ್ರೌಪದಿ ಮುರ್ಮುಗೆ ಪೌರ ಸನ್ಮಾನ



ಬೆಂಗಳೂರು, ಸೆ.27: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಗೌರವಾರ್ಥ ಮಂಗಳವಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಪೌರ ಸನ್ಮಾನ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಾಲ್ಗೊಂಡು ರಾಷ್ಟ್ರಪತಿಯನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಎ.ನಾರಾಯಣಸ್ವಾಮಿ, ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸಭಾಪತಿ ರಘುನಾಥ್ ರಾವ್ ಮಲ್ಕಾಪುರೆ ಉಪಸ್ಥಿತರಿದ್ದರು.

# ದಸರಾ ಸಂಭ್ರಮ: ಸೆ.30ರಂದು ಚೆಸ್ ಪಂದ್ಯ

ಮಂಡ್ಯ, ಸೆ.27: ಜಿಲ್ಲಾಡಳಿತ, ಜಿಪಂ, ಶ್ರೀರಂಗಪಟ್ಟಣ ದಸರಾ ಕ್ರೀಡಾ ಉಪ ಸಮಿತಿ ಹಾಗೂ ಮಂಡ್ಯ ಚೆಸ್ ಅಕಾಡಮಿ ಸಹಯೋಗದಲ್ಲಿ ಸೆ.30ರಂದು ಬೆಳಗ್ಗೆ 9 ಗಂಟೆಗೆ ಶ್ರೀರಂಗಪಟ್ಟಣದ ಮಯೂರ ರಿವರ್ ವ್ಯೂ ಬಳಿ ಇರುವ ಶ್ರೀಮಂಜುನಾಥ ಸಮುದಾಯ ಭವನದಲ್ಲಿ ದಸರಾ ಸಂಭ್ರಮ ಚೆಸ್ ಪಂದ್ಯಾಟವನ್ನು ಆಯೋಜಿಸಲಾಗಿದೆ.

ಸ್ಪರ್ಧೆಯು ಪ್ರಾಥಮಿಕ ಶಾಲಾ, ಹಿರಿಯ ಪ್ರಾಥಮಿಕ ಶಾಲಾ, ಪ್ರೌಢಶಾಲಾ, ಸಾರ್ವಜನಿಕ (ಮುಕ್ತ) ಹಾಗೂ ದಿವ್ಯಾಂಗ ವಿಭಾಗಗಳಲ್ಲಿ ನಡೆಯಲಿದ್ದು, ಬಾಲಕಿಯರಿಗೆ ಪ್ರತ್ಯೇಕ ಬಹುಮಾನವಿರುತ್ತದೆ. ಪ್ರವೇಶ ಉಚಿತವಾಗಿರುತ್ತದೆ. 9 ವಿಭಾಗಗಳ ವಿಜೇತ ಮೊದಲ ಮೂರು ಸ್ಪರ್ಧಿಗಳಿಗೆ ದಸರಾ ಪದಕಗಳನ್ನು ನೀಡಲಾಗುವುದು.

ಆಸಕ್ತಿಯುಳ್ಳ ಆಟಗಾರರು ತಮ್ಮ ಹೆಸರನ್ನು ಸೆ.30ರ ಬೆಳಗ್ಗೆ 9ಗಂಟೆಯೊಳಗೆ ಸ್ಥಳದಲ್ಲಿಯೇ ನೋಂದಾಯಿಸಬಹುದು. ಮೊದಲ 150 ಆಟಗಾರರಿಗೆ ಆದ್ಯತೆ ಇರುತ್ತದೆ. ಹೆಚ್ಚಿನ ಮಾಹಿತಿಗೆ ಪಂದ್ಯಾವಳಿಯ ಆಯೋಜಕಿ ಮಾಧುರಿ ಎನ್.(ಮೊ:8050244338) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟನೆ ತಿಳಿಸಿದೆ.

# ವಿಶ್ವಪ್ರವಾಸೋದ್ಯಮ ಜಾಥಾಕ್ಕೆ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ

ಮೈಸೂರು, ಸೆ.27: ಮೈಸೂರು ನಗರದ ಅರಮನೆಯ ಮುಂಭಾಗದಲ್ಲಿರುವ ಕೋಟೆ ಆಂಜನೇಯ ಸ್ವಾಮೀ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ವಿಶ್ವಪ್ರವಾಸೋದ್ಯಮದ ಜಾಥಾ ಕಾರ್ಯಕ್ರಮಕ್ಕೆ ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಚಾಲನೆ ನೀಡಿದರು.



ಬಳಿಕ ಮಾತನಾಡಿದ ಸಚಿವರು, ಟ್ರಾವೆಲ್ಸ್ ಅಸೋಸಿಯೇಷನ್, ಹೊಟೇಲ್ ಮಾಲಕರ ಸಂಘ ಸೇರಿದಂತೆ ನಾನಾ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿರುವ ಈ ಮೆರವಣಿಗೆ ಪ್ರವಾಸಿಗರನ್ನು ಸೆಳೆಯಲು ಸಹಕಾರಿಯಾಗಲಿದೆ ಎಂದರು.

ಈ ಬಾರಿ ಅದ್ದೂರಿಯಾಗಿ ದಸರಾ ಆಚರಣೆ ಮಾಡುತ್ತಿರುವುದರಿಂದ ಪ್ರವಾಸೋದ್ಯಮಕ್ಕೆ ಚೇತರಿಕೆ ಸಿಗಲಿದೆ. ದೇಶ ವಿದೇಶಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಚಾಲನೆ ನೀಡುತ್ತಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ಗೋಲ್ಡ್‌ಪಾಸ್ ಬಗ್ಗೆ ರೂಪುರೇಷೆಗಳನ್ನು ಮಾಡಿದ ನಂತರ ಸಭೆಯಲ್ಲಿ ತೀರ್ಮಾನ ಕೈಗೊಂಡು ತಿಳಿಸಲಾಗುವುದು ಎಂದರು.

ಜಿ.ಟಿ.ದೇವೇಗೌಡ ಅವರು ಮಾತನಾಡಿ, ಈ ವರ್ಷ ಯೋಗಾ ದಿವಸವನ್ನು ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಬಂದು ಆಚರಿಸಿದ್ದು, ಈ ಬಾರಿಯ ದಸಾರ ಮಹೋತ್ಸವಕ್ಕೆ ರಾಷ್ಟ್ರಪತಿ ಬಂದು ಉದ್ಘಾಟಿಸಿದ್ದರಿಂದ ವಿಶ್ವಮಟ್ಟದಲ್ಲಿ ಮೈಸೂರನ್ನು ಹಾಗೂ ಮೈಸೂರು ದಸರಾವನ್ನು ನೋಡುವಂತೆ ಮಾಡಿದೆ. ಈ ಬಾರಿಯ ದಸರಾ ಮಹೋತ್ಸವದಲ್ಲಿ ಎಲ್ಲರೂ ಸಂಭ್ರಮದಿಂದ ಸಡಗರದಿಂದ ಆಚರಿಸುವ ಮೂಲಕ ಯಶಸ್ವಿಗೊಳಿಸೋಣ ಎಂದರು.

ಶಾಸಕರಾದ ಎಲ್. ನಾಗೇಂದ್ರ, ಎಸ್.ಎ.ರಾಮದಾಸ್, ಬಿಜೆಪಿ ಮುಖಂಡ ಶ್ರೀವತ್ಸ ಸೇರಿದಂತೆ ಇತರರು ಹಾಜರಿದ್ದರು.

## ಪ್ರವಾಸಿಗರ ಮನಸೆಳೆದ ಕಲಾತಂಡಗಳು

ಇದೇ ಸಂದರ್ಭದಲ್ಲಿ ನಾನಾ ರಾಜ್ಯಗಳ ಸಂಸ್ಕೃತಿಗಳನ್ನು ಬಿಂಬಿಸುವ ವೇಷಭೂಷಣಗಳು ಎಲ್ಲರ ಗಮನಸೆಳೆದವು. ಬ್ಯಾಂಡ್ ಸೆಟ್, ಡೊಳ್ಳುಕುಣಿತ, ಕಂಸಾಳೆನೃತ್ಯ, ತಮಟೆವಾದನ, ಹುಲಿವೇಷ, ಕಲಾ ತಂಡಗಳು ಮೆರವಣಿಗೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡು ನೋಡುಗರ ಗಮನ ಸೆಳೆದವು.

# ಸಿಸಿಬಿ, ಎಸಿಬಿ ಹೆಸರಿನಲ್ಲಿ ವಸೂಲಿ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ ಸೆರೆ

ಬೆಂಗಳೂರು, ಸೆ.27: ಭ್ರಷ್ಟಚಾರ ನಿಗ್ರಹ ದಳ, ಸಿಸಿಬಿ ಹೆಸರಿನಲ್ಲಿ ವಂಚನೆ ಮಾಡಿದ್ದ ಆರೋಪದಡಿ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ ಯೋರ್ವನನ್ನು ಕೋಡಿಗೆಹಳ್ಳಿ ಪೊಲೀಸರು ಬಂಧಿಸಿರುವುದಾಗಿ ವರದಿಯಾಗಿದೆ.

ಆರೋಪಿ ತಾನು ಸಿಸಿಬಿ ಪೊಲೀಸ್ ಎಂದು ಹೇಳಿ ಸ್ಪಾ ಆ್ಯಂಡ್ ಸೆಲೂನ್‌ನಲ್ಲಿ 20 ಸಾವಿರ ರೂ. ವಸೂಲಿ ಮಾಡಿದ್ದ ಎನ್ನಲಾಗಿದೆ. ಈ ಸಂಬಂಧ ಸ್ಪಾ ಮಾಲಕಿ ಸ್ಮಿತಾ ಎಂಬಾಕೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಆರೋಪಿ ಆನಂದ್‌ನನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿವೊಬ್ಬರು ತಿಳಿಸಿದ್ದಾರೆ.

ಇನ್ನೂ, ಆರೋಪಿಯೂ ಸದ್ಯ ಸಿಸಿಬಿ ಎಸಿಪಿಯಾಗಿರುವ ರೀನಾ ಸುವರ್ಣಾ ಅವರ ಆಪ್ತ ಎಂದು ಹೇಳಿ ವಸೂಲಿ ಮಾಡುತ್ತಿದ್ದ ಮಾಹಿತಿ ವಿಚಾರಣೆಯಲ್ಲಿ ಗೊತ್ತಾಗಿದೆ. ಈತ ಹಿಂದೆ ಪೀಣ್ಯಾ ಅಗ್ನಿ ಶಾಮಕ ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿದ್ದನು ಎಂದು ತಿಳಿದುಬಂದಿದೆ.

ಇದೇ ರೀತಿಯ ಕೃತ್ಯದ ಬಗ್ಗೆ ಅಗ್ನಿಶಾಮಕ ಅಧಿಕಾರಿಗಳಿಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಆನಂದ್‌ನನ್ನು ಅಮಾನತು ಮಾಡಿದ್ದರು ಎನ್ನಲಾಗಿದೆ. ನಾಲ್ಕು ತಿಂಗಳ ಹಿಂದೆ ಆಸ್ಪತ್ರೆಯೊಂದಕ್ಕೆ ತೆರಳಿ ಅಲ್ಲಿಯೂ ಹಣ ವಸೂಲಿ ಮಾಡಿದ್ದ ಎನ್ನುವ ಮಾಹಿತಿ ವಿಚಾರಣೆಯಲ್ಲಿ ತಿಳಿದುಬಂದಿದೆ.

# ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಸೆ.27: ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮಾಡಲು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ಸೆ.30ರೊಳಗೆ ಅರ್ಜಿ ಸಲ್ಲಿಸುವಂತೆ ತಿಳಿಸಿದೆ.

ಬಿಎ ಹಾನರ್ಸ್‌ನಲ್ಲಿ ಕನ್ನಡ, ಇಂಗ್ಲಿಷ್, ರಾಜ್ಯಶಾಸ್ತ್ರ ಮತ್ತು ಇತಿಹಾಸ, ಬಿ.ಎಸ್ಸಿ. ಆನರ್ಸ್‌ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಇಂಗ್ಲಿಷ್ ಮತ್ತು ಕನ್ನಡ ವಿಷಯಗಳನ್ನು, ಬಿ.ಕಾಂ. ಹಾಗೂ ಬಿಬಿಎ ಕೋರ್ಸ್‌ಗಳು ವಿಷಯಗಳನ್ನು, ಭೂಗೋಳಶಾಸ್ತ್ರ ಮತ್ತು ಜೈವಿಕ ವಿಜ್ಞಾನದ ವಿಷಯಗಳನ್ನು ಬೋಧಿಸಲು ಅರ್ಹರನ್ನು ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು ಎಂದು ವಿವಿ ಪ್ರಕಟನೆ ಹೊರಡಿಸಿದೆ.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ www.bangalore-university.ac.in ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟನೆ ತಿಳಿಸಿದೆ.

## ಸ್ಟೀಲ್ ಬ್ರಿಡ್ಜ್ ಕಳಪೆ ಕಾಮಗಾರಿ ವಿರುದ್ಧ ಪ್ರತಿಭಟನೆ

# ಮೋಹನ್ ದಾಸರಿ ಸಹಿತ 18 ಆಪ್ ಮುಖಂಡರಿಗೆ ಸಮನ್ಸ್ ಜಾರಿ

ಬೆಂಗಳೂರು, ಸೆ.27: ನಗರದ ಶಿವಾನಂದ ವೃತ್ತದ ಸ್ಟೀಲ್ ಬ್ರಿಡ್ಜ್‌ನಲ್ಲಿನ ಕಳಪೆ ಕಾಮಗಾರಿಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದ ಆಪ್ ಮುಖಂಡ ಮೋಹನ್ ದಾಸರಿ, ಜಗದೀಶ್ ವಿ. ಸದಂ, ಸುರೇಶ್ ರಾಥೋಡ್, ಕುಶಲ ಸ್ವಾಮಿ, ಚನ್ನಪ್ಪ ಗೌಡ ನೆಲ್ಲೂರು, ಉಷಾ ಮೋಹನ್ ಸೇರಿದಂತೆ ಒಟ್ಟು 18 ಕಾರ್ಯಕರ್ತ ವಿರುದ್ಧ ಸಮನ್ಸ್ ಜಾರಿಯಾಗಿದೆ.

ಸ್ಟೀಲ್ ಬ್ರಿಡ್ಜ್‌ನಲ್ಲಿ ಹಲವು ಲೋಪದೋಷಗಳು ಕಂಡುಬಂದ ಹಿನ್ನೆಲೆಯಲ್ಲಿ ಆ.29ರಂದು ಆಮ್ ಆದ್ಮಿ ಪಾರ್ಟಿ ಮುಖಂಡರು ‘ಶೇ.40 ಕಮಿಷನ್ ಮೇಲ್ಸೇತುವೆ’ ಹೆಸರಿನಲ್ಲಿ ವಿನೂತನ ಪ್ರತಿಭಟನೆ ನಡೆಸಿದ್ದರು. ಇದರಲ್ಲಿ ಭಾಗವಹಿಸಿದ್ದ ಆಮ್ ಆದ್ಮಿ ಪಾರ್ಟಿ ಮುಖಂಡರ ವಿರುದ್ಧ ಪೊಲೀಸ್ ಇಲಾಖೆಯು ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯದ ಸಮನ್ಸ್ ಜಾರಿಗೊಳಿಸಿದೆ.

ಈ ಸಂಬಂಧ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಆಪ್ ಮುಖಂಡ ಮೋಹನ್ ದಾಸರಿ, ‘ಶಿವಾನಂದ ವೃತ್ತದ ಸ್ಟೀಲ್ ಸೇತುವೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಳಪೆ ಗುಣಮಟ್ಟದ ಬೇರಿಂಗ್, ಶಾಕ್ ಅಬ್ಸಾರ್ವರ್ ಬಳಸಿ ನಿರ್ಮಿಸಿರುವ ಅನುಮಾನ ಮೂಡುತ್ತದೆ. ಸೇತುವೆಯಲ್ಲಿ ಸುಮಾರು 20 ಮೀಟರ್ ಗೊಮ್ಮೆ ಜಾಯಿಂಟ್‌ಗಳಿದ್ದು, ಅಲ್ಲಿ ವಾಹನ ಸವಾರರಿಗೆ ಕಿರಿಕಿರಿಯಾಗುವಂತಹ ಅವೈಜ್ಞಾನಿಕ ಹಂಪುಗಳನ್ನು ನಿರ್ಮಿಸಲಾಗಿದೆ ಎಂದರು.

ಲಘು ವಾಹನ ಸಂಚರಿಸಿದರೂ ಸೇತುವೆಯು ವೈಬ್ರೇಟ್ ಆಗುತ್ತಿದೆ. ಕಳಪೆ ಕಾಮಗಾರಿಯಿಂದಾಗಿ ದೋಷ ಕಂಡುಬಂದ ಹಿನ್ನೆಲೆಯಲ್ಲಿ ಸ್ಟೀಲ್ ಬ್ರಿಡ್ಜ್ ಮೇಲಿನ ಸಂಚಾರಕ್ಕೆ ಸರಕಾರವೇ ನಿರ್ಬಂಧ ಹೇರಿದೆ. ಇದರ ವಿರುದ್ಧ ಧ್ವನಿ ಎತ್ತಿದ್ದಕ್ಕೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಅಕ್ರಮವನ್ನು ಮುಚ್ಚಿಡುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಅವರು ಕಿಡಿಕಾರಿದರು.

> “ರಾಜ್ಯದ ಭ್ರಷ್ಟ ಬಿಜೆಪಿ ಸರಕಾರವು ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡು ಪ್ರಜಾಪ್ರಭುತ್ವದ ಕತ್ತು ಹಿಸುಕುವ ಪ್ರಯತ್ನ ಮಾಡುತ್ತಿದೆ. ನಾವು ಶಾಂತಿಯುತವಾಗಿ ಪ್ರತಿಭಟನೆ ಮಾಡಿದ್ದರೂ ಮೊಕದ್ದಮೆ ದಾಖಲಿಸಿಕೊಂಡಿರುವುದು ಖಂಡನೀಯ. ರಾಜ್ಯ ಬಿಜೆಪಿಯು ಆಮ್ ಆದ್ಮಿ ಪಾರ್ಟಿಯ ಭಯದಿಂದ ಬಳಲುತ್ತಿರುವುದು ಇದರಿಂದ ಸ್ಪಷ್ಟವಾಗಿದೆ.
> -ಮೋಹನ್ ದಾಸರಿ, ಆಪ್ ಮುಖಂಡ

# ‘ಭಾರತ್ ಜೋಡೋ’ ಅಭಿಯಾನಕ್ಕೆ ಕೈ ಜೋಡಿಸಿ’

ಬೆಂಗಳೂರು, ಸೆ.27: ದೇಶದ ಅನೇಕ ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳ ನೀತಿಗಳು ಊಳಿಗಮಾನ್ಯ, ವಸಾಹತುಶಾಹಿ, ಹುಸಿ-ಸಮಾಜವಾದಿಯನ್ನೇ ಪ್ರತಿಪಾದಿಸುತ್ತಿವೆ. ಸಂವಿಧಾನದ ಮೂಲ ಉದ್ದೇಶಗಳನ್ನೇ ಹಾಳು ಮಾಡುತ್ತಿವೆ. ಇದನ್ನು ತಡೆಯಲು ರಾಹುಲ್ ಗಾಂಧಿ ಹಮ್ಮಿಕೊಂಡಿರುವ ಭಾರತ್ ಜೋಡೋ ಅಭಿಯಾನಕ್ಕೆ ಕೈ ಜೋಡಿಸುವಂತೆ ಮಹಾರಾಷ್ಟ್ರ ರಾಜ್ಯ ಯೋಜನಾ ಆಯೋಗದ ಮಾಜಿ ಸದಸ್ಯ ಪ್ರೊ.ಎಚ್.ಎಂ.ದೇಸರ್ದಾ ಕರೆ ನೀಡಿದ್ದಾರೆ.

ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶವು ಸ್ವಾತಂತ್ರ್ಯದ 75 ವರ್ಷಗಳನ್ನು ಕಳೆದರೂ, ವಸಾಹತುಶಾಹಿಗಳು ಔಪಚಾರಿಕವಾಗಿ ಭಾರತವನ್ನು ತೊರೆದರೂ, ಬಿಜೆಪಿ ಸರಕಾರವು ದಿವಾಳಿ ನೀತಿಗಳನ್ನು ಜಾರಿಗೊಳಿಸುತ್ತಿದೆ ಎಂದು ಆರೋಪಿಸಿದರು.

ನೋಟು ರದ್ದತಿ, ರೈತ ವಿರೋಧಿ, ಕಾರ್ಮಿಕ ವಿರೋಧಿ, ಮಹಿಳಾ ವಿರೋಧಿ, ದಲಿತ ವಿರೋಧಿ ನೀತಿಗಳನ್ನು ಮೋದಿ ಸರಕಾರವು ಜಾರಿಗೊಳಿಸಿದೆ. ಇದರಿಂದ ದೇಶದ ಆರ್ಥಿಕತೆ ಸೇರಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತಿ ಹದಗೆಟ್ಟಿದೆ. ನೀತಿಗಳನ್ನು ವಿರೋಧಿಸಲು ಕಾಂಗ್ರೆಸ್ ಪಕ್ಷ ಮತ್ತು ನಾಗರಿಕ ಸಮಾಜ ಸಂಘಟನೆಗಳು ಜಂಟಿಯಾಗಿ ಭಾರತ್ ಜೋಡೋ ಅಭಿಯಾನ ಆಯೋಜಿಸಿವೆ ಎಂದು ದೇಸರ್ದಾ ಹೇಳಿದರು.

# ಬೆಂಗಳೂರು ತಹಶೀಲ್ದಾರ್ ಕಚೇರಿಗಳಿಗೆ ಲೋಕಾಯುಕ್ತ ಭೇಟಿ

ಬೆಂಗಳೂರು, ಸೆ.27: ಇಲ್ಲಿನ ಬೆಂಗಳೂರು ಪೂರ್ವ ತಾಲೂಕು ತಹಶೀಲ್ದಾರ್ ಕಚೇರಿಗೆ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲಂಚ ಮತ್ತು ನಿಧಾನಗತಿಯ ಕೆಲಸದ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆ ತಾಲೂಕು ತಹಶೀಲ್ದಾರ್ ಕಚೇರಿಯಲ್ಲಿರುವ ಎಲ್ಲ ಇಲಾಖೆಗಳ ದಾಖಲೆ ಪರಿಶೀಲನೆ ನಡೆಸಿದ್ದು, ದಾಖಲೆ ಪರಿಶೀಲಿಸುವ ಸಮಯದಲ್ಲಿ ಸಿಬ್ಬಂದಿಗೆ ಲೋಕಾಯುಕ್ತರು ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ, ಪ್ರತಿ ದಿನ ನಮಗೆ ಎಲ್ಲ ತಾಲೂಕು ಕಚೇರಿಗಳಲ್ಲಿ, ಸಹಾಯಕ ಕಚೇರಿಗಳಲ್ಲಿ ನಿಧಾನಗತಿಯಲ್ಲಿ ಕೆಲಸಗಳಾಗುತ್ತಿವೆ. ಕಡತಗಳು ಬೇಗನೆ ಮುಂದಕ್ಕೆ ಹೋಗುವುದಿಲ್ಲ. ಈ ಸಾಕಷ್ಟು ದೂರುಗಳು ಬಂದ ಹಿನ್ನೆಲೆ ಒಂಬತ್ತು ತಂಡಗಳೊಂದಿಗೆ ದಿಢೀರ್ ಕಚೇರಿಗಳಿಗೆ ಭೇಟಿ ನೀಡಿ ಎಲ್ಲ ಇಲಾಖೆಗಳ ಕಡತಗಳನ್ನು ಪರಿಶೀಲನೆ ನಡೆಸಿದ್ದೇವೆ ಎಂದರು.

ಕರ್ನಾಟಕ ಸರ್ಕಾರ

**ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತುಮಕೂರು–572104**

ಖನಿಜ ಭವನ, ಸ್ಫೂರ್ತಿ ಲೇಔಟ್, ಬದ್ದಿಹಳ್ಳಿ, ರಿಂಗ್ ರೋಡ್, ತುಮಕೂರು.
ದೂ: 0816–2955761, ಇ–ಮೇಲ್: dmgtumkur@gmail.com

ಸಂ: ಗಭೂಇ/ಉನಿತು/ಅ.ಶಿ.ದಿ/ಇ–ಹರಾಜು/ಪ್ರಕಟಣೆ–02/2022–23 ದಿ: 22.09.2022

**ಮರು ಟೆಂಡರ್ ಅಧಿಸೂಚನೆ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ತಾವರೆಕೆರೆ ಪೊಲೀಸ್ ಸಮುಚ್ಚಯದ ಆವರಣ, ತಿಪಟೂರು ತಾಲ್ಲೂಕು, ಇಲಾಖೆಯ ಚೌಡ್ಲಾಪುರ ತನಿಖಾ ಠಾಣೆ ಮತ್ತು ಗುಬ್ಬಿ ತಾಲ್ಲೂಕು, ಹಿಂಡಸ್ಕೆರೆ ಕಾವಲ್ ಮತ್ತು ಕಡಬ ಗ್ರಾಮಗಳ ವ್ಯಾಪ್ತಿಯ ವಿವಿಧ ಸ.ನಂ ಪ್ರದೇಶಗಳಲ್ಲಿ ಅನಧಿಕೃತ ಅಲಂಕಾರಿಕ ಶಿಲೆ ಗಣಿಗಾರಿಕೆ/ಸಾಗಾಣಿಕೆ ಅಡಿಯಲ್ಲಿ ವಶಪಡಿಸಿಕೊಳ್ಳಲಾದ ಒಟ್ಟು 126 ಶಿಲಾದಿಮ್ಮಿಗಳನ್ನು ಇ–ಹರಾಜು ಮೂಲಕ ವಿಲೇಮಾಡಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ ಮೇಲ್ಕಂಡಂತೆ ತಿಳಿಸಿರುವ ವಿವಿಧ ಪ್ರದೇಶಗಳಲ್ಲಿ ವಶಪಡಿಸಿಕೊಂಡಿರುವ ಒಟ್ಟು 126 ಅಲಂಕಾರಿಕ ಶಿಲಾ ದಿಮ್ಮಿಗಳನ್ನು ಇ–ಹರಾಜು ಮೂಲಕ ವಿಲೇ ಮಾಡಲು “ಎಲ್ಲಿದೆಯೋ, ಹೇಗಿದೆಯೋ ಹಾಗೆ” ಷರತ್ತು ವಿಧಿಸಿ, ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಇ–ಹರಾಜು ಕುರಿತು ದಿನಾಂಕ: **10.10.2022 ರಂದು ಬೆಳಿಗ್ಗೆ 11:00ರಿಂದ ಮಧ್ಯಾಹ್ನ 2:00 ರವರೆಗೆ** ನಿಗಧಿಪಡಿಸಿ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸದರಿ ಒಟ್ಟು 126 ಅಲಂಕಾರಿಕ ಶಿಲಾ ದಿಮ್ಮಿಗಳ ಒಟ್ಟು ಪ್ರಮಾಣ ಅಂದಾಜು 551.0312 ಘನ ಮೀಟರ್ (1585.226 ಮೆ.ಟನ್) ಹಾಗೂ ಒಟ್ಟು ಮೌಲ್ಯ **ರೂ. 16,63,564/– ಗಳು** ಆಗಿರುತ್ತದೆ. ಇ–ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವವರು ಇ– ಹರಾಜಿನ ನಿಯಮ, ಷರತ್ತು ಮತ್ತು ನಿಬಂಧನೆಗಳ ಕುರಿತು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಪ್ರಕಟಿಸಿರುವ ಇ–ಹರಾಜನ್ನು ಪರಿಶೀಲಿಸಿ ಮತ್ತು ಈ ಕಛೇರಿಯನ್ನು ಸಂಪರ್ಕಿಸಿ ಮುಂಚಿತವಾಗಿ ತಿಳಿದುಕೊಂಡು, ಕಲ್ಲುದಿಮ್ಮಿಗಳು ಇರುವ ಸ್ಥಳ, ಕಲ್ಲುದಿಮ್ಮಿಗಳ ಸಂಖ್ಯೆ, ಕಲ್ಲುದಿಮ್ಮಿಗಳ ಗುಣಮಟ್ಟ ಮತ್ತು ಕಲ್ಲುದಿಮ್ಮಿಗಳನ್ನು ಸಾಗಿಸಲು ರಸ್ತೆ ಸಂಪರ್ಕ ಮತ್ತು ಇನ್ನಿತರೆ ಹೆಚ್ಚಿನ ವಿಷಯಗಳ ಬಗ್ಗೆ ಸ್ವತಃ ಸ್ಥಳ ಪರಿಶೀಲನೆ ಮಾಡಿ ಖುದ್ದಾಗಿ ಪರಿಶೀಲಿಸಿಕೊಂಡು ಹಾಗೂ ಖಾತರಿಪಡಿಸಿಕೊಂಡ ನಂತರ ಆಸಕ್ತರು ತಮ್ಮ ವಾಸಸ್ಥಳ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್, ಚುನಾವಣೆ ಗುರುತಿನ ಚೀಟಿ, ಪಾನ್ ಕಾರ್ಡ್, ಸಂಸ್ಥೆಗಳಾಗಿದ್ದಲ್ಲಿ ನೊಂದಣಿ ಪತ್ರ ಹಾಗೂ GST ದಾಖಲಾತಿಗಳೊಂದಿಗೆ EMD ಮೊತ್ತ **ರೂ. 4,15,891/–** ಗಳನ್ನು online ನಲ್ಲಿ ಪಾವತಿಸಿ ಕರ್ನಾಟಕ ಸರ್ಕಾರದ **e-procurement portal https:://eproc.karnataka.gov.in** ನ ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಇ–ಹರಾಜಿನಲ್ಲಿ ಭಾಗವಹಿಸಿ, ಯಶಸ್ವಿ ಬಿಡ್‌ದಾರರಾಗುವವರು ಸರ್ಕಾರಕ್ಕೆ ಸಲ್ಲಿಸಬೇಕಾದ ಹರಾಜಿನ ಪೂರ್ಣ ಮೊತ್ತ ಮತ್ತು ವಿವಿಧ ತೆರಿಗೆಗಳಾದ ರಾಜಧನ, ಡಿ.ಎಂ.ಎಫ್, ಟಿ.ಸಿ.ಎಸ್ ಮತ್ತು ಇನ್ನಿತರೆ ಶುಲ್ಕಗಳನ್ನು ನಿಯಮಾನುಸಾರ ಪಾವತಿಸಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಸ್ಫೂರ್ತಿ ಲೇಔಟ್, ಬಡ್ಡಿಹಳ್ಳಿ ರಿಂಗ್ ರೋಡ್, ತುಮಕೂರು ಜಿಲ್ಲೆ ರವರನ್ನು ಕಛೇರಿ ವೇಳೆಯಲ್ಲಿ ಹಾಗೂ ಕಛೇರಿಯ ದೂರವಾಣಿ ಸಂಖ್ಯೆ: 0816–2955761 ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದೆಂದು ಸಾರ್ವಜನಿಕರಿಗೆ ಈ ಮೂಲಕ ಅಧಿಸೂಚನೆ ಪ್ರಕಟಿಸಲಾಗಿರುತ್ತದೆ.

ಸಹಿ/– ಉಪ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಯವರು
ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ), ತುಮಕೂರು.
DIPR/TUM/552/MCA/2022-23

# ಬಿಬಿಎಂಪಿ ವಾರ್ಡ್‌ಗಳಿಗೆ ಮೀಸಲಾತಿ ನಿಗದಿ ಒಬಿಸಿ ಆಯೋಗದ ವರದಿ ಬಗ್ಗೆ ಮಾಹಿತಿ ಕೇಳಿದ ಹೈಕೋರ್ಟ್



ಬೆಂಗಳೂರು, ಸೆ.27: ಬಿಬಿಎಂಪಿ ವಾರ್ಡ್‌ಗಳಿಗೆ ಮಹಿಳಾ ಮೀಸಲಾತಿ ಮರು ರೂಪಿಸುವ ಬಗ್ಗೆ ತಿಳಿಸುವಂತೆ ಹಾಗೂ ಮೀಸಲಾತಿ ಸಂಬಂಧ ಇತರ ಒಬಿಸಿ ಆಯೋಗದ ವರದಿಗೆ ಯಾವ ದಾಖಲೆಯನ್ನು ಆಧರಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ಹೈಕೋರ್ಟ್ ರಾಜ್ಯ ಸರಕಾರಕ್ಕೆ ನಿರ್ದೇಶಿಸಿದೆ.

ನಗರದ ಕೆ.ಮಹದೇವ ಎಂಬವರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದಿಸಿದ ಮಾಜಿ ಅಡ್ವೊಕೇಟ್ ಜನರಲ್, ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ಅವರು, ಬಿಬಿಎಂಪಿ ವಾರ್ಡ್‌ವಾರು ಮೀಸಲಾತಿ ನಿಗದಿಯಲ್ಲಿ ನಿಯಮ ಪಾಲನೆಯಾಗಿಲ್ಲ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಭಕ್ತವತ್ಸಲ ಸಮಿತಿ ನೀಡಿರುವ ವರದಿ ಆಧರಿಸಿ ಮೀಸಲಾತಿ ಕಲ್ಪಿಸಲಾಗಿದೆ ಎಂದು ಸರಕಾರ ಹೇಳಿದೆ.

ಆದರೆ, ಸುಪ್ರೀಂಕೋರ್ಟ್ ಹೇಳಿರುವ ಮೂರು ಹಂತದ ಪರಿಶೀಲನೆಯನ್ನು ಭಕ್ತವತ್ಸಲ ಸಮಿತಿಯೇ ಅನ್ವಯಿಸಿಕೊಂಡಿಲ್ಲ. ಸರಕಾರ ಸಹ ಮೀಸಲಾತಿ ಕಲ್ಪಿಸುವಾಗ ಈ ಅಂಶವನ್ನು ಪರಿಗಣಿಸಿಲ್ಲ ಎಂದು ನ್ಯಾಯಪೀಠಕ್ಕೆ ವಿವರಿಸಿದರು. ರಾಜಕೀಯ ಮೀಸಲಾತಿಗೆ ಮಾನದಂಡವೇ ಬೇರೆ ಇದೆ. ಶಿಕ್ಷಣ ಹಾಗೂ ಉದ್ಯೋಗದಲ್ಲಿ ನೀಡುವಂತೆ ರಾಜಕೀಯ ಮೀಸಲಾತಿ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಯಾವ ಜಾತಿಗಳಿಗೆ ರಾಜಕೀಯ ಪ್ರಾತಿನಿಧ್ಯವಿಲ್ಲವೋ ಅಂತಹ ಜಾತಿಗಳಿಗೆ ಮೀಸಲಾತಿ ಕಲ್ಪಿಸಬೇಕಾಗುತ್ತದೆ. ಆದರೆ, ಬಿಬಿಎಂಪಿ ವಾರ್ಡ್ ಮೀಸಲಾತಿ ನಿಗದಿಯಲ್ಲಿ ನಿಯಮ ಪಾಲನೆಯಾಗಿಲ್ಲ. ಹೀಗಾಗಿ, ಬಿಬಿಎಂಪಿ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು ಎಂದು ಪೀಠಕ್ಕೆ ಮನವಿ ಮಾಡಿದರು. ರಾಜ್ಯ ಚುನಾವಣಾ ಆಯೋಗದ ಪರ ವಕೀಲರೂ ವಾದಿಸಿದರು. ವಕೀಲರ ವಾದ ಆಲಿಸಿದ ನ್ಯಾಯಪೀಠವು ವಿಚಾರಣೆಯನ್ನು ಮುಂದೂಡಿಕೆ ಮಾಡಿತು.

# ಚಿತ್ರಕಲಾ ಪರಿಷತ್‌ನಲ್ಲಿ ‘ದಸರಾ ಸಂಭ್ರಮ’

ಬೆಂಗಳೂರು, ಸೆ.27: ದಸರಾ ಹಬ್ಬದ ಪ್ರಯುಕ್ತ ಕರ್ನಾಟಕ ಚಿತ್ರಕಲಾ ಪರಿಷತ್‌ನ ಆರ್ಟಿಸಾನ್ಸ್ ಬಝಾರ್‌ನಲ್ಲಿ ಸೆ.29ರಿಂದ ಅ.9ರವರೆಗೆ 11 ದಿನಗಳ ಕಾಲ ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳ ಅನ್ನು ಆಯೋಜಿಸಲಾಗಿದೆ.

ಈ ಮೇಳದಲ್ಲಿ ದೇಶದ ವಿವಿಧ ಭಾಗಗಳ ಕರಕುಶಲಕಾರರು ತಯಾರಿಸಿದ ಕರಕುಶಲ ವಸ್ತುಗಳು, ಆಟಿಕೆಗಳು, ಉಡುಪುಗಳು ಸೇರಿದಂತೆ ಇನ್ನಿತರ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯುತ್ತವೆ. ಮನೆಯನ್ನು ಅಲಂಕಾರ ಮಾಡುವ ಉತ್ಪನ್ನಗಳು, ಹ್ಯಾಂಡ್‌ಲೂಮ್‌ಗಳು, ಕರಕುಶಲ ವಸ್ತುಗಳು, ಬಟ್ಟೆ, ಮರದ ಆಟಿಕೆಗಳು, ಆಭರಣಗಳು, ಬೆಡ್ ಲೈನೆನ್, ಕಲಾಕೃತಿಗಳು, ಪೀಠೋಪಕರಣಗಳು, ಮ್ಯಾಟ್‌ಗಳು, ಪಿಂಗಾಣಿ ವಸ್ತುಗಳು ಸೇರಿದಂತೆ ನೂರಾರು ಬಗೆಯ ಉತ್ಪನ್ನಗಳು ಈ ಪ್ರದರ್ಶನದಲ್ಲಿರಲಿವೆ ಎಂದು ಪ್ರಕಟನೆ ತಿಳಿಸಿದೆ.

**IN THE COURT OF ADDL CIVIL JUDGE & JMFC AT SAKLESHPUR**
O.S. NO. 68/2020
PLAINTIFF : **Sri. SANJAY GHANTI**
Canara Bank
Shukravarsanthe
V/S
DEFENDANT :Sri. Anjan Nayak S/o Chakradar Nayak, r/o #41, 1A Main, 1A cross, Karyana Palya, Hennur Main Road, Lingarajapuram, Banglore-560084

**Summons to the defendant**

WHEREAS, the Plaintiff above named has instituted the above said suit on 10-6-2020 against the defendant for the recovery of loan amount and interest and costs of Rs. 1,89,544-00 with interest at the rate of 12.15% p.a. from the date of suit till the date of realization. Please take notice that the above case posted to 18-10-2022 at 11-00 A.M. for appearance of above said defendant in person or through advocate duly instructed and able to answer all material questions relating to the above said case, failing which the case will be decided in your absence.
Given under my hand and seal of the court, this the 19th September 2022.

By Order of The Court
Sherasthedar
Civil Judge and JMFC
Court Chief Sakleshpur

Advocate for plaintiff
I.E.Peethambarachar
Advocate
Ashoka road cross
Sakleshpur

**IN THE COURT OF CIVIL JUDGE AND JMFC AT SAKLESHPUR**
O.S. NO. 81/2020
PLAINTIFF : **Sri. SANJAY GHANTI**
Canara Bank
Shukravarsanthe
V/S
DEFENDANT :Sri. Anjan Nayak S/o Chakradar Nayak, r/o #41, 1A Main, 1A cross, Karyana Palya, Hennur Main Road, Lingarajapuram, Banglore-560084

**Summons to the defendant**

WHEREAS, the Plaintiff above named has instituted the above said suit on 29-6-2020 against the defendant for the recovery of loan amount and interest and costs of Rs. 65,138-13 with interest at the rate of 17.15% p.a. from the date of suit till the date of realization. Please take notice that the above case posted to 20-10-2022 at 11-00 A.M. for appearance of above said defendant in person or through advocate duly instructed and able to answer all material questions relating to the above said case, failing which the case will be decided in your absence.
Given under my hand and seal of the court, this the 19th September 2022.

By Order of The Court
Sherasthedar
Civil Judge and JMFC
Court Chief Sakleshpur

Advocate for plaintiff
I.E.Peethambarachar
Advocate
Ashoka road cross
Sakleshpur

**CHANGE OF NAME**
I, **MALLIKARJUNA** R/at No. 51 A, Shivanagara, Anekal Main Road, Jigani Hobli, Anekal Taluk, have changed my minor Son's name from **ROHITH** To **ROHITH.M** vide affidavit dated: 2/9/2022 before Notary **C N Sreekanta Sastry** Bangalore.

**CHANGE OF NAME**
I, **AMIT JAIN** R/at D1001, The Five Summit Address, Road No.10 Near Sri Sathya Sai Baba Hospital, EPIP ZONE, Whitefieled, Bangalore- 560066, have changed my Son Name as **SAATVIK JAIN** To **SAATVIK JAIN NAHAR** vide affidavit dated: 27/9/2022 Before Notary **K.V.Mani** Bangalore.

**CHANGE OF NAME**
I, **TARADEVI .P** R/at No.11, 11th Cross, Eranapalya Road, Papareddypalya, Nagarabhavi, Bangalore- 560072 have changed my name to **SITHARA** vide affidavit dated: 27/9/2022 Before Notary **K.V.Mani** Bangalore.

**CHANGE OF NAME**
I, **MOHAMMED ARSALAN USMA** S/o **Tajamul Pasha** R/at No.7, Dar Al Tehzeb, 1st Cross, Mattakar Lane, HBR 3rd Stage, Bengaluru - 560045 have changed my name to **MOHAMMED ARSALAN** vide affidavit dated: 27/9/2022 Before Notary **Meer Hassan** Bangalore.

**CHANGE OF NAME**
I, **PRASHANTKUMAR KULKARNI** S/o **Laxmikant Kulkarni** R/at H No.305, Datt Temple at Post Kolambi Taluka, Naigaon (Khai), Kolambi, Nandad Maharashtra- 431709 have changed my name to **PRASHANTKUMAR LAXMIKANT KULKARNI** vide affidavit dated: 27/9/2022 Before Notary **K.V.Mani** Bangalore.

**ಹೆಸರು ಬದಲಾವಣೆ**
**ಹೆಚ್.ಆರ್. ಗಿರಿಜಮ್ಮ** W/o. ವಿ.ಡಿ. ಪ್ರಕಾಶ, ವಯಸ್ಸು 43 ವರ್ಷ, ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು, ಹೆತ್ತೂರು ಹೋಬಳಿ, ಹಡ್ಲಹಳ್ಳಿ ಗ್ರಾಮ, ಇಲ್ಲಿ ವಾಸವಾಗಿದ್ದು ನನಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳಲ್ಲಿ ನನ್ನ ಹೆಸರು **ಹೆಚ್.ಆರ್. ಗಿರಿಜಮ್ಮ** ಎಂದು ಇದ್ದು ನನ್ನ ತಂಗಿ ಹೆಚ್.ಆರ್. ಆರುಂಧತಿ ರವರ ಎಲ್.ಐ.ಸಿ. ಬಾಂಡ್‌ನ ನಾಮಿನಿ ಕಲಂನಲ್ಲಿ **ಸವಿತ** ಎಂದು ನಮೂದಾಗಿರುತ್ತದೆ. **ಹೆಚ್.ಆರ್. ಗಿರಿಜಮ್ಮ** ಮತ್ತು **ಸವಿತ** ಎನ್ನುವ ಎರಡು ಹೆಸರು ನನ್ನದೇ ಆಗಿರುತ್ತದೆ ಎಂದು ನೋಟರಿ ವಕೀಲರಾದ **ರಿಜ್ವಾನ ಪರ್ವೀನ್** ಸಕಲೇಶಪುರ, ಇವರ ಸಮಕ್ಷಮದಲ್ಲಿ **ದಿನಾಂಕ:26.09.2022** ರಂದು ರುಜುವಾತು ಪಡಿಸುತ್ತೇನೆ.

**CHANGE OF NAME**
I, **DINESH ANNAYYA SHERIGAR**, Resident of No.334, Samruddhi BDA Link Road, Dwaraka Nagar, Channasandra, Bengaluru-560098, have changed my name to **DINESH ANNAYYA SHEREGAR**, vide affidavit dated: 12.09.2022 before notary **K.V. MANI,** Bengaluru.

**CHANGE OF NAME**
I, **AKHILA BEGAUM SYED IYOOB,** Resident of No.541, 18th Cross, 1st Main, 1st Block, R T Nagar, Bangalore-560032, have changed my name to **AKHILA BEGAUM,** vide affidavit dated: 26.09.2022 before notary **V. RAJASHEKHARA,** Bengaluru.

**CHANGE OF NAME**
I, **PARUVANGADA GEETH MONNAPPA,** W/o. Partha Pradeep Shetty, Resident of Flat No.B1104, Mantri Greens, No.1, Sampige Road, Malleshwaram, Bengaluru-560003, have changed my name to **GEETH MONNAPPA,** vide affidavit dated: 27.09.2022 before notary **T.C. THIMMARAJA,** Bengaluru.

**CHANGE OF NAME**
I, **ANJALI PRADEEP SHETTY,** D/o. Dharam Bikaram Khati, Resident of Flat No.1304, Juniper C, Salarpuria Greenage, Hosur Main Road, Bommanahalli, Bengaluru-560068, have changed my name to **ANJALI SHETTY,** vide affidavit dated: 27.09.2022 before notary **T.C. THIMMARAJA,** Bengaluru.

**CHANGE OF NAME**
I, **NANDHINI SAKTIYA NARAYANAN,** W/o. Saktiya Narayanan Mathur Rajaram, R/of No.15, Rajes Home, 3rd B Cross, Kalyanamma Layout, Dodda Banaswadi, Bengaluru-560043, have changed my name to **NANDHINI SAKTIYAN,** vide affidavit dated: 27.09.2022 before notary **T.C. THIMMARAJA,** Bengaluru.

**CHANGE OF NAME**
I, **MOHAMMED SAIF MOHAMMED AQEEL KHATEEB,** Resident of No.36, 3rd Cross Road, Dinnur Main Road, Kousar Nagar, Bangalore-560032, have changed my name to **MOHAMMED SAIF KHATEEB,** vide affidavit dated: 27.09.2022 before notary **V. RAJASHEKHARA,** Bengaluru.

**CHANGE OF NAME**
I, **SYED NAWAZ BASHA, SYED MAHABOOB BASHA,** Resident of No.106, 2nd Floor, No.201, 5th Main, Pariwar Presidency Apt, Anugraha Layout, Billekahalli, Bangalore-560076, have changed my name to **NAWAZ BASHA,** vide affidavit dated: 06.08.2022 before Notary **B.M. CHANDRASHEKAR,** Bengaluru.

**CHANGE OF NAME**
I, **SHANKAR NARAYAN REDDY,** R/at No. 175, 15th B Cross, 19th Main, Vangalahalli, H S R Layout, Bangalore-560102, have changed my minor son's name from **GAGANDEEP SHANKAR NARAYANA REDDY** to **GAGAN DEEP,** vide affidavit dated: 27.09.2022 before notary **N. KANCHIVARADARAJU,** Bengaluru.

**CHANGE OF NAME**
I, **MOHAMMED MUKHTAR,** Resident of No. 16/22, NASCO Shariff Garden Apt, Flat No.402, 4th Cross, 9th Main, Lakkasandra Extn, Bengaluru-560030, have changed my name to **MOHAMMED MUKHTAR NOOR,** vide affidavit dated: 27.09.2022 before notary **B.M. CHANDRASHEKAR,** Bengaluru.

**CHANGE OF NAME**
I, **ZUBAIR MOHAMMED OSAMA,** Resident of No.77, Ground Floor, 3rd Cross, Nandidurga Road, Jayamahal Extension, Bangalore-560046, have changed my name to **ZUBAIR MOHAMMED USAMA AHMED**, vide affidavit dated: 24.09.2022 before notary **SIVAKUMARA .M.N,** B'luru.

### ಎಸ್ಸಿ ಪಟ್ಟಿಗೆ ಸೇರಿಸಲು ಸರಕಾರ ವಿಳಂಬ

# ಆಡಳಿತ ಪಕ್ಷದ ನಡವಳಿಕೆಗೆ ಮಡಿವಾಳರ ಅಸಮಾಧಾನ

ತುಮಕೂರು, ಸೆ.27: ಅತ್ಯಂತ ಹಿಂದುಳಿದಿರುವ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ವಿಚಾರದಲ್ಲಿ ಸರಕಾರದ ವಿವಿಧ ಮಂತ್ರಿಗಳ ನಡುವೆ ಗೊಂದಲದ ಹೇಳಿಕೆಗಳು ಸದನದ ಚರ್ಚೆಯ ವೇಳೆ ವ್ಯಕ್ತವಾಗಿದ್ದು, ಸರಕಾರದ ಈ ನಡೆಗೆ ಜಿಲ್ಲಾ ಮಡಿವಾಳ ಸಮಾಜದ ಅಧ್ಯಕ್ಷ ಲಕ್ಷ್ಮಣ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿ ಬಿಜಾಪುರ ಕ್ಷೇತ್ರದ ಶಾಸಕರಾದ ಬಸವನಗೌಡ ಪಾಟೀಲ್ ಯತ್ನಾಳ್ ಅವರು ಪಂಚಮಶಾಲಿ ಲಿಂಗಾಯಿತ ಸಮುದಾಯವನ್ನು ಪ್ರವರ್ಗ 1 ಕ್ಕೆ ಮತ್ತು ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಸಂಬಂಧ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದಾಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ವಿಚಾರವಾಗಿ ಸರ್ವಪಕ್ಷ ಸಭೆ ಕರೆದು ಚರ್ಚೆ ನಡೆಸಿ, ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಉತ್ತರ ನೀಡಿದ್ದಾರೆ ಎಂದರು.

ಕೂಡಲೇ ಸರಕಾರ ತಾನೇ ಒಪ್ಪಿಕೊಂಡಿರುವಂತೆ ಸಲ್ಲಿಕೆಯಾಗಿರುವ ಮಡಿವಾಳ ಸಮಾಜದ ಕುಲಶಾಸ್ತ್ರಿಯ ಅಧ್ಯಯನ ವರದಿ (ಡಾ.ಅನ್ನಪೂರ್ಣಮ್ಮ) ಯನ್ನು ಕುಲಂಕುಷವಾಗಿ ಚರ್ಚಿಸಿ, ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಕೇಂದ್ರ ಸರಕಾಕ್ಕೆ ಶಿಫಾರಸು ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಮಡಿವಾಳ ಸಮಾಜ ರಾಜ್ಯದಲ್ಲಿ 20ಲಕ್ಷಕ್ಕೂ ಅಧಿಕ ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿಯೂ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಣಾಯಕ ಮತದಾರರಾಗಿದ್ದಾರೆ.ಒಂದು ವೇಳೆ ಸರಕಾರ ಸದರಿ ವಿಚಾರವಾಗಿ ಇದೇ ರೀತಿಯ ನಿರ್ಲಕ್ಷ ಧೋರಣೆ ತೋರಿದ್ದಲ್ಲಿ ಮುಂದಿನ 2023ರ ವಿಧಾನಸಭೆ ಮತ್ತು 2024ರ ಲೋಕಸಭಾ ಚುನಾವಣೆಯಲ್ಲಿ ನಮ್ಮ ಶಕ್ತಿ ಏನು ಎಂಬುದನ್ನು ತೋರಿಸುವುದು ಅನಿವಾರ್ಯವಾಗುತ್ತದೆ. ಇದರ ಜತೆಗೆ, ನಿರಂತರ ಹೋರಾಟದ ಮೂಲಕ ಸರಕಾರದ ಮೇಲೆ ಒತ್ತಡ ಹಾಕುವ ಕೆಲಸವನ್ನು ಮಡಿವಾಳ ಸಮಾಜ ಮುಂದುವರಿಸುತ್ತದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕೆಂಪನರಸಯ್ಯ, ಬಿ.ವೆಂಕಟರಾಮಯ್ಯ, ಎಚ್ .ದೇವೇಂದ್ರ,ಎಂ.ಎ. ಆನಂದಮೂರ್ತಿ, ಎಚ್.ಬಿ. ಜ್ಞಾನೇಶ್, ಶ್ರೀರಾಮ್, ಚಿಕ್ಕಣ್ಣ ಮಂಜುನಾಥ್, ಧರ್ಮಕುಮಾರ್, ಟಿ.ಜಿ.ವೆಂಕಟೇಶ್, ಟಿ.ಎಸ್.ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

## ‘ಭಾರತ್ ಜೋಡೋ: ಹುಣಸೂರಿನಿಂದ 10 ಸಾವಿರ ಕಾರ್ಯಕರ್ತರು’

ಹುಣಸೂರು ಸೆ.27: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಸೆ.30ರಿಂದ ಜಿಲ್ಲೆಯ ಗುಂಡ್ಲಪೇಟೆ ಪಟ್ಟಣದಿಂದ ರಾಜ್ಯದಲ್ಲಿ ಆರಂಭವಾಗುವ ‘ಭಾರತ್ ಜೋಡೋ’ ಯಾತ್ರೆಯಲ್ಲಿ ತಾಲೂಕಿನಿಂದ ಕಾಂಗ್ರೆಸ್ ಪಕ್ಷದ 10ಸಾವಿರ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನರಾಯಣ್, ಕಲ್ಕುಣಿಕೆ ರಮೇಶ್, ಗಾವಡಗೆರೆ ದೇವರಾಜ್ ಹಾಗು ಯುವ ಅಧ್ಯಕ್ಷ ರಾಘು ತಿಳಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರು, ಮುಖಂಡರು ಜನಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಕೆಪಿಸಿಸಿ ಕಾರ್ಯದರ್ಶಿ ಡಿ.ಕೆ.ಶಿವಕುಮಾರ್ ಕೈ ಬಲಪಡಿಸುವಂತೆ ಮನವಿ ಮಾಡಿದರು.

# ಬದುಕು ಕಟ್ಟಿಕೊಳ್ಳಲು ಸರಕಾರವನ್ನು ಅಂಗಲಾಚುತ್ತಿರುವ ಅಲೆಮಾರಿಗಳು

ನೇರಳೆ ಸತೀಶ್ ಕುಮಾರ್



13ನೇ ದಿನಕ್ಕೆ ಕಾಲಿಟ್ಟ ಅಹೋರಾತ್ರಿ ಧರಣಿ

ಮೈಸೂರು, ಸೆ.27: ನಗರದಲ್ಲಿ ಒಂದೆಡೆ ಅದ್ದೂರಿ ಸಂಭ್ರಮ, ಸಡಗರದೊಂದಿಗೆ ಬುಡಕಟ್ಟು ಮಹಿಳೆಯಿಂದ ಅದ್ದೂರಿ ದಸರಾ ಉದ್ಘಾಟನೆಯಾದರೆ ಮತ್ತೊಂದೆಡೆ ಬದುಕು ಕಟ್ಟಿಕೊಳ್ಳಲು ಹಕ್ಕು ಪತ್ರ ಖಾತ್ರಿಗಾಗಿ ಹೆಣಗಾಡಿ ನಮ್ಮತ್ತ ಸ್ವಲ್ಪ ಕಣ್ಣಬಿಡಿ ಎಂದು ಸರಕಾರವನ್ನು ಅಂಗಲಾಚುತ್ತಿರುವ ಅಲೆಮಾರಿಗಳ ರೋಧನ ಮನಕಲಕುವಂತಿದೆ.

ಸೊಂಟದಲ್ಲಿ ಹಸುಳೆಯನ್ನು ಹೊತ್ತುಕೊಂಡು ಅಂತಿದ್ದಿತ್ತಾ ಕಚೇರಿಗಳಿಗೆ ಅಲೆದಾಡುವ ತಾಯಿ ಹಕ್ಕುಪತ್ರ ನೀಡುತ್ತಾರೆ ಎಂಬ ಭ್ರಮೆಯಲ್ಲಿದ್ದರೆ, ಹಸಿವು ನನಗೆ ಊಟ ಕೊಡು ಎಂದು ಅಳುತ್ತಿರುವ ಪುಟ್ಟ ಕಂದನನ್ನು ಸಮಾಧಾನಿಸಿ ಇನ್ನೇನೂ ನಮ್ಮ ಬೇಡಿಕೆ ಈಡೇರುತ್ತದೆ ಮನೆಗೆ ಹೋಗೋಣ ಎಂದು ಸಂತೈಸುತ್ತಿರುವ ತಾಯಿ. ಮಂತ್ರಿಗಳೂ ರಾಷ್ಟ್ರಪತಿಯವರು ಎಲ್ಲರೂ ಮೈಸೂರಿಗೆ ಬರುತ್ತಾರಂತೆ ನಮಗೆ ನ್ಯಾಯದೊರಕುತ್ತದೆ ಎಂಬ ಕನಸುಕಟ್ಟಿಕೊಂಡ ನೂರಾರು ಜೀವಗಳು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು 13 ದಿನಗಳಿಂದ ತಮ್ಮ ಬಡತನವನ್ನು ಲೆಕ್ಕಿಸದೆ ತಮ್ಮ ನಿವೇಶನದ ಹಕ್ಕುಪತ್ರಕ್ಕಾಗಿ ಅಹೋರಾತ್ರಿ ಧರಣಿ ನಡೆಸುತ್ತಿದ್ದರಾದರೂ ಇವರತ್ತ ಯಾರೂ ಗಮನ ಹರಿಸುತ್ತಿಲ್ಲ.

ಯುವ ದಸರಾ, ಫಲಪುಷ್ಪಪ್ರದರ್ಶನ, ಚಲನಚಿತ್ರೋತ್ಸವ, ಕುಸ್ತಿ, ಆಹಾರ ಮೇಳ ಸೇರಿದಂತೆ ಅನೇಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಸಾರ್ವಜನಿಕರು ತಂಡೋಪ ತಂಡವಾಗಿ ಸಂತಸ ಪಡುತ್ತಿದ್ದರೆ, ಇಲ್ಲಿ ಅಲೆಮಾರಿಗಳು ಒಪ್ಪೊತ್ತಿನ ಊಟಕ್ಕೂ ಕಷ್ಟಪಡುವಂತಾಗಿದೆ.

ರಾಜಕಾರಣಿಗಳು ಅಧಿಕಾರಿಗಳು ದಸರಾ ಸಂಭ್ರಮದಲ್ಲಿ ತೇಲಿ ಬಣ್ಣಬಣ್ಣದ ದೀಪಲಂಕಾರದಿಂದ ನಗರವನ್ನು ಕಣ್ಮನಗೊಳಿಸುತ್ತಿದ್ದರೆ. ಅಲೆಮಾರಿಗಳ ಜೀವನೇ ಕತ್ತಲೆಯಾಗಿದೆ. 20 ವರ್ಷಗಳಿಂದ ಮೈಸೂರಿನ ಏಕಲವ್ಯ ನಗರದಲ್ಲಿ ಸುಮಾರು 200ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿವೆ. ಇವರನ್ನು ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಷ್ಟೇ ಮತಕ್ಕಾಗಿ ಉಪಯೋಗಿಸಿಕೊಂಡು ನಂತರ ಇವರತ್ತ ಸುಳಿಯದೇ ಇರುವುದು ಇವರ ಆಕ್ರೋಶಕ್ಕೆ ಕಾರಣವಾಗಿದೆ.


ಬಡುಕಟ್ಟು ಮಹಿಳೆ ಈ ದೇಶದ ರಾಷ್ಟ್ರಪತಿಯಾದರೂ, ದಲಿತರು, ಅಲೆಮಾರಿಗಳು, ಅಲ್ಪಸಂಖ್ಯಾತರು, ಬುಡಕಟ್ಟು ಸಮುದಾಯದವರ ಬದುಕು ಇನ್ನೂ ಸುಧಾರಿಸದಿರುವುದು ಸರಕಾರಕ್ಕೆ ಹಿಡಿದ ಕೈಗನ್ನಡಿಯಾಗಿದೆ.

> “ಹಕ್ಕುಪತ್ರ ನೀಡುವವರೆಗೂ ನಾವು ಕದಲುವುದಿಲ್ಲ ಎಂದು ನಿರ್ಧರಿಸಿರುವ ಅಲೆಮಾರಿಗಳ ಕಷ್ಟವನ್ನು ಇದುವರೆಗೂ ಯಾವೊಬ್ಬ ರಾಜಕಾರಣಿಗಳೂ ಆಲಿಸಲು ಬಂದಿಲ್ಲ. ನೆಪ ಮಾತ್ರಕ್ಕೆ ದಸರಾಗೆ ಏನಾದರೂ ತೊಂದರೆ ಮಾಡುತ್ತಾರೆ ಎಂಬ ಭಯದಲ್ಲಿ ಜಿಲ್ಲಾಧಿಕಾರಿ ಮಾತ್ರ ಸಂಘಟನೆಯ ಮುಖ್ಯಸ್ಥರನ್ನು ಕರೆದು ಮಂಗಳವಾರ ನಿಮ್ಮ ಸಮಸ್ಯೆ ಬಗೆಹರಿಸುವುದಾಗಿ ಹೇಳಿ ರಾಷ್ಟ್ರಪತಿಯವರ ಕಾರ್ಯಕ್ರಮಕ್ಕೆ ಯಾವುದೇ ಅಡ್ಡಿ ಆತಂಕಗಳು ಬರದಂತೆ ನೋಡಿಕೊಂಡಿದ್ದಾರೆ.

ಇನ್ನೆಷ್ಟು ದಿನ ಅಲೆಮಾರಿಗಳು ತಮ್ಮ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಬೀದಿಯಲ್ಲಿ ಕುಳಿತುಕೊಳ್ಳಬೇಕೊ ತಿಳಿಯುತ್ತಿಲ್ಲ. ಇವರಿಗೆ ಒಂದೊತ್ತಿನ ಊಟ ಇಲ್ಲದನ್ನು ಕಂಡ ಹಲವಾರು ಮಾನವೀಯ ಕಾಳಜಿಯುಳ್ಳ ಜನತೆ ದಲಿತ ಸಂಘರ್ಷ ಸಮಿತಿ ಮುಖಂಡರು ಮನವಿ ಮೇರೆಗೆ ಅಕ್ಕಿ, ಬೇಳೆ, ಎಣ್ಣೆ, ಗೋದಿಯನ್ನು ಅಲ್ಪಸ್ವಲ್ಪ ತಂದು ಕೊಡುತ್ತಿದ್ದರಾದರೂ ಇದು ಅವರ ಸಂಪೂರ್ಣ ಹೊಟ್ಟೆಯನ್ನು ತುಂಬುತ್ತಿಲ್ಲ. ಸರಕಾರ ಕೂಡಲೇ ಇವರ ಬೇಡಿಕೆಯನ್ನು ಈಡೇರಿಸಬೇಕು ಎಂಬುದು ಎಲ್ಲರ ಒತ್ತಾಯವಾಗಿದೆ.

# ಗಮನಸೆಳೆದ ದಸರಾ ಕಲಾತಂಡಗಳು, ಸ್ತಬ್ಧಚಿತ್ರಗಳ ಮೆರವಣಿಗೆ

ಚಾಮರಾಜನಗರ, ಸೆ.27: ಮಂಗಳವಾರ ಚಾಮರಾಜ ನಗರ ದಸರಾ ಮಹೋತ್ಸವ ಅಂಗವಾಗಿ ನಗರದಲ್ಲಿ ನಡೆದ ವಿವಿಧ ಕಲಾ ತಂಡಗಳು ಹಾಗೂ ಇಲಾಖೆಗಳ ಸ್ತಬ್ಧ ಚಿತ್ರಗಳ ಮೆರವಣಿಗೆ ವಿಶೇಷ ಗಮನ ಸೆಳೆಯಿತು.



ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ನಂದಿಧ್ವಜಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು ಸೇರಿದಂತೆ ಇತರ ಗಣ್ಯರು, ಕಲಾತಂಡಗಳು ಹಾಗೂ ಸ್ತಬ್ಧ ಚಿತ್ರಗಳ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಚಾಲನೆಗೂ ಮೊದಲು ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು.

ಮೆರವಣಿಗೆಯಲ್ಲಿ ಅಲಂಕೃತ ಸಾರೋಟು ವಾಹನದಲ್ಲಿ ಪ್ರತಿಷ್ಠಾಪಿಸಿದ್ದ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ನೆರವೇರಿಸಲಾಯಿತು. ಬಳಿಕ ಜಿಲ್ಲಾಡಳಿತ ಭವನದಿಂದ ಮೆರವಣಿಗೆ ಹೊರಟಿತು. ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಚಾಮರಾಜೇಶ್ವರ ದೇವಾಲಯ ತಲುಪಿತು.

ನಂದಿಧ್ವಜ, ನಾದಸ್ವರ, ಬ್ಯಾಂಡ್‌ಸೆಟ್, ಡೊಳ್ಳು ಕುಣಿತ, ವೀರಗಾಸೆ, ಗೊರವರ ಕುಣಿತ, ಕಂಸಾಳೆನೃತ್ಯ, ಬೀಸುಕಂಸಾಳೆ, ಕೋಲಾಟ, ಸುಗ್ಗಿಕುಣಿತ, ತಮಟೆ ವಾದನ, ದೊಣ್ಣೆವರಸೆ, ಹುಲಿವೇಷ, ಕಲಾ ತಂಡಗಳು ಮೆರವಣಿಗೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡು ನೋಡುಗರ ಗಮನ ಸೆಳೆದರು.

ವಿವಿಧ ಇಲಾಖೆಗಳು ತಯಾರಿಸಿದ ಸ್ತಬ್ಧಚಿತ್ರ ಪ್ರದರ್ಶನ ಸಹ ಮೆರವಣಿಗೆಯ ವಿಶೇಷತೆಗಳಲ್ಲಿ ಒಂದಾಗಿತ್ತು. ಕೃಷಿ ಇಲಾಖೆ, ಮೀನುಗಾರಿಕೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪಶುಪಲನಾ ಮತ್ತು ಪಶು ವೈದ್ಯಕೀಯ ಇಲಾಖೆ ತಮ್ಮ ವ್ಯಾಪ್ತಿಯ ಕಾರ್ಯಕ್ರಮಗಳನ್ನು ಪ್ರಚಾರ ಪಡಿಸುವ ಸ್ತಬ್ಧಚಿತ್ರಗಳ ಪ್ರದರ್ಶನ ಸಹ ಮೆರವಣಿಗೆಯಲ್ಲಿ ಇದದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಜಿಪಂ ಸಿಇಒ ಕೆ.ಎಂ.ಗಾಯಿತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಜಿಪಂ ಮಾಜಿ ಸದಸ್ಯರಾದ ಸಿ.ಎನ್.ಬಾಲರಾಜು, ವಿವಿಧ ಇಲಾಖೆಗಳ ಅಧಿಕಾರಿಗಳು, ಗಣ್ಯರು ಇದ್ದರು.

# ಕೃಷಿ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಗೆ ಆಗ್ರಹಿಸಿ ಧರಣಿ

ಬಾಗೇಪಲ್ಲಿ, ಸೆ.27: ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಮತ್ತು ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಕೆಪಿಆರ್‌ಎಸ್ ಕಾರ್ಯಕರ್ತರು ಮಂಗಳವಾರ ಸಹಾಯಕ ಕೃಷಿ ನಿರ್ದೇಶಕ ಕಚೇರಿ ಎದುರು ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಧರಣಿನಿರತರನ್ನು ಉದ್ದೇಶಿಸಿ ಮಾತನಾಡಿದ ಪ್ರಾಂತ ರೈತ ಸಂಘದ ರಾಜ್ಯ ಉಪಾದ್ಯಕ್ಷ ಪಿ.ಮಂಜುನಾಥರೆಡ್ಡಿ, ತಾಲೂಕಿನಲ್ಲಿ ಶೇ.70ಕ್ಕೂ ಹೆಚ್ಚು ಜನರು ವ್ಯವಸಾಯ ಆಧಾರದ ಮೇಲೆ ಜೀವನ ಸಾಗಿಸುತ್ತಿದ್ದಾರೆ. ಭಾರೀ ಮಳೆಯಿಂದಾಗಿ ಬೆಳೆಗಳು ನಾಶವಾಗಿವೆ. ರೈತರಿಗೆ ಪರಿಹಾರ ನೀಡಬೇಕಾಗದ ಅಧಿಕಾರಿಗಳು ಕೈಕಟ್ಟಿ ಕುಳಿತ್ತಿದ್ದಾರೆ.ಕೃಷಿ ಇಲಾಖೆ ಎಲ್ಲ ಯೋಜನೆಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಬಾಗೇಪಲ್ಲಿ ತಾಲೂಕಿನಲ್ಲಿ ಸಹಾಯಕ ಕೃಷಿ ನಿರ್ದೇಶಕ ಹುದ್ದೆ ಮತ್ತು ಎಲ್ಲ ಹುದ್ದೆಗಳು ಖಾಲಿ ಇರುವುದು ಸರಕಾರದ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಬ್ಬಂದಿ ಇಲ್ಲದೆ ಇರುವುದು ದೊಡ್ಡ ಸಮಸ್ಯೆಯಾಗಿದೆ. ಅನೇಕ ಯೋಜನೆಗಳಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಅಧಿಕಾರಿಗಳು ಭಾರೀ ಭ್ರಷ್ಟಾಚಾರ ಮಾಡಿದ್ದಾರೆ ಎಂದು ಆರೋಪಿಸಿದರು. ಈ ಸಂಬಂಧ ಕೃಷಿ ಇಲಾಖೆಯ ಉನ್ನತ ಅಧಿಕಾರಿಗಳು ಎಚ್ಚೆತ್ತುಕೊಂಡು ಕೃಷಿ ಇಲಾಖೆಯ ಎಲ್ಲ ಯೋಜನೆಗಳ ಅರ್ಹ ಫಲಾನುಭವಿ ರೈತರಿಗೆ ಸಬ್ಸಿಡಿ ನೀಡಬೇಕು. ಬಾಕಿ ಇರುವ ಬೆಳೆ ವಿಮೆ ತಕ್ಷಣ ವಿತರಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಅನುರೂಪ, ಪ್ರಭಾರಿ ಸಹಾಯಕ ಕೃಷಿ ನಿರ್ದೇಶಕ ಎಸ್.ಶ್ರೀನಿವಾಸ ಅವರು ಧರಣಿನಿರತ ಸ್ಥಳಕ್ಕೆ ಭೇಟಿ ನೀಡಿ ಧರಣಿನಿರತರಿಂದ ಮನವಿ ಸ್ವೀಕರಿಸಿ ಬೇಡಿಕೆಗಳನ್ನು ಈಡೇರಿಸಲು ಕ್ರಮಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ್ದಾರೆ.

ಧರಣಿಯಲ್ಲಿ ತಾಲೂಕು ಪ್ರಾಂತ ರೈತ ಸಂಘದ ಅಧ್ಯಕ್ಷ ಶ್ರೀರಾಮನಾಯಕ್, ಉಪಾಧ್ಯಕ್ಷ ಎ.ಎನ್.ಶ್ರೀರಾಮಪ್ಪ, ಆರ್.ರಾಮಪ್ಪ, ಪಿ.ಎಂ.ಮಂಜುನಾಥ್, ಜಂಟಿ ಕಾರ್ಯದರ್ಶಿ ಗಂಗರಾಜಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಎಂ.ಹೇಮಚಂದ್ರ, ಗ್ರಾಪಂ ಮಾಜಿ ಅಧ್ಯಕ್ಷ ಶಂಕರಪ್ಪ, ಪ್ರಭಾಕರರೆಡ್ಡಿ, ಪಾತೀಮಾಭಿ, ಭಾರತಿ, ವೆಂಕಟರಾಮಪ್ಪ, ನಾರಾಯಣಸ್ವಾಮಿ, ರಾಮಚಂದ್ರಪ್ಪ, ರಾಮರೆಡ್ಡಿ, ಮದ್ದಿರೆಡ್ಡಿ, ವೇಮಾನಾರಾಯಣ, ಅಫ್ಸರ್ ಮತ್ತಿತರರಿದ್ದರು.

# ಅಂಬೇಡ್ಕರ್ ಭವನ ಕಾಮಗಾರಿ ವಿಳಂಬಕ್ಕೆ ರಾಜಕಾರಣವೇ ಕಾರಣ

## ಶಾಸಕ ಬಿ.ಶಿವಣ್ಣ ಆರೋಪ

ಆನೇಕಲ್, ಸೆ.27: ಹೆಸರಿಗಷ್ಟೇ ಮೀಸಲು ಕ್ಷೇತ್ರವಾಗಿರುವ ಆನೇಕಲ್‌ನಲ್ಲಿ ಒಂದು ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಇಲ್ಲದ ರಾಜಕಾರಣ ಬೆರೆಸಲಾಗಿದ್ದು, ಪ್ರತಿ ಹಂತದ ಕಾಮಗಾರಿಗೂ ಹೋರಾಟ ಮಾಡುವ ಹಂತಕ್ಕೆ ಈಗಿನ ರಾಜ್ಯ ರಾಜಕಾರಣ ಇಳಿದುಬಿಟ್ಟಿದೆ ಎಂದು ಶಾಸಕ ಬಿ ಶಿವಣ್ಣ ಆಡಳಿತ ಪಕ್ಷದ ವಿರುದ್ಧ ಹರಿಹಾಯ್ದಿದ್ದಾರೆ.

ಅವರು ಮಂಗಳವಾರ ಆನೇಕಲ್ ಪಟ್ಟಣದಲ್ಲಿ ನಿರ್ಮಾನವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಕಾಮಗಾರಿ ಪರಿಶೀಲನೆ ನಡೆಸಿ ಇಂಜಿನಿಯರ್ ಮತ್ತು ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಮಾತನಾಡಿದರು.

ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ 10 ಕೋಟಿ ರೂ.ಗೂ ಹೆಚ್ಚು ಅನುದಾನದ ಅಗತ್ಯವಿದ್ದು, ಆನೇಕಲ್‌ನಲ್ಲಿ ಹುಟ್ಟಿ ಬೆಳೆದು ಮೂರು ಬಾರಿ ಶಾಸಕರಾಗಿ ಈಗ ಕೇಂದ್ರ ಸಚಿವರಾಗಿರುವ ಎ.ನಾರಾಯಣಸ್ವಾಮಿಯವರು ಸಹ ಈ ಬಗ್ಗೆ ಗಮನಹರಿಸದೆ ಇರೋದು ಕಾಮಗಾರಿ ವಿಳಂಬಕ್ಕೆ ಕಾರಣವಾಗಿದೆ. ಕೂಡಲೇ ಈ ಬಗ್ಗೆ ಎಚ್ಚೆತ್ತುಕೊಂಡು ಅಂಬೇಡ್ಕರ್ ಭವನ ಕಾಮಗಾರಿಗೆ ಹೆಚ್ಚಿನ ಅನುದಾನ ಒದಗಿಸಿ ಕೊಡಬೇಕೆಂದು ಎಂದು ದಲಿತ ಮುಖಂಡರು ಈ ಸಂದರ್ಭದಲ್ಲಿ ಒತ್ತಾಯಿಸಿದರು.

> “ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಗೂ ಇಂಜಿನಿಯರ್ ಜೊತೆ ಚರ್ಚೆ ನಡೆಸಿ ಇನ್ನುಳಿದ ಕಾಮಗಾರಿಗೆ ಎಷ್ಟು ಮೊತ್ತ ಬೇಕಾಗುತ್ತದೆ ಎನ್ನುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಸರಕಾರಕ್ಕೆ ಹೆಚ್ಚಿನ ಅನುದಾನ ಬಿಡುಗಡೆಗೆ ಒತ್ತಾಯ ಮಾಡಲಾಗುವುದು.
>
> - ಬಿ.ಶಿವಣ್ಣ, ಆನೇಕಲ್ ವಿಧಾನಸಭಾ ಕ್ಷೇತ್ರದ ಶಾಸಕ

> ಹಲವು ವರ್ಷಗಳ ದಲಿತರ ಹೋರಾಟದ ಪ್ರತಿಫಲವಾಗಿ ಕೋಟ್ಯಂತರ ರೂ.ಗಳ ವೆಚ್ಚದಲ್ಲಿ ಡಾ.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಚಾಲನೆ ನೀಡಿ ವರ್ಷಗಳೇ ಕಳೆದಿವೆ. ಚುನಾವಣೆಗೂ ಮೊದಲು ಅಂಬೇಡ್ಕರ್ ಭವನ ಉದ್ಘಾಟನೆ ಮಾಡಬಾರದು ಎಂದು ತಡೆ ಹಿಡಿದು ರಾಜಕೀಯ ಮಾಡಲಾಗುತ್ತಿದೆ ಎಂದು ದಲಿತ ಸಂಘಟನೆಯ ಮುಖಂಡರು ಆರೋಪಿಸಿದ್ದಾರೆ.

# ದಸರಾ ಆಹ್ವಾನ ಪತ್ರಿಕೆಯಲ್ಲಿ ಮಾಜಿ ಶಾಸಕರ ಹೆಸರು: ತಾಲೂಕು ಆಡಳಿತ ಎಡವಟ್ಟು

ಯಳಂದೂರು, ಸೆ.27: ತಾಲೂಕಿನಲ್ಲಿ ಸೆ.29ರಂದು ನಡೆಯಲಿರುವ 2022ರ ಗ್ರಾಮೀಣ ದಸರಾ ಮಹೋತ್ಸವ ಆಹ್ವಾನ ಪತ್ರಿಕೆಯಲ್ಲಿ ವಿಧಾನ ಪರಿಷತ್‌ನ ಮಾಜಿ ಶಾಸಕ ಕೆ.ಟಿ. ಶ್ರೀಕಂಠೇಗೌಡರ ಹೆಸರನ್ನು ಹಾಲಿ ಶಾಸಕರು ಎಂದು ಆಹ್ವಾನ ಪತ್ರಿಕೆಯಲ್ಲಿ ಪ್ರಕಟಿಸಿದ್ದು ತಾಲೂಕು ಆಡಳಿತ ಮಾಡಿರುವ ಎಡವಟ್ಟಿಗೆ ಸಾರ್ವಜನಿಕರ ಟೀಕೆ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಪಧವೀಧರ ವಿಧಾನ ಕ್ಷೇತ್ರ ಚುನಾವಣೆ ನಡೆದಿದ್ದು ಕೆ.ಟಿ. ಶ್ರೀಕಂಠೇಗೌಡರ ಸ್ಥಾನಕ್ಕೆ ಮಧು.ಜಿ ಮಾದೇಗೌಡ ಆಯ್ಕೆಯಾಗಿ ಹಲವು ತಿಂಗಳ ಕಳೆದಿದೆ. ಆದರೆ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತ ಮಾತ್ರ ಮಾಜಿ ಶಾಸಕ ಕೆ.ಟಿ. ಶ್ರೀಕಂಠೇಗೌಡರನ್ನು ಹಾಲಿ ಎಂದು ತಿಳಿದು ಆಹ್ವಾನ ಪತ್ರಿಕೆಯಲ್ಲಿ ಕೆ.ಟಿ. ಶ್ರೀಕಂಠೇಗೌಡ ಮಾನ್ಯ ಶಾಸಕರು ಎಂದು ಮುದ್ರಿಸಿದ್ದು ಈ ವಿಷಯ ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಿಸುವುದಿಲ್ಲವೇ, ಜಿಲ್ಲಾಡಳಿತದ ಅಧಿಕಾರಿಗಳಿಂದ ಆಹ್ವಾನಿತರ ಪಟ್ಟಿ ನೀಡಿ, ನಂತರ ಅನುಮತಿ ಪಡೆದುಕೊಂಡು ಮುದ್ರಿಸುತ್ತಾರೆ. ಆದರೂ ಕೂಡ ಆಹ್ವಾನ ಪತ್ರಿಕೆಯಲ್ಲಿ ಮಾಜಿ ಶಾಸಕರನ್ನು ಹಾಲಿ ಮಾಡಿರುವುದು ಗಮನಿಸಿದ ಸಾರ್ವಜನಿಕರು ಅಧಿಕಾರಿಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಮೂಡುತ್ತದೆ ಎಂಬುದು ಮುಖಂಡರಾದ ಡಿ.ಸಿ. ಬಾಬು, ಪ್ರಸಾದ್ ಸೇರಿದಂತೆ ಹಲವರ ಆರೋಪವಾಗಿದೆ.



ಶ್ರೀರಂಗಪಟ್ಟಣದ ಟಿಪ್ಪು ಸುಲ್ತಾನ್ ಬೇಸಿಗೆ ಅರಮನೆ ಎದುರು ಪ್ರವಾಸಿಗರಿಗೆ ಗುಲಾಬಿ ಹೂವುಗಳನ್ನು ನೀಡುವ ಮೂಲಕ ಪ್ರಜ್ಞಾವಂತರ ವೇದಿಕೆ ವತಿಯಿಂದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಆಚರಣೆ ಮಾಡಲಾಯಿತು. ವೇದಿಕೆ ಸಂಚಾಲಕ ವಕೀಲ ಸಿ.ಎಸ್. ವೆಂಕಟೇಶ್, ಗ್ರಾಪಂ ಸದಸ್ಯ ಅಪ್ಪಾಜಿ, ಪಾನಿಪುರಿ ರವಿ, ಜಯಶಂಕರ, ಆಪ್ ಮುಖಂಡ ಚಿಕ್ಕತಮ್ಮೆಗೌಡ, ಇತರರು ಉಪಸ್ಥಿತರಿದ್ದರು.




ಕೋಲಾರ ತಾಲೂಕಿನ ತೊರದೇವಂಡಹಳ್ಳಿ ಸರಕಾರಿ ಪ್ರೌಢಶಾಲಾ ಮಕ್ಕಳು ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಜೂಡೊ ಪಂದ್ಯಾವಳಿಯ ವಿವಿಧ ತೂಕಗಳಲ್ಲಿ 23 ಪ್ರಥಮ ಸ್ಥಾನ, ಹಾಗೂ ಕುಸ್ತಿಯಲ್ಲಿ 17 ಪ್ರಥಮ ಸ್ಥಾನ, ಒಂದು ದ್ವಿತಿಯ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದು, ಅವರನ್ನು ಶಾಲೆಯ ಮುಖ್ಯಶಿಕ್ಷಕರು, ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು,ಸದಸ್ಯರು ಶುಭ ಹಾರೈಸಿದರು.





ಹಾಸನ ಜಿಲ್ಲೆಯ ವಿವಿಧೆಡೆ ಎಸ್.ಸಿ.ಪಿ. ಟಿ.ಎಸ್.ಪಿ. ಯೋಜನೆಯಡಿ ಕೊಳವೆ ಬಾವಿ ಕೊರೆದು ವಿದ್ಯುತ್ ಸಂಪರ್ಕ ಪೂರೈಸುವ ವಿಚಾರದಲ್ಲಿ ಅವ್ಯವಹಾರ ನಡೆದಿದ್ದು, ಇದರಲ್ಲಿ ಭಾಗಿಯಾಗಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷ ಟಿ.ಡಿ.ಜಗದೀಶ್ ಚೌಡಳ್ಳಿ ಅವರು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಸತೀಶ್ ಕಬ್ಬಳಿ, ಕಾರ್ಯದರ್ಶಿ ಧರ್ಮರಾಜ್ ದೊಡ್ಡಬಾಗನಹಳ್ಳಿ, ಉಪ ಕಾರ್ಯದರ್ಶಿ ನವೀನ್ ಸಾಲಗಾಮೆ, ಪ್ರವೀಣ್ ಇತರರು ಉಪಸ್ಥಿತರಿದ್ದರು.



ಬೆಂಗಳೂರು ಜಿಲ್ಲೆಯ ಆನೇಕಲ್ ತೋಟಗಾರಿಕೆ ರೈತ ಉತ್ಪಾದಕ ಕಂಪೆನಿಯ 2021-2022ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಕಂಪೆನಿ ಅಧ್ಯಕ್ಷ ಕೆಂಪರಾಜು, ತೋಟಗಾರಿಕೆ ಉಪ ನಿರ್ದೇಶಕ ದೇವರಾಜು ಉದ್ಘಾಟಿಸಿದರು. ಈ ವೇಳೆ ನೂತನ ಮಂಡಳಿಯ ಅಧ್ಯಕ್ಷರಾಗಿ ಅರವಂಟಿಗೆಪುರದ ಎಸ್.ನಾರಾಯಣ್, ಉಪಾಧ್ಯಕ್ಷರಾಗಿ ಗೆರಟಿಗನಬೆಲೆಯ ಸುರೇಶ್, ನಿರ್ದೇಶಕರಾಗಿ ಹಾಲ್ದೇನಹಳ್ಳಿ ಲೋಕೇಶ ಎನ್, ರಾಜಾಪುರ ವೆಂಕಟೇಶ್, ಕೂನಿಮಡಿವಾಳ ಸೋಮಣ್ಣ, ಮಂಚನಹಳ್ಳಿ ಎಂ.ಆರ್.ಪ್ರಕಾಶ್, ಕಾವಲಹೊಸಹಳ್ಳಿ ಪ್ರಶಾಂತ್, ಸಬ್‌ಮಂಗಲ ರಾಜೇಂದ್ರ, ಎಂ.ಮೇಡಹಳ್ಳಿ ಮುರುಗೇಶ್, ಅರೇಹಳ್ಳಿ ಎ.ಎಂ.ಲೋಕೇಶ್, ಕರ್ಪೂರು ರಘುನಾಥ್, ಹೆನ್ನಾಘರ ಹರೀಶ್, ಗುಡ್ನಹಳ್ಳಿ ನಾಗರಾಜ್, ಸಮಂದೂರಿನ ಮಧುಕುಮಾರ್ ಮತ್ತು ಭಾಗ್ಯಮ್ಮರನ್ನು ಆಯ್ಕೆಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಸಮಂದೂರು ಕೆಂಪರಾಜು, ಜಂಟಿ ಕೃಷಿ ನಿರ್ದೇಶಕ ಜಯಸ್ವಾಮಿ, ಭಾರತೀಯ ತೋಟಗಾರಿಕ ಸಂಶೋಧನಾ ಸಂಸ್ಥೆಯ ವಿಜ್ಞಾನಿ ನಾರಾಯಣಸ್ವಾಮಿ ಮತ್ತು ಅತಿಖಿಲ್ಲ ಖಭಿಭಿಂಚಿ ಸಂಸ್ಥೆ ಗೋಪಾಲ ಕೃಷ್ಣ ಹೆಗಡೆ, ಆಡಿಟರ್ ಬಿ.ಬಿ.ಪಾಟೀಲ್ ಹಾಗೂ ರಸಗೊಬ್ಬರ ಕಂಪೆನಿಯ ಅಧಿಕಾರಿಗಳು ಭಾಗವಹಿಸಿದ್ದರು.



ತುಮಕೂರು ನಗರದ ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯದ ಮುಂಭಾಗ ಕುಣಿಗಲ್ ರಸ್ತೆಯ ದುರಸ್ಥಿ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಶಾಸಕ ಜ್ಯೋತಿ ಗಣೇಶ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮೇಯರ್ ಪ್ರಭಾವತಿ ಸುಧೀಶ್ವರ್, ಉಪಮೇಯರ್ ನರಸಿಂಹಮೂರ್ತಿ, ಮಾಜಿ ಮೇಯರ್ ಹಾಗೂ ಸದಸ್ಯರಾದ ಫರೀದಾಬೇಗಂ, ಮಂಜುನಾಥ್, ಧರಣೇಂದ್ರಕುಮಾರ್, ಶಕೀಲ್, ಆಯುಕ್ತೆ ರೇಣುಕಾ ಮತ್ತಿತರರು ಉಪಸ್ಥಿತರಿದ್ದರು.



ಮಂಡ್ಯದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾಮಟ್ಟದ ಹಿರಿಯ ನಾಗರಿಕರ ಕ್ರೀಡಾಕೂಟ ಹಾಗೂ ಸಾಂಸ್ಕ ತಿಕ ಸ್ಪರ್ಧೆಗಳ ಕಾರ್ಯಕ್ರಮಕ್ಕೆ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಅಧಿಕಾರಿ ಆರ್. ರೋಹಿತ್ ಚಾಲನೆ ನೀಡಿದರು. ನಿವೃತ್ತ ಅಧಿಕಾರಿಗಳಾದ ಎಚ್.ಕೆ. ರೇವಣ್ಣೇಶ್, ವೈ.ಕೆ. ಪುಟ್ಟಸ್ವಾಮಿ, ಅಕ್ಷಯ ನಿಕೇತನ ಶಿಕ್ಷಣ ಸಂಸ್ಥೆ ಮುಖ್ಯಸ್ಥ ಸೂನಗಹಳ್ಳಿ ಪುಟ್ಟಸ್ವಾಮಿ, ಇತರರು ಉಪಸ್ಥಿತರಿದ್ದರು.



ತಿ.ನರಸೀಪುರ ತಾಲೂಕಿನ ಚಿದರವಳ್ಳಿ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಕೃಷಿ ಇಲಾಖೆ, ಜಲಾನಯನ, ಎಲ್‌ಟಿ ಮೈಸೂರು ಗ್ರೀನ್ ಎಕ್ಸ್‌ಪೋರ್ಟ್ ಇವರ ಸಹಕಾರದಲ್ಲಿ ಆರಂಭಗೊಂಡ ತ್ರಿವೇಣಿ ಸಂಗಮ ರೈತ ಉತ್ಪಾದಕ ಕಂಪೆನಿ ಲಿಮಿಟೆಡ್ (ಎಫ್‌ಪಿಒ) ಉದ್ಘಾಟನೆ, ವಾರ್ಷಿಕ ಮಹಾಸಭೆ ಹಾಗೂ ಷೇರು ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶಾಸಕ ಅಶ್ವಿನ್ ಕುಮಾರ್, ಬೊಮ್ಮನಹಳ್ಳಿ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ತ್ರಿವೇಣಿ ಸಂಗಮ ರೈತ ಉತ್ಪಾದಕರ ಕಂಪೆನಿ ಅಧ್ಯಕ್ಷ ಕೆಂಪೇಗೌಡ (ದೇವರಾಜು), ಗ್ರಾಪಂ ಅಧ್ಯಕ್ಷ ಚಿಕ್ಕ ಮಲ್ಲಪ್ಪ, ಅಧ್ಯಕ್ಷೆ ಶೀಲಾ, ನಾಗೇಶ್, ಜಂಟಿ ಸಹಾಯಕ ಕೃಷಿ ನಿರ್ದೇಶಕಿ ಸುಹಾಸಿನಿ, ಸೋಸಲೆ ಕೃಷಿ ಅಧಿಕಾರಿ ಶಿವರಾಜ್, ಎಲ್‌ಟಿಮೈಸೂರು ಜೀನ್ ಎಕ್ಸ್ ಪೋರ್ಟ್ ಪ್ರೈವೇಟ್ ಲಿಮಿಟೆಡ್ ಮಂಜುನಾಥ್, ಕಂಪೆನಿಯ ನಿರ್ದೇಶಕರಾದ ನಂಜುಂಡೇಗೌಡ, ಚಿಕ್ಕಮಲ್ಲಪ್ಪ, ಶಿವಣ್ಣ ಸಿ., ಲೋಕೇಶ್‌ಎಂ., ಮಂಜುನಾಥ್ ಕೆ.ಎಂ., ಮಹದೇವ ಎಚ್.ಸಿ., ಶಿವಮಲ್ಲಪ್ಪ, ಮಂಜುನಾಥ, ಚಂದ್ರಶೇಖರ್, ಮಹಾದೇವಸ್ವಾಮಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಮುನಾ, ಸಂಪನ್ಮೂಲ ವ್ಯಕ್ತಿ ಗುರುಸ್ವಾಮಿ. ಜಿ (ರವಿ), ಜಿಲ್ಲಾ ಸಂಯೋಜಕ ನಾಗೇಂದ್ರ ಕೆ.ಎಂ, ಮತ್ತಿತರರು ಹಾಜರಿದ್ದರು.



ಚಾಮರಾಜನಗರ ತಾಲೂಕಿನ ವೆಂಕಟಯ್ಯ ಛತ್ರ ಗ್ರಾಮದಲ್ಲಿ ಸೋಮವಾರ ನಡೆದ ಭಾರತ್ ಜೋಡೋ ಯಾತ್ರೆ ಸಂಬಂಧ ತಾಲೂಕಿನ ದೊಡ್ಡಮೋಳೆ, ಹರದನಹಳ್ಳಿ, ಬಿಸಲವಾಡಿ, ಅಮಚವಾಡಿ, ವೆಂಕಟಯ್ಯನಛತ್ರ ಗ್ರಾಮಗಳಲ್ಲಿ ಚಾಮರಾಜನಗರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಪಕ್ಷದ ವತಿಯಿಂದ ಕಾರ್ಯಕರ್ತರ ಮತ್ತು ಮುಖಂಡರ ಸಭೆ ನಡೆಯಿತು. ಸಭೆಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ಆರ್.ಮಹದೇವ, ಗ್ರಾಪಂ ಅಧ್ಯಕ್ಷೆ ಬೇಬಿ, ಯಶೋಧ, ಮುಖಂಡರಾದ ಮಹದೇವಪ್ಪ, ಗುರುಸ್ವಾಮಿ, ಪುರುಷೋತ್ತಮ್, ಅಕ್ಕಮಹಾದೇವಮ್ಮ, ಎಪಿಎಂಸಿ ಸದಸ್ಯ ಸೋಮೇಶ್, ಸೋಮಣ್ಣ, ಗೋವಿಂದರಾಜು, ಹನುಮಂತು, ರಾಜು, ಶ್ರೀಕಂಠ, ರಾಜೇಶ್, ರಂಗರಾಮು, ಕೇಶವಮೂರ್ತಿ, ಹೊಸೂರುಜಗದೀಶ್, ಮುಖಂಡರು, ಕಾರ್ಯಕರ್ತರು, ಗ್ರಾಪಂ ಸದಸ್ಯರು ಹಾಜರಿದ್ದರು.



ಯಳಂದೂರು ತಾಲೂಕಿನ ವಡಗೆರೆ ಗ್ರಾಮದ ಬಳಿ ಇರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಶಾಸಕ ಎನ್.ಮಹೇಶ್, ಸಾಹಿತಿ ಮಹಾದೇವ ಶಂಕನಪುರ, ಗೌಡಹಳ್ಳಿ ಗ್ರಾಪಂ ಅಧ್ಯಕ್ಷೆ ಶಿವನಂಜಮ್ಮ, ಡಯಟ್ ಪ್ರಾಂಶುಪಾಲ ಎಚ್.ಕೆ. ಪಾಂಡು, ಬಿಇಒ ಕೆ. ಕಾಂತರಾಜು, ಬಿಆರ್‌ಸಿ ಬಿ.ಎನ್. ನಾಗೇಂದ್ರ, ದೈಹಿಕ ಪರಿವೀಕ್ಷಕ ಎಸ್. ಲಿಂಗರಾಜು ಶಿಕ್ಷಣ ಸಂಯೋಜಕ ಶಿವಲಂಕಾರ್, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವೀರಭದ್ರಸ್ವಾಮಿ ಸೇರಿದಂತೆ ಅನೇಕರು ಇದ್ದರು.



ಹುಣಸೂರು ತಾಲೂಕಿನ ಕಲ್ಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಕೆಸಿಸಿ ಸಾಲಾ ವಿತರಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ, ರಾಜ್ಯ ಅಫೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರಿಶ್ ಗೌಡ, ನಿರ್ದೇಶಕರಾದ ಕೆ.ಎಸ್.ಕುಮಾರ್, ನಾಗಭೂಷಣ, ಕರಿಯಯ್ಯ ಮತ್ತಿತರರಿದ್ದರು.



ಚಾಮರಾಜನಗರದ ಸಂತೇಮರಳ್ಳಿ ವೃತ್ತದ ಸಮೀಪದ ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಚೇರಿ ಆವರಣದಲ್ಲಿ ನಡೆದ ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2021-22ನೇ ಸಾಲಿನ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಂಘದ ಅಧ್ಯಕ್ಷ ಆರ್.ರಾಚಪ್ಪ ವಹಿಸಿದ್ದರು. ಸಭೆಯಲ್ಲಿ ಸಂಘದ ನಿರ್ದೇಶಕರಾದ ಶಾಂತಮ್ಮ, ಮಹದೇವಸ್ವಾಮಿ, ಕೆ.ಬಸವರಾಜು, ಕೆ.ರಾಚಯ್ಯ, ಸಿ.ಎಂ.ಮುರುಗೇಶ್‌ಕುಮಾರ್, ಲಿಂಗರಾಜಮೂರ್ತಿ, ಚಿಕ್ಕಣ್ಣ ಶಶಿಕುಮಾರ್, ನೌಕರರ ಸಂಘದ ಎಸ್.ರಂಗಸ್ವಾಮಿ, ಮುಖ್ಯ ಕಾರ್ಯನಿರ್ವಾಹಕ ಮಂಜುನಾಥ್ ಹಾಜರಿದ್ದರು.

ಜನದನಿಯ ಸಾರಥಿ
ವಾರ್ತಾ ಭಾರತಿ
ಬುಧವಾರ, ಸೆಪ್ಟಂಬರ್ 28, 2022 ಕನ್ಯಾ 11, ರಬೀವುಲ್ ಅವ್ವಲ್ 1

# ಸರಕಾರವನ್ನೇ ಬ್ಲ್ಯಾಕ್‌ಮೇಲ್ ಮಾಡುತ್ತಿರುವ ಗೋಶಾಲೆಗಳು

ಕಳೆದ ರವಿವಾರ ಗುಜರಾತ್‌ನ ಪಾಲನ್‌ಪುರದಲ್ಲಿ ಗುಜರಾತ್ ಸರಕಾರದ ವಿರುದ್ಧ ಒಂದು ಐತಿಹಾಸಿಕ ಪ್ರತಿಭಟನೆ ನಡೆಯಿತು. ಗುಜರಾತ್‌ನ ಹೆದ್ದಾರಿಯಲ್ಲಿ ಹತ್ತು ಸಾವಿರಕ್ಕೂ ಅಧಿಕ ಗೋವುಗಳು ಧರಣಿ ನಡೆಸಿದವು. ಗೋಶಾಲೆಗಳನ್ನು ನಿರ್ವಹಿಸಲು ಗುಜರಾತ್ ಸರಕಾರವು ಆರ್ಥಿಕ ನೆರವನ್ನು ನೀಡಲು ವಿಫಲವಾಗಿರುವುದನ್ನು ವಿರೋಧಿಸಿ ರವಿವಾರ 200ಕ್ಕೂ ಅಧಿಕ ಗೋಶಾಲೆಗಳ ಟ್ರಸ್ಟಿಗಳು ಸಾವಿರಾರು ದನಗಳನ್ನು ರಸ್ತೆಗೆ ಬಿಟ್ಟರು. ಪರಿಣಾಮವಾಗಿ ಗುಜರಾತ್‌ನ ಹೆದ್ದಾರಿಗಳಲ್ಲಿ ಸಂಚಾರ ಸ್ತಬ್ಧಗೊಂಡಿತು. ಗುಜರಾತ್ ರಾಜ್ಯವೊಂದರಲ್ಲೇ 150 ಗೋಶಾಲೆಗಳಿದ್ದು, ಅವುಗಳಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಅನುಪಯುಕ್ತ ಗೋವುಗಳನ್ನು ಸಾಕಲಾಗುತ್ತದೆ. ಇದು ಒಂದು ರಾಜ್ಯದ ಅಂಕಿಸಂಕಿಯಾದರೆ, ಇಡೀ ದೇಶದಲ್ಲಿ ಅನುಪಯುಕ್ತ ಗೋಶಾಲೆಗಳನ್ನು ನಡೆಸುವುದಕ್ಕಾಗಿ ಆಗುತ್ತಿರುವ ವೆಚ್ಚವನ್ನು ನಾವು ಕಲ್ಪಿಸಿಕೊಳ್ಳೋಣ. ಈ ಗೋಶಾಲೆಗಳನ್ನು ನಡೆಸುತ್ತಿರುವವರು ಹೈನೋದ್ಯಮದೊಂದಿಗೆ, ಕೃಷಿಯೊಂದಿಗೆ ಯಾವುದೇ ಸಂಬಂಧವಿಲ್ಲದ ವ್ಯಕ್ತಿಗಳು ಅಥವಾ ಸಂಘಟನೆಗಳು. ಕೋಟ್ಯಂತರ ರೂಪಾಯಿಯನ್ನು ಪ್ರತೀ ವರ್ಷ ಸರಕಾರ ಈ ಗೋಶಾಲೆಗಳಿಗೆ ಚೆಲ್ಲುತ್ತಿದೆಯಾದರೂ, ಈ ಗೋಶಾಲೆಗಳು ಪ್ರತಿಯಾಗಿ ದೇಶಕ್ಕೆ ಏನನ್ನೂ ಉತ್ಪಾದಿಸಿ ನೀಡುವುದಿಲ್ಲ. ಬದಲಿಗೆ, ಈ ಗೋಶಾಲೆಗಳು ಬೃಹತ್ ಅವ್ಯವಹಾರಗಳ ತಾಣವಾಗಿ ಬೆಳೆಯುತ್ತಿವೆ. ಒಂದೆಡೆ ಸರಕಾರದಿಂದ ಅನುದಾನಗಳನ್ನು ಪಡೆಯುತ್ತಲೇ, ಗೋವುಗಳಿಗೆ ಸೂಕ್ತ ಆಹಾರ ಔಷಧಿಗಳನ್ನು ನೀಡದೇ ಅವುಗಳ ಮಾರಣಹೋಮಕ್ಕೆ ಕಾರಣವಾಗುತ್ತಿವೆ. ಮಗದೊಂದೆಡೆ ಗುಟ್ಟಾಗಿ ಈ ಗೋಶಾಲೆಗಳಿಂದಲೇ ಬೃಹತ್ ಮಾಂಸ ಸಂಸ್ಕರಣಾ ಘಟಕಗಳಿಗೆ ಗೋವುಗಳ ಪೂರೈಕೆಯಾಗುತ್ತಿದೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ. ಇವೆಲ್ಲದರ ನಡುವೆ, ಇದೀಗ ಗೋಶಾಲೆಗಳು ಅನುದಾನ ಬಿಡುಗಡೆಯಾಗಿಲ್ಲ ಎನ್ನುವ ಕಾರಣ ಮುಂದೊಡ್ಡಿ ಗೋವುಗಳನ್ನು ರಸ್ತೆಗೆ ಬಿಟ್ಟು ಸರಕಾರವನ್ನೇ 'ಬ್ಲ್ಯಾಕ್ ಮೇಲ್' ಮಾಡಲು ಮುಂದಾಗಿವೆ. ಎಲ್ಲ ರಾಜ್ಯ ಸರಕಾರಗಳೂ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಮುಂದಿನ ದಿನಗಳಲ್ಲಿ ದೇಶಾದ್ಯಂತ ಗೋಶಾಲೆಗಳೆಲ್ಲ ಬೀದಿಗೆ ಬಿದ್ದರೆ ಅಚ್ಚರಿಯೇನೂ ಇಲ್ಲ. ಒಂದು ರೀತಿಯಲ್ಲಿ, ಸರಕಾರದ ಕಾನೂನು ಸರಕಾರಕ್ಕೇ ತಿರುಗುಬಾಣವಾಗಿ ಪರಿಣಮಿಸಿದೆ.

ಶತಶತಮಾನಗಳಿಂದ ಈ ದೇಶ ಗೋವುಗಳನ್ನು ಪಾಲಿಸುತ್ತಾ ಅದರ ಉತ್ಪನ್ನಗಳ ಮೂಲಕ ಜೀವಿಸುತ್ತಾ ಬಂದಿದೆ. ಗೋವು ಆರ್ಥಿಕತೆಯ ಸಂಕೇತವಾಗಿತ್ತು. ಎಂದೂ ಸರಕಾರಕ್ಕೆ ಅನುಪಯುಕ್ತ ಗೋವುಗಳನ್ನು ಸಾಕುವ ಹೊಣೆಗಾರಿಕೆಯಿದ್ದಿರಲಿಲ್ಲ. ಯಾಕೆಂದರೆ ಗೋಸಾಕಣೆಯಲ್ಲಿ ಅನುಪಯುಕ್ತ ಗೋವು ಎನ್ನುವ ಪರಿಕಲ್ಪನೆಯೇ ಇರಲಿಲ್ಲ. ಹಾಲು ಕೊಡುವ ಗೋವುಗಳು ರೈತರ ಬದುಕಿನ ಆಧಾರವಾಗಿದ್ದರೆ, ಹಾಲುಕೊಡದ ಗೋವುಗಳೂ ರೈತರಿಗೆ ಉಪಯೋಗಕ್ಕೆ ಬೀಳುತ್ತಿದ್ದವು. ಅಂತಹ ಗೋವುಗಳನ್ನು ರೈತರು ಮಾರಿ, ಮನೆಯ ಅಥವಾ ಹಟ್ಟಿಯ ಇತರ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುತ್ತಿದ್ದರು. ಒಂದು ಗೋವು ಕಡಿಮೆ ಎಂದರೂ 10,000 ರೂಪಾಯಿ ಬೆಲೆ ಬಾಳುತ್ತದೆ. ಚರ್ಮೋದ್ಯಮ, ಮಾಂಸೋದ್ಯಮಗಳಿಗೆ ಸಂಬಂಧಪಟ್ಟ ವ್ಯಕ್ತಿಗಳು ಈ ಹಸುಗಳನ್ನು ಖರೀದಿಸುತ್ತಿದ್ದರು. ಗೋವುಗಳನ್ನು ಸಾಕದ ಸಮುದಾಯವೊಂದು ಯಾವಾಗ ಹೈನೋದ್ಯಮದೊಳಗೆ ಮೂಗು ತೂರಿಸಿತೋ, ಅಲ್ಲಿಂದ ರೈತರ ಗ್ರಹಚಾರ ಕೆಟ್ಟಿತು. ಈ ಸಣ್ಣ ಗುಂಪನ್ನು ತೃಪ್ತಿ ಪಡಿಸುವುದಕ್ಕಾಗಿ ಸರಕಾರ 'ಜಾನುವಾರು ಮಾರಾಟ ನಿಷೇಧ' ಕಾಯ್ದೆಯೊಂದನ್ನು 'ಗೋ ಹತ್ಯೆ ನಿಷೇಧ'ದ ಹೆಸರಲ್ಲಿ ಜಾರಿಗೆ ತಂದಿತು. ತಮ್ಮ ಹಟ್ಟಿಯಲ್ಲಿರುವ ಗೋವುಗಳನ್ನು ಯಾರಿಗೆ ಮಾರಬೇಕು, ಮಾರಬಾರದು ಎನ್ನುವ ಹಕ್ಕನ್ನು ರೈತರು ಕಳೆದುಕೊಂಡರು. ಬೀದಿಯಲ್ಲಿರುವ ರೌಡಿಗಳು, ಪುಂಡರು ರೈತರಿಗೆ ಸಮಸ್ಯೆಯಾಗಿ ಕಾಡತೊಡಗಿದರು. ಅನುಪಯುಕ್ತ ಹಸುಗಳನ್ನು ಮಾರಲಾಗದೆ ರೈತರು ನಷ್ಟಕ್ಕೀಡಾದರು. ಈ ಗೋವುಗಳನ್ನು ಏನು ಮಾಡಬೇಕು? ಮೂರ್ಖ ಸರಕಾರ, ಈ ಗೋವುಗಳನ್ನು ಸಾಕುವ ಹೊಣೆಯನ್ನು ವಹಿಸಿಕೊಂಡಿತು. ಗೋಶಾಲೆಗಳು ರಚನೆಯಾದವು. ಜನರ ಅಭಿವೃದ್ಧಿಗಾಗಿ ವ್ಯಯಮಾಡಬೇಕಾದ ಹಣವನ್ನು ಸರಕಾರ ಗೋಶಾಲೆಗಳಿಗೆ ಸುರಿಯಿತು. ರೈತರೇ ಸಾಕಿ, ಬೇಕೆಂದರೆ ಇಟ್ಟುಕೊಂಡು, ಬೇಡವಾದರೆ ಮಾರುತ್ತಾ ತಮಗೆ ತಾವೇ ಉದ್ಯಮವನ್ನು ನಿಭಾಯಿಸುತ್ತಿದ್ದ ಹೊತ್ತಿನಲ್ಲಿ, ಅನಗತ್ಯವಾಗಿ ಈ ಅನುಪಯುಕ್ತ ಗೋವುಗಳನ್ನು ಸಾಕುವ ಹೊರೆಯನ್ನು ಸರಕಾರ ಮೈಮೇಲೆ ಎಳೆದುಕೊಂಡಿದ್ದು ಎಷ್ಟು ಸರಿ? ಇಂದು ಇದರಿಂದಾಗಿ ಒಂದೆಡೆ ಗೋಸಾಕಣೆಗಾರರು ತಮ್ಮ ಆದಾಯದ ಮೂಲವೊಂದನ್ನು ಕಳೆದುಕೊಂಡರೆ, ಇತ್ತ ಸರಕಾರ ಅನಗತ್ಯವಾಗಿ ಈ ಗೋಶಾಲೆಗಳಿಗಾಗಿ ಖಜಾನೆಯಿಂದ ಹಣವನ್ನು ವ್ಯಯ ಮಾಡಬೇಕಾಗಿದೆ. ಒಂದೆಡೆ ಕೃಷಿಕರಿಗೂ ಇನ್ನೊಂದೆಡೆ ಸರಕಾರಕ್ಕೂ ನಷ್ಟ. ಈ ನಡುವೆ ಹೈನೋದ್ಯಮದ ಜೊತೆಗೆ ಸಂಬಂಧವೇ ಇಲ್ಲದ ದಲ್ಲಾಳಿಗಳು ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇದೀಗ ಅವರು ಗೋವುಗಳನ್ನೇ ಛೂ ಬಿಟ್ಟು ಸರಕಾರವನ್ನು ಮಣಿಸಲು ಮುಂದಾಗಿದ್ದಾರೆ.

ಗೋಶಾಲೆಯೆಂಬ ಗುಂಡುಕಲ್ಲನ್ನು ಸರಕಾರ ತನ್ನ ಕುತ್ತಿಗೆಗೆ ಕಟ್ಟಿಕೊಂಡ ಪರಿಣಾಮ ಈಗಾಗಲೇ ಗ್ರಾಮೀಣ ಹೈನೋದ್ಯಮ ಏದುಸಿರು ಬಿಡತೊಡಗಿದೆ. ರೈತರು ನಿಧಾನಕ್ಕೆ ಗೋಸಾಕಣೆಯಿಂದ ಹಿಂದೆ ಸರಿಯುತ್ತಿದ್ದಾರೆ. ಬೀದಿಗಳಲ್ಲಿ , ರಸ್ತೆಗಳಲ್ಲಿ ಬಿಡಾಡಿ ಗೋವುಗಳು ಬಹುದೊಡ್ಡ ಸಮಸ್ಯೆಯಾಗಿದೆ. ಅಷ್ಟೇ ಅಲ್ಲ, ಹೀಗೆ ಬೀದಿಗೆ ಬಿದ್ದು ರೋಗಗ್ರಸ್ಥವಾದ ಗೋವುಗಳು ಇಡೀ ಕೃಷಿ ಕ್ಷೇತ್ರವನ್ನೇ ಆಹುತಿ ತೆಗೆದುಕೊಳ್ಳುತ್ತಿದೆ. ಒಂದೆಡೆ ಗೋಶಾಲೆಗಳಲ್ಲಿ ಅವ್ಯವಸ್ಥೆಯಿಂದ ಪ್ರತಿದಿನ ನೂರಾರು ಗೋವುಗಳು ಸಾಯುತ್ತಿದ್ದರೆ, ಮಗದೊಂದೆಡೆ ಸಾಂಕ್ರಾಮಿಕ ರೋಗಗಳಿಂದ ಲಕ್ಷಕ್ಕೂ ಅಧಿಕ ಗೋವುಗಳು ಸತ್ತಿರುವ ಅಂಕಿಅಂಶಗಳು ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯ ಪ್ರದೇಶದಿಂದ ಹೊರ ಬೀಳುತ್ತಿವೆ. ಈ ಸಾಂಕ್ರಾಮಿಕ ರೋಗಗಳನ್ನು ತಡೆಯುವಲ್ಲೂ ಸರಕಾರ ಸಂಪೂರ್ಣ ವಿಫಲವಾಗಿದೆ. ಒಂದೆಡೆ ರೈತರ ಉಪಯುಕ್ತ ಗೋವುಗಳಿಗೇ ಚಿಕಿತ್ಸೆ ನೀಡಿ ಅವುಗಳನ್ನು ಉಳಿಸಲು ವಿಫಲವಾಗುತ್ತಿರುವ ಸರಕಾರ, ಇತ್ತ ಅನುಪಯುಕ್ತ ಗೋವುಗಳನ್ನು ಕೋಟ್ಯಂತರ ರೂ. ವೆಚ್ಚ ಮಾಡಿ ಉಳಿಸುತ್ತದೆಯೆ? ಗೋವುಗಳ ಹೆಸರಿನಲ್ಲಿ ರಾಜಕೀಯ ನಡೆಸುವುದಕ್ಕಾಗಿ, ಒಂದು ಸಮುದಾಯವನ್ನು ದ್ವೇಷಿಸುವುದಕ್ಕಾಗಿ, ಅವರ ಮೇಲೆ ಹಿಂಸೆಯೆಸಗುವುದಕ್ಕಾಗಿ ತಂದಿರುವ ಗೋ ಹತ್ಯೆ ನಿಷೇಧ ಕಾನೂನು ಇದೀಗ ಸರಕಾರವನ್ನೇ ಇಕ್ಕಟ್ಟಿಗೆ ಸಿಲುಕಿಸಿದೆ. ಇಂದು ತಾನೇ ಸ್ಥಾಪಿಸಿದ ಗೋಶಾಲೆಗಳನ್ನು ನಿರ್ವಹಿಸಲಾಗದೆ ಅದು ಕೈ ಕೈ ಹಿಚುಕಿಕೊಳ್ಳುತ್ತಿದೆ.

'ಸಾವರ್ಕರ್'ರನ್ನು ಆದರ್ಶವಾಗಿಟ್ಟುಕೊಂಡ ಕೇಂದ್ರ ಸರಕಾರ ಗೋವಿನ ವಿಷಯದಲ್ಲಾದರೂ ಸಾವರ್ಕರ್ ಅವರ ಚಿಂತನೆಯನ್ನು ಗೌರವಿಸಿ ಅದನ್ನು ಅನುಷ್ಠಾನಗೊಳಿಸಲು ಮುಂದಾಗಬೇಕಾಗಿದೆ. ಗೋವನ್ನು ದೇವರು, ಮಾತೆ ಎಂದು ಕರೆಯುವುದನ್ನು ಸಾವರ್ಕರ್ ಕಟುವಾಗಿ ಟೀಕಿಸಿದ್ದರು. ಗೋವನ್ನು ಎಲ್ಲ ಜಾನುವಾರುಗಳಂತೆಯೇ ಕಾಣುವುದರಿಂದ, ದೇಶಕ್ಕೆ ಒಳಿತಿದೆ ಎಂದು ಸ್ಪಷ್ಟವಾಗಿ ಹೇಳಿದ್ದರು. ಗೋವನ್ನು ಮಾತೆ ಎಂದು ಕರೆದವರನ್ನು ಕಟು ಭಾಷೆಯಲ್ಲಿ ನಿಂದಿಸಿದ್ದರು. ಇಂದು ಗೋಶಾಲೆಗಳಿಂದ ಎದುರಾಗಿರುವ ಇಕ್ಕಟ್ಟಿನಿಂದ ಪಾರಾಗಲು ಸರಕಾರದ ಮುಂದಿರುವುದು ಒಂದೇ ದಾರಿ. ದೇಶದೊಳಗಿರುವ ಎಲ್ಲ ಗೋಶಾಲೆಗಳನ್ನು ಮುಚ್ಚಿಸಬೇಕು. ಗೋಶಾಲೆಗಳಿಗೆ ವ್ಯಯಿಸುವ ಹಣವನ್ನು ಸರಕಾರಿ ಶಾಲೆಗಳಿಗೆ, ಅಪೌಷ್ಟಿಕತೆ ನಿವಾರಣೆಗಾಗಿ ಬಳಸಬೇಕು. ಗೋವುಗಳನ್ನು ಮಾರುವ ಹಕ್ಕನ್ನು ರೈತರಿಗೇ ಬಿಟ್ಟುಕೊಡಬೇಕು. ಗೋಮಾಂಸಾಹಾರಿಗಳನ್ನು ಪ್ರೋತ್ಸಾಹಿಸಬೇಕು. ಈ ಮೂಲಕ ಹೈನೋದ್ಯಮ ಚಿಗುರುತ್ತವೆ. ಇತ್ತ ದೇಶದ ಅಪೌಷ್ಟಿಕತೆ, ಆಹಾರದ ಅಭಾವಗಳು ನಿವಾರಣೆಯಾಗುತ್ತವೆ. ನಿಜವಾದ ಗೋಸಾಕಣೆಗಾರರು ಬದುಕಿಕೊಳ್ಳುತ್ತಾರೆ. ಹಾಗೆಯೇ ನಕಲಿ ಗೋರಕ್ಷಕರ ಅಕ್ರಮಗಳಿಗೂ ತಡೆ ಬೀಳುತ್ತದೆ.

**ಈ ವಿಳಾಸ ಬಳಸಿ:**

'ವಾರ್ತಾ ಭಾರತಿ'ಯ ವಿಚಾರಭಾರತಿ ವಿಭಾಗಕ್ಕೆ ಲೇಖನಗಳು, ಸುದ್ದಿ ಚಿತ್ರಗಳು, ವ್ಯಕ್ತಿ ಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು-ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಕಳುಹಿಸಲು ಈ ಕೆಳಗಿನ ಇ-ಮೇಲ್ ವಿಳಾಸವನ್ನು ಬಳಸಿ.

vbvicharabharati@gmail.com

# ಕಾಂಗ್ರೆಸ್‌ನ 'ಭಾರತ್ ಜೋಡೊ' ಸಂಘಪರಿವಾರದ ಫ್ಯಾಶಿಸಂಗೆ ಸವಾಲಾಗಬಹುದೇ?



ಕಾಲಂ 9

ಶಿವಸುಂದರ್

ಭಾರತಕ್ಕೆ ಇಂದು ಅತ್ಯಗತ್ಯವಾಗಿರುವ ಪ್ರೀತಿ, ಸಾಮಾಜಿಕ ಒಳಗೊಳ್ಳುವಿಕೆ, ಒಕ್ಕೂಟ ತತ್ವಗಳ ಆಶಯಗಳನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ 'ಭಾರತ್ ಜೋಡೊ' ಪಾದಯಾತ್ರೆಯು ಇನ್ನೇನು ಕರ್ನಾಟಕವನ್ನು ಪ್ರವೇಶಿಸಲಿದೆ. ಕೇರಳದಲ್ಲಿ ಅದಕ್ಕೆ ಅಪಾರ ಜನಸ್ಪಂದನೆ ಸಿಕ್ಕಿದೆ. ಅಲ್ಲದೆ ಜನರನ್ನು ಮುಟ್ಟದ ಹಾಗೂ ಮುಟ್ಟಿಸಿಕೊಳ್ಳದ ಭಾರತದ ರಾಜಕೀಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಜನಸಾಮಾನ್ಯರೊಡನೆ ಬೆರೆಯುತ್ತಿರುವ ರೀತಿಗೆ ವ್ಯಾಪಕ ಮೆಚ್ಚುಗೆ ಸಿಗುತ್ತಿದೆ. ಇದು ಕಾಂಗ್ರೆಸ್ ವಲಯಗಳಿಗಿಂತ ಹೆಚ್ಚಾಗಿ ಕಾಂಗ್ರೆಸ್ ಒಂದು ನೈಜ ಪರ್ಯಾಯವಾಗಲಿ ಅಂದು ಆಶಿಸುತ್ತಿರುವ ಪ್ರಗತಿಪರರಲ್ಲಿ ಒಂದು ಹೊಸ ಉತ್ಸಾಹಕ್ಕೆ ಕಾರಣವಾಗಿದೆ. ಭಾರತ್ ಜೋಡೊ ಕಾರ್ಯಕ್ರಮಕ್ಕೆ ನಾಗರಿಕ ಸಮಾಜದ ಬೆಂಬಲವನ್ನೂ ಕಾಂಗ್ರೆಸ್ ಕೋರಿರುವುದರಿಂದ ಪ್ರಗತಿಪರ ವಲಯದ ವ್ಯಕ್ತಿಗಳು ಮತ್ತು ಸಂಘಟನೆಗಳು ಕಾಂಗ್ರೆಸ್ ಬಗ್ಗೆ ತಮಗಿದ್ದ ಮೂಲಭೂತ ರಾಜಕೀಯ ತಕರಾರುಗಳನ್ನೆಲ್ಲಾ ಪಕ್ಕಕ್ಕಿಟ್ಟು 'ಜೋಡೊ' ಜೊತೆ, ಕೆಲವರು ಬೇಷರತ್ತಾಗಿ, ಕೆಲವರು ಷರತ್ತಿನ ಆಧಾರದಲ್ಲಿ, ಒಟ್ಟಿನಲ್ಲಿ 'ಕೈಜೋಡಿಸುತ್ತಿದ್ದಾರೆ'.

### ಚುನಾವಣಾ ಲೆಕ್ಕಾಚಾರವಿದ್ದರೆ ತಪ್ಪೇನು?

ಭಾರತ್ ಜೋಡೊ ಯಾತ್ರೆಯ ಹಿಂದೆ ಇರುವುದು ಚುನಾವಣಾ ಲೆಕ್ಕಾಚಾರಕ್ಕೆ ಮೀರಿದ ಆಶಯಗಳು ಎಂಬ ಬಗ್ಗೆ ಪ್ರಗತಿಪರರ ಆಶಯಗಳು ಮತ್ತು ನಿರೀಕ್ಷೆಗಳು ಏನೇ ಇದ್ದರೂ ಕಾಂಗ್ರೆಸ್‌ನ ನಾಯಕತ್ವ ಮಾತ್ರ ಅದರ ಬಗ್ಗೆ ಸ್ಪಷ್ಟವಾಗಿದೆ. ಈ ದೇಶದ ಅತ್ಯಂತ ಹಳೆಯ ಹಾಗೂ ಬಿಜೆಪಿ ಬಿಟ್ಟರೆ (ಬಿಜೆಪಿಗೆ ಶೇ.36ರಷ್ಟು ಜನಬೆಂಬಲ-2019ರ ಚುನಾವಣೆಯಲ್ಲಿ) ಅತಿ ಹೆಚ್ಚು ಜನಬೆಂಬಲವನ್ನು (ಶೇ.19) ಪಡೆದಿರುವ ಕಾಂಗ್ರೆಸ್ ಪಕ್ಷ ಚುನಾವಣಾ ದೃಷ್ಟಿಯಿಂದಲೇ ಇದ್ದರೂ ತಡವಾಗಿಯಾದರೂ ಜನರನ್ನು ದೊಡ್ಡಮಟ್ಟದಲ್ಲಿ ತಲುಪುವ ಪ್ರಯತ್ನ ಮಾಡುತ್ತಿರುವುದು ಸ್ವಾಗತಾರ್ಹ ಎಂಬುದು ಕಾಂಗ್ರೆಸ್‌ನ ಕಟು ವಿಮರ್ಶಕರೂ ಅಭಿಪ್ರಾಯ ಪಡುತ್ತಾರೆ.

ಕಾಂಗ್ರೆಸ್ ಪಕ್ಷದ ಬಗ್ಗೆ ಸಹಾನುಭೂತಿ ಇರುವ ರಾಜಕೀಯ ವಿಶ್ಲೇಷಕರೇ ಬರೆಯುತ್ತಿರುವಂತೆ ಇದು ಕಾಂಗ್ರೆಸ್‌ನ ಪುನರುತ್ಥಾನ ಮಾಡುವ ಯಾತ್ರೆಯಲ್ಲ. ಬದಲಿಗೆ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಉಳಿದುಕೊಳ್ಳಲು ಮಾಡುತ್ತಿರುವ ಯಾತ್ರೆ ಆಗಿದೆ. ಆದ್ದರಿಂದಲೇ ಯಾತ್ರೆಯನ್ನು ಬರಲಿರುವ 2024ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಈಗಿನಕ್ಕಿಂತ ಹೆಚ್ಚಿನ ಸೀಟುಗಳನ್ನು ಮತ್ತು ವೋಟುಗಳನ್ನು ಪಡೆದುಕೊಳ್ಳಲು ಸಾಧ್ಯವಿರುವ ರಾಜ್ಯಗಳನ್ನೇ ಪ್ರಧಾನವಾಗಿ ಹಾದುಹೋಗುವಂತೆ ರೂಪಿಸಲಾಗಿದೆ. ತಮಿಳುನಾಡನ್ನೂ ಒಳಗೊಂಡಂತೆ ದೇಶದ ಪೂರ್ವ ಭಾಗದ (ತೆಲಂಗಾಣ, ಆಂಧ್ರ, ಒಡಿಶಾ, ಪ. ಬಂಗಾಳ) ರಾಜ್ಯಗಳಲ್ಲಿ 2014, 2019ರ ಚುನಾವಣೆಗಳಲ್ಲಿ ಕಾಂಗ್ರೆಸ್ ಪರಿಸ್ಥಿತಿ ಹೀನಾಯವಾಗಿತ್ತು. ಅದರ ಬದಲಿಗೆ ಯಾತ್ರೆ ಹಾದುಹೋಗುವ ರಾಜ್ಯಗಳಲ್ಲಿ ಕಾಂಗ್ರೆಸ್ ಸೋತ ಸಂದರ್ಭದಲ್ಲೂ ಪ್ರತಿಸ್ಪರ್ಧೆ ಒಡ್ಡುವಷ್ಟು ವೋಟುಗಳಿವೆ. ಅದರ ಜೊತೆಗೆ ಈ ಚುನಾವಣೆಯಲ್ಲಿ ಬಿಜೆಪಿಯ ಬಗ್ಗೆ ಬೇಸರಿಸಿಕೊಂಡಿರುವ ಶೇ.10-15 ಮತದಾರರನ್ನು ಒಲಿಸಿಕೊಂಡರೆ, ಈ ಬಾರಿ ನೂರರ ಸಮೀಪವಾಗುವಷ್ಟಾದರೂ ಸ್ಥಾನಗಳನ್ನು ಗೆಲ್ಲುವುದು ಕಾಂಗ್ರೆಸ್‌ನ ಗುರಿ. ಅದೇ ಭಾರತ್ ಜೋಡೊ ಉದ್ದೇಶ. ಭಾರತ್ ಜೋಡೊವಿನ ತಂತ್ರ-ಯೋಜನೆಗಳು ಕೂಡಾ ಪ್ರಧಾನವಾಗಿ ಈ ಹೆಚ್ಚುವರಿ ಮತದಾರರನ್ನೇ ಉದ್ದೇಶಿಸಿದೆ. ಭಾರತ್ ಜೋಡೊವಿನ ಕ್ಯಾಲೆಂಡರ್ ಕೂಡ ಇದಕ್ಕೆ ತಕ್ಕ ಹಾಗೆ ಸಿದ್ಧವಾಗಿದೆ.

ಇದು ಕಾಂಗ್ರೆಸ್ ಪಕ್ಷ ತಡವಾಗಿಯಾದರೂ ಇಂದಿನ ಕಾಲಸಂದರ್ಭಕ್ಕೆ ತಕ್ಕಹಾಗೆ ಎಚ್ಚೆತ್ತುಕೊಂಡು ತನ್ನ ರಾಜಕೀಯಕ್ಕೆ ಬೇಕಾದ ಕಾರ್ಯತಂತ್ರಗಳನ್ನು ನೇಯುತ್ತಿರುವುದನ್ನು ಸೂಚಿಸುತ್ತಿದೆ ಹಾಗೂ ತನ್ನದೇ ಚುನಾವಣಾ ರಾಜಕಾರಣಕ್ಕೆ ಬೇಕಾದ ಘೋಷಣೆಗಳನ್ನು ರೂಪಿಸಿದ್ದರೂ, ಅದು ಬಿಜೆಪಿಯ ದ್ವೇಷ ರಾಜಕೀಯಕ್ಕೆ ಬದಲಾದ ಪ್ರೀತಿಯ ಘೋಷಣೆ ಆಗಿದೆ. ಇದರಿಂದ ಒಂದೋ ಪ್ರೀತಿಯ ರಾಜಕೀಯ ಜನರನ್ನು ತಲುಪಿದರೆ ಒಳ್ಳೆಯದೇ ಆಗುತ್ತದೆ. ಕಾಂಗ್ರೆಸ್‌ಗೂ, ಸಮಾಜಕ್ಕೂ ಅಥವಾ ಇದರಿಂದ ನಿರೀಕ್ಷೆಯಷ್ಟು ಯಶ ಸಿಗದಿದ್ದರೆ, ಕಾಂಗ್ರೆಸ್‌ಗೆ ಹೆಚ್ಚಿನ ಚುನಾವಣಾ ಪ್ರಯೋಜನವಾಗಲಾರದೆ ಹೋಗಬಹುದು. ಹೀಗಾಗಿ ಇದನ್ನು ಕಾಂಗ್ರೆಸ್ ವಿರೋಧಿಗಳೂ ಸಕ್ರಿಯವಾಗಿ ವಿರೋಧಿಸಲು ಯಾವುದೇ ಕಾರಣವಿಲ್ಲ.

### ಪ್ರಗತಿಪರರ ಉತ್ಪ್ರೇಕ್ಷಿತ ನಿರೀಕ್ಷೆಗಳ ಅಪಾಯ

ಆದರೆ ಜೋಡೊವನ್ನು ಬೆಂಬಲಿಸುತ್ತಿರುವ ಕಾಂಗ್ರೆಸೇತರ ಪ್ರಗತಿಪರರ ಆಶಯಗಳು ಕಾಂಗ್ರೆಸ್‌ನ ಸೀಮಿತ ಗುರಿಗಳಿಗಿಂತ ಹಿರಿದಾದದ್ದು. ಹೀಗಾಗಿ ಸಹಜವಾಗಿ ಅವರ ಜೋಡೊ ಇಂದ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಹೀಗಾಗಿಯೇ ಅದನ್ನು ಬೆಂಬಲಿಸುತ್ತಿರುವ ಕೆಲವು ಪ್ರಗತಿಪರ ಮುತ್ಸದ್ದಿಗಳು ''ಈ ಭಾರತ್ ಜೋಡೊ ಮೇಲೆ ಪ್ರಜೆಯನ್ನು ತಂತ್ರದೊಡನೆ ಜೋಡಿಸಿ ಪ್ರಜಾತಂತ್ರವಾಗಿಸುವ, ಗಣವನ್ನು ರಾಜ್ಯದೊಡನೆ ಜೋಡಿಸಿ ನೈಜ ಗಣರಾಜ್ಯವಾಗಿಸುವ, ಕರ್ಮವನ್ನು ಮರ್ಮದೊಂದಿಗೆ ಜೋಡಿಸಿ ಸಾರ್ಥಕಗೊಳಿಸುವ..'' ಇನ್ನಿತ್ಯಾದಿ ಪ್ರಾಸಬದ್ಧ ಆದರೆ ತ್ರಾಸದಾಯಕ ಉದ್ದೇಶಗಳನ್ನು ಆರೋಪಿಸುತ್ತಿದ್ದಾರೆ.



**ಈ ಸಂದರ್ಭದಲ್ಲಿ ಕಾಂಗ್ರೆಸ್ ನಡೆಸುತ್ತಿರುವ ಭಾರತ್ ಜೋಡೊ ಯಾತ್ರೆಯನ್ನು ಹಾಗೂ ಅದರ ಇತಿ-ಮಿತಿಗಳನ್ನು ಬೆಂಬಲ ಹಾಗೂ ತಿರಸ್ಕಾರಗಳ ಬೈನರಿಗಳಾಚೆ ಇಟ್ಟು ವಿಶ್ಲೇಷಿಸಬೇಕಿದೆ. ಜೋಡೊ ಯಾತ್ರೆಯನ್ನು ಬೆಂಬಲಿಸಲು ಕಾಂಗ್ರೆಸಿಗರು ಕೊಡುವ ಮಾನದಂಡಗಳನ್ನು ಹಾಗೂ ತಿರಸ್ಕರಿಸಲು ಸಂಘಪರಿವಾರಿಗರು ಒದಗಿಸುವ ಮಾನದಂಡಗಳೆರಡನ್ನೂ ಪಕ್ಕಕ್ಕಿಡಬೇಕಿದೆ.**

**ಇಂದು ದೇಶ ಎದುರಿಸುತ್ತಿರುವ ಬ್ರಾಹ್ಮಣವಾದಿ ಹಿಂದುತ್ವ ಹಾಗೂ ಕಾರ್ಪೊರೇಟ್ ಬಂಡವಾಳಶಾಹಿ ಫ್ಯಾಶಿಸಂ ಅನ್ನು ಸೋಲಿಸಲು ಅತ್ಯಗತ್ಯವಾಗಿರುವ ಪರ್ಯಾಯದ ಜನಸಮರಕ್ಕೆ ಈ ಭಾರತ್ ಜೋಡೊ ಎಷ್ಟು ಪೂರಕ ಅಥವಾ ಮಾರಕ ಎಂಬುದಷ್ಟೇ ಭಾರತ್ ಜೋಡೊವನ್ನು ವಿಶ್ಲೇಷಿಸುವ ಪ್ರಮುಖ ಮಾನದಂಡವಾಗಬೇಕಿದೆ.**

ಸಂಘಪರಿವಾರ ಮತ್ತು ಬಿಜೆಪಿ ಸರಕಾರ ಕಳೆದ ಎಂಟು ವರ್ಷಗಳಿಂದ ಭಾರತದ ಸಮಾಜಿಕ ಹಂದರದ ಮೇಲೆ ಮಾಡುತ್ತಿರುವ ನಿರಂತರ ದಾಳಿ, ಸಮಾಜದಲ್ಲಿ ಹೆಚ್ಚುತ್ತಿರುವ ಕೋಮು ಧ್ರುವೀಕರಣ, ಕಂಡುಕೇಳರಿಯದ ದ್ವೇಷ ರಾಜಕಾರಣ, ಆರ್ಥಿಕ ಬಿಕ್ಕಟ್ಟುಗಳು, ಪ್ರಜಾತಾಂತ್ರಿಕ ಸಂಸ್ಥೆಗಳ ಸಾರ್ವತ್ರಿಕ ಅಧಃಪತನ ಹಾಗೂ ಸದ್ಯಕ್ಕೆ ಇವುಗಳಿಂದ ವಿಮೋಚನೆ ಪಡೆಯುವ ಯಾವ ದಾರಿಯೂ ಕಾಣದಿರುವ ಸಂದರ್ಭಗಳಿಂದಾಗಿ ಪ್ರಗತಿಪರರು ಜೋಡೊ ಇವೆಲ್ಲಕ್ಕೂ ಪರಿಹಾರದ ದಾರಿ ಕಾಣಿಸಬಹುದು ಎಂಬ ಆಸೆಗಣ್ಣನ್ನು ಹೊಂದಿದ್ದಾರೆ.

ಭಾಗ 1

ಆದ್ದರಿಂದ ಈ ಯಾತ್ರೆಯನ್ನು ಕೇವಲ ಕಾಂಗ್ರೆಸ್‌ನ ಚುನಾವಣಾ ಉದ್ದೇಶದ ಯಾತ್ರೆಯಾಗಿ ನೋಡಬಾರದೆಂದು ಬಯಸುತ್ತಾರೆ. ತಮ್ಮ ಬೆಂಬಲದ ಉದ್ದೇಶ ಕಾಂಗ್ರೆಸ್‌ನ ಚುನಾವಣಾ ಉದ್ದೇಶಗಳಿಗೂ ಮೀರಿ ಸಂದರ್ಭದ ರಾಜಕೀಯ ಅನಿವಾರ್ಯತೆಯಾಗಿದೆಯೆಂದು ಪ್ರತಿಪಾದಿಸುತ್ತಿದ್ದಾರೆ. ಹೀಗಾಗಿ ಈ ಯಾತ್ರೆಯ ಬಗ್ಗೆ ಯಾವುದೇ ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಕಾಂಗ್ರೆಸಿಗರಿಗಿಂತ ಇವರೇ ಹೆಚ್ಚಾಗಿ ಖಂಡಿಸುತ್ತಿದ್ದಾರೆ. ಕೆಲವರಂತೂ ಜೋಡೊವನ್ನು ಬೆಂಬಲಿಸುತ್ತಾ 70ರ ದಶಕದಲ್ಲಿ ಅಮಾಯಕ ಜನರು ಇಂದಿರಾಗಾಂಧಿಯನ್ನು ಹೇಗೆ ಆರಾಧಿಸುತ್ತಿದ್ದರೋ ಆ ರೀತಿ ರಾಹುಲ್ ಗಾಂಧಿಯನ್ನು ಆರಾಧಿಸಲು ತೊಡಗಿದ್ದಾರೆ. ಅವರ ಹಾವಭಾವ, ನಗು ..ಪ್ರತಿಯೊಂದರಲ್ಲೂ ದೇಶದ ಭವಿಷ್ಯವನ್ನು ಕಾಣತೊಡಗಿದ್ದಾರೆ. ಇನ್ನು ಕೆಲವು ಬುದ್ಧಿಜೀವಿಗಳು ಜೋಡೊವನ್ನು ಬೆಂಬಲಿಸುವ ಪ್ರಕ್ರಿಯೆಯಲ್ಲಿ ಕಾಂಗ್ರೆಸ್‌ನ ಎಲ್ಲಾ ಮಾರಕ ಆರ್ಥಿಕ ನೀತಿಗಳನ್ನೂ, ಎಲ್ಲಾ ಪ್ರಮಾದಗಳನ್ನು ಬೆಂಬಲಿಸಲು ಪ್ರಾರಂಭಿಸಿದ್ದಾರೆ. ಆ ಪ್ರಕ್ರಿಯೆಯಲ್ಲಿ ಇತಿಹಾಸವನ್ನೂ ಕಾಂಗ್ರೆಸ್‌ನ ವಿರುದ್ಧ ಬಿಜೆಪಿಯ ಸಂಚೆಂದು ನೋಡಲು ಪ್ರಾರಂಭಿಸಿದ್ದಾರೆ.

ಹೀಗಾಗಿ ಯೋಗೇಂದ್ರ ಯಾದವ್ ರೀತಿಯ ಬುದ್ಧಿಜೀವಿಗಳು ಹೇಳುತ್ತಿರುವಂತೆ, ''ಭಾರತ ಜೋಡೊ ದೇಶವನ್ನು ಉಳಿಸುವ ಘಳಿಗೆ ಇದು. ಈಗಿಲ್ಲವೆಂದರೆ ಇನ್ಯಾವಾಗ? ಇದು ಕೇವಲ ಕಾಂಗ್ರೆಸ್‌ನ ಕಾರ್ಯಕ್ರಮವಲ್ಲ'' ಎಂಬ ಸಮರ್ಥನೆಗಳು ವಾಸ್ತವಕ್ಕೆ ವಿರುದ್ಧವಾಗಿರುವ ಮತ್ತು ಭವಿಷ್ಯದಲ್ಲೂ ಅಪಾಯಕಾರಿಯಾಗುವ ಸೂಚನೆಗಳನ್ನು ನೀಡುತ್ತಿದೆ. ಏಕೆಂದರೆ ಸ್ವಾತಂತ್ರ್ಯಾನಂತರದಲ್ಲಿ ಕಾಂಗ್ರೆಸ್‌ನ ಅಧಿಕಾರಾವಧಿಯಲ್ಲೇ ಪ್ರಜೆಯು ತಂತ್ರದಿಂದ, ಗಣವು ರಾಜ್ಯದಿಂದ, ಧರ್ಮವು ನೈತಿಕತೆಯಿಂದ ದೂರವಾಗುವ ಪ್ರಕ್ರಿಯೆ ಪ್ರಾರಂಭವಾಗಿತ್ತು. ಬಿಜೆಪಿ ಮತ್ತು ಸಂಘಪರಿವಾರ ಈ ವಿಭಜನೆಯನ್ನು ಹತ್ತು ಹಲವು ಆಯಾಮಗಳಿಗೆ ಇನ್ನಷ್ಟು ವೇಗವಾಗಿ ಮತ್ತು ಉಗ್ರವಾಗಿ ಮತ್ತು ಆಳವಾಗಿ ವಿಸ್ತರಿಸಿದೆ. ಹೀಗಾಗಿ ಇವೆಲ್ಲವನ್ನೂ ಮತ್ತೆ ಜೋಡಿಸುವ ಕಾರ್ಯಕ್ರಮಗಳು ಕಾಂಗ್ರೆಸ್ ಈ ಜೋಡೊ ಯಾತ್ರೆಯವರೆಗೂ ಕಾಯಬೇಕಿರಲಿಲ್ಲ ಅಥವಾ ಈ ಜೋಡೊ ಯಾತ್ರೆಯೊಂದಿಗೆ ಆ ಉದ್ದೇಶಗಳು ಈಡೇರುವುದೂ ಇಲ್ಲ. ಮುಗಿಯಲೂ ಬಾರದು.

ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡುವುದಾದರೆ ಇಂತಹ ಅಸಹಾಯಕ ಹಾಗೂ ಉತ್ಪ್ರೇಕ್ಷಿತ ಬೆಂಬಲಗಳು ಬಹಳಷ್ಟು ಬಾರಿ ಸಿನಿಕತನದಲ್ಲಿ ಪರ್ಯಾವಸಾನಗೊಂಡಿವೆ.

### ಭಾರತ್ ಜೋಡೊ ವಿಶ್ಲೇಷಣೆಯ ಜನಪರ ಮಾನದಂಡಗಳೇನು?

ಆದ್ದರಿಂದ ಈ ಸಂದರ್ಭದಲ್ಲಿ ಕಾಂಗ್ರೆಸ್ ನಡೆಸುತ್ತಿರುವ ಭಾರತ್ ಜೋಡೊ ಯಾತ್ರೆಯನ್ನು ಹಾಗೂ ಅದರ ಇತಿ-ಮಿತಿಗಳನ್ನು ಬೆಂಬಲ ಹಾಗೂ ತಿರಸ್ಕಾರಗಳ ಬೈನರಿಗಳಾಚೆ ಇಟ್ಟು ವಿಶ್ಲೇಷಿಸಬೇಕಿದೆ. ಜೋಡೊ ಯಾತ್ರೆಯನ್ನು ಬೆಂಬಲಿಸಲು ಕಾಂಗ್ರೆಸಿಗರು ಕೊಡುವ ಮಾನದಂಡಗಳನ್ನು ಹಾಗೂ ತಿರಸ್ಕರಿಸಲು ಸಂಘಪರಿವಾರಿಗರು ಒದಗಿಸುವ ಮಾನದಂಡಗಳೆರಡನ್ನೂ ಪಕ್ಕಕ್ಕಿಡಬೇಕಿದೆ.

ಇಂದು ದೇಶ ಎದುರಿಸುತ್ತಿರುವ ಬ್ರಾಹ್ಮಣವಾದಿ ಹಿಂದುತ್ವ ಹಾಗೂ ಕಾರ್ಪೊರೇಟ್ ಬಂಡವಾಳಶಾಹಿ ಫ್ಯಾಶಿಸಂ ಅನ್ನು ಸೋಲಿಸಲು ಅತ್ಯಗತ್ಯವಾಗಿರುವ ಪರ್ಯಾಯದ ಜನಸಮರಕ್ಕೆ ಈ ಭಾರತ್ ಜೋಡೊ ಎಷ್ಟು ಪೂರಕ ಅಥವಾ ಮಾರಕ ಎಂಬುದಷ್ಟೇ ಭಾರತ್ ಜೋಡೊವನ್ನು ವಿಶ್ಲೇಷಿಸುವ ಪ್ರಮುಖ ಮಾನದಂಡವಾಗಬೇಕಿದೆ.

ಹಾಗಿದ್ದಲ್ಲಿ ಕಾಂಗ್ರೆಸ್‌ನ ಭಾರತ್ ಜೋಡೊಗೆ ಷರತ್ತು ಬದ್ಧ ಬೆಂಬಲವೋ ಹಾಗೂ ಬೇಷರತ್ ಬೆಂಬಲವೋ ನೀಡುವುದರಿಂದ ಭಾರತದಲ್ಲಿ ಫ್ಯಾಶಿಸಂ ವಿರೋಧಿ ಜನಸಮರ ಗಟ್ಟಿಗೊಳ್ಳುವುದೇ?

ಮೊದಲನೆಯದಾಗಿ ಈ ಶರತ್ತುಬದ್ಧ ಬೆಂಬಲ ಮತ್ತು ಬೇಷರತ್ ಬೆಂಬಲದ ನಡುವೆ ಹೆಚ್ಚಿನ ಮತ್ತು ಮೌಲಿಕ ವ್ಯತ್ಯಾಸವಿಲ್ಲ. ಬೇಷರತ್ ಬೆಂಬಲಿಗರು ಕಾಂಗ್ರೆಸ್ ಕೊಡುವ ಭರವಸೆಗಳನ್ನೆಲ್ಲಾ ಪಾಲಿಸುತ್ತಲೇ ಬಂದಿದೆ ಎಂದು ನಂಬಲು ಬಯಸುತ್ತಾರೆ. ಶರತ್ತು ಬದ್ಧ ಬೆಂಬಲಿಗರು ಈ ಹಿಂದೆ ಕಾಂಗ್ರೆಸ್ ಕೊಟ್ಟ ಭರವಸೆಯನ್ನು ಈಡೇರಿಸಿಲ್ಲವಾದರೂ ಮುಂದೆ ಅದು ಈಡೇರಿಸಬಹುದು ಎಂಬ ನಿರೀಕ್ಷೆಯನ್ನು ಹುಟ್ಟುಹಾಕಬಯಸುತ್ತಾರೆ.

ಹೀಗಾಗಿ ಅವೆರಡನ್ನು ಹೊರತುಪಡಿಸಿ ಕೇಳಿಕೊಳ್ಳಬೇಕಾದ ಪ್ರಶ್ನೆಗಳು ಇವಾಗಿವೆ-

ದೇಶ ಎದುರಿಸುತ್ತಿರುವ ಇಂದಿನ ಫ್ಯಾಶಿಸ್ಟ್ ಅಪಾಯದ ಸ್ವರೂಪವೇನು? ಫ್ಯಾಶಿಸ್ಟರು ಸಮಾಜದಲ್ಲಿ ಬಲಗೊಳ್ಳಲು ಮತ್ತು ಅಧಿಕಾರ ಹಿಡಿಯಲು ಕಾಂಗ್ರೆಸ್‌ನ ರಾಜಕೀಯ ಸಿದ್ಧಾಂತದ ಮತ್ತು ವರ್ಗ ಹಿತಾಸಕ್ತಿಯ ಕೊಡುಗೆ ಎಷ್ಟು? ಇಂದು ಅದು ಬದಲಾಗಿದೆಯೇ? ಇತಿಹಾಸದಲ್ಲಿ ಅದು ಶರತ್ತುಗಳಿಗೆ ದ್ರೋಹ ಬಗೆದದ್ದು ಕೇವಲ ಅಧಿಕಾರದ ಕಾರಣಕ್ಕಾಗಿಯೇ ಅಥವಾ ಕಾಂಗ್ರೆಸ್‌ನ ರಾಜಕೀಯ-ಸಾಮಾಜಿಕ-ಆರ್ಥಿಕ ನೀತಿಗಳಲ್ಲೇ ಫ್ಯಾಶಿಸಂನ ಬೇರುಗಳಿವೆಯೇ? ಫ್ಯಾಶಿಸಂ ಅನ್ನು ಚುನಾವಣೆಯ ಮೂಲಕ ಸೋಲಿಸಲು ಸಾಧ್ಯವೇ?

### ಸಂಘಪರಿವಾರ-ಬ್ರಾಹ್ಮಣವಾದ, ಬಂಡವಾಳವಾದ ಅತ್ಯುಗ್ರ ಸರ್ವಾಧಿಕಾರ

ಅಂಬೇಡ್ಕರ್ ಹೇಳುವಂತೆ ಈ ದೇಶದ ಪ್ರಧಾನ ಶತ್ರುಗಳು ಬ್ರಾಹ್ಮಣವಾದ ಮತ್ತು ಬಂಡವಾಳವಾದ.

ಭಾರತಕ್ಕೆ ಇಂದು ಎದುರಾಗಿರುವ ಫ್ಯಾಶಿಸಂ ಬಂಡವಾಳವಾದ ಮತ್ತು ಬ್ರಾಹ್ಮಣಶಾಹಿಯ ಅತಿ ನಗ್ನ, ಅತ್ಯುಗ್ರ ಬಹಿರಂಗ ಸರ್ವಾಧಿಕಾರ.

ಅದರ ಅತಿ ಆಕ್ರಮಣಕಾರಿ ಸ್ವರೂಪ ಬಿಜೆಪಿಯಾದರೂ, ಇತರ ಎಲ್ಲಾ ಪಕ್ಷಗಳೂ ಸಹ ಬಂಡವಾಳಶಾಹಿ ಮತ್ತು ಬ್ರಾಹ್ಮಣಶಾಹಿಯನ್ನು ಪೋಷಿಸಿವೆ ಮತ್ತು ಪೋಷಿಸಲ್ಪಟ್ಟಿವೆ. ಸ್ವಾತಂತ್ರ್ಯಾನಂತರದಲ್ಲೂ ಪಕ್ಷಾತೀತವಾಗಿ ಪಡೆದ ಪೋಷಣೆಯಿಂದಾಗಿ ಈ ಬ್ರಾಹ್ಮಣೀಯ ಫ್ಯಾಶಿಸಂ ಎಲ್ಲಾ ಜಾತಿ-ಸಮುದಾಯಗಳಲ್ಲೂ ಬೇರುಬಿಟ್ಟುಕೊಂಡಿವೆ.

ನವ ವರ್ಣಾಶ್ರಮ ಚೌಕಟ್ಟಿನಲ್ಲಿ ಅದರ ಮೇಲ್‌ಸ್ತರಗಳನ್ನು ಅಲ್ಲಲ್ಲಿ ಒಳಗೊಳ್ಳುತ್ತಾ ಸುಭದ್ರ ಸಾಮಾಜಿಕ ನೆಲೆಯನ್ನು ಪಡೆದುಕೊಂಡಿದೆ. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಈ ಬ್ರಾಹ್ಮಣ್ಯವನ್ನು ಹಿಂದೂತ್ವ ಮತ್ತು ಹಿಂದೂ ರಾಷ್ಟ್ರದ ಅಜೆಂಡಾಗಳಲ್ಲಿ ಪ್ಯಾಕೇಜು ಮಾಡಿ ಇತರ ಧರ್ಮೀಯರನ್ನು ಅನ್ಯಗೊಳಿಸಿ, ಶೋಷಿತ ಜಾತಿಗಳನ್ನು ಅಧೀನಗೊಳಿಸಿಕೊಳ್ಳುವ ಸಾಮಾಜಿಕ ಇಂಜಿನಿಯರಿಂಗ್ ನಡೆಸಿದೆ.

ಮತ್ತೊಂದೆಡೆ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳನ್ನು ಒಳಗೊಂಡಂತೆ ಎಲ್ಲಾ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಸೈದ್ಧಾಂತಿಕವಾಗಿ ಹಿಂದೂಕರಿಸಿದೆ. ಒಂದು ಹಿಂದುತ್ವವಾದಿ 'ಡೀಪ್ ಸ್ಟೇಟ್' ಸರಕಾರ ನಡೆಸಿದೆ. ■

# 'ಭಾರತ್ ಜೋಡೊ' ಹೃದಯ ಬೆಸೆಯಲಿ



ಜಿ.ಪಿ. ಬಸವರಾಜು

ರಾಹುಲ್ ಗಾಂಧಿ ಅವರು ಆರಂಭಿಸಿರುವ ಕಾಂಗ್ರೆಸ್‌ನ 'ಭಾರತ್ ಜೋಡೊ' ಯಾತ್ರೆ ಮೂರು ವಾರಗಳನ್ನು ಪೂರೈಸಿದೆ. ಎರಡು ರಾಜ್ಯಗಳನ್ನು ಸುತ್ತಿದೆ. ಸದ್ಯದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಲಿದೆ.

ಕಾಂಗ್ರೆಸ್ ಪಕ್ಷಕ್ಕೆ ಹೊಸ ಉಮೇದು, ಬಲಗಳನ್ನು ತುಂಬುವ ನೇರ ಉದ್ದೇಶದಿಂದ ಈ ಯಾತ್ರೆ ಸೆಪ್ಟಂಬರ್ 7ರಂದು ಆರಂಭವಾದರೂ, ಅದು ಹೊಸ ರೂಪಗಳನ್ನು, ಹೊಸ ಅರ್ಥ, ಆಯಾಮಗಳನ್ನು ಪಡೆದುಕೊಂಡಿತು. ಸಾವಿರಾರು, ಲಕ್ಷಾಂತರ ಜನ ಈ ಯಾತ್ರೆಗೆ ಕೈಜೋಡಿಸುತ್ತ ಅದರ ಅರ್ಥವಿಸ್ತಾರಕ್ಕೆ ಕಾರಣವಾಗಿದ್ದಾರೆ.

12 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳಲ್ಲಿ 3,500 ಕಿ.ಮೀ.ನಷ್ಟು ದೂರವನ್ನು ಕಾಲುನಡಿಗೆಯಲ್ಲಿ ಸುತ್ತುವುದರ ಮೂಲಕ 'ಒಡೆದ ಭಾರತವನ್ನು' ಜೋಡಿಸುವುದು ಈ ಯಾತ್ರೆಯ ಗುರಿಯಾಗಿದೆ.



ಇಂತಹ ಯಾತ್ರೆಗಳು ಭಾರತಕ್ಕೆ ಹೊಸತಲ್ಲ. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ನಂತರ ನೇರವಾಗಿ ಸ್ವಾತಂತ್ರ್ಯ ಚಳವಳಿಗೆ ಧುಮುಕಲಿಲ್ಲ. ಅವರು ಮೊದಲು ಭಾರತವನ್ನು ಸುತ್ತಿದರು. ಆ ಹೊತ್ತಿನ ಜನತೆಯ ಸ್ಥಿತಿಗತಿಯನ್ನು ತಿಳಿಯಲು ಹವಣಿಸಿದರು. ಆ ಯಾತ್ರೆ ಅವರ ಒಳ-ಹೊರಗುಗಳನ್ನು ಸಂಪೂರ್ಣವಾಗಿ ಬದಲಿಸಿತು.

ನಂತರದ ಯಾತ್ರೆಗಳು ಭಾರತೀಯರ ನೆನಪಿನಲ್ಲಿ ಉಳಿದಿವೆ. ಅಡ್ವಾಣಿ ನಡೆಸಿದ ರಥಯಾತ್ರೆ ಮತ್ತು ಅದು ತಂದುಕೊಟ್ಟ ಪರಿಣಾಮಗಳನ್ನು ಈಗಲೂ ನಾವೆಲ್ಲ ಅನುಭವಿಸುತ್ತಲೇ ಇದ್ದೇವೆ. ರಾಹುಲ್ ಅವರ ಯಾತ್ರೆ ಒಂದರ್ಥದಲ್ಲಿ ಅಡ್ವಾಣಿ ಯಾತ್ರೆಗೆ ಮುಖಾಮುಖಿಯಾಗಿ ನಿಂತಿರುವ ಯಾತ್ರೆಯಂತೆಯೂ ಕಾಣಿಸುತ್ತಿದೆ. ಈ ಯಾತ್ರೆಯ ನಂತರ ಕಾಂಗ್ರೆಸ್ ಮಾತ್ರವಲ್ಲ, ಸ್ವತಃ ರಾಹುಲ್ ಗಾಂಧಿಯವರೇ ಬೇರೆಯೇ ರೂಪವನ್ನು, ವ್ಯಕ್ತಿತ್ವವನ್ನು ಪಡೆದುಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

2014ರ ಲೋಕಸಭಾ ಚುನಾವಣೆಯ ನಂತರ ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರವನ್ನು ಭರ್ಜರಿ ಬಹುಮತದಿಂದ ಹಿಡಿಯಿತು. ಮೋದಿ ಪ್ರಧಾನಿಯಾದರು. ನಮ್ಮ ಪ್ರಜಾಪ್ರಭುತ್ವ ಮತ್ತು ನಮ್ಮ ಸಂವಿಧಾನದಲ್ಲಿ ಇಂಥ ಅವಕಾಶಗಳು ಇವೆ. ಯಾವ ಪಕ್ಷವೂ ಅಧಿಕಾರಕ್ಕೆ ಬರುವ, ಯಾರೂ ಪ್ರಧಾನಿಯಾಗುವ ಸಮಾನ ಅವಕಾಶಗಳನ್ನು ನಾವು ಒಪ್ಪಿಕೊಂಡಿರುವ, ಡಾ. ಬಿ.ಆರ್. ಅಂಬೇಡ್ಕರ್ ನೀಡಿರುವ ಸಂವಿಧಾನ ಕಲ್ಪಿಸಿಕೊಟ್ಟಿದೆ. ಕೆಲವು ರಾಜ್ಯಗಳಲ್ಲೂ ಬಿಜೆಪಿ ಅಧಿಕಾರವನ್ನು ಹಿಡಿದು, 'ಡಬ್ಬಲ್ ಇಂಜಿನ್' ಸರಕಾರಗಳ ಹುಟ್ಟಿಗೆ ಕಾರಣವಾಗಿದೆ.

ಈ ಎಂಟು ವರ್ಷಗಳ ಆಡಳಿತಾವಧಿಯಲ್ಲಿ ಭಾರತ ಪಡೆದುಕೊಂಡ ರೂಪಾಂತರಗಳನ್ನು ನಾವೆಲ್ಲ ನೋಡಿದ್ದೇವೆ; ಅದರ ಕರಾಳ ನರ್ತನವನ್ನೂ ಕಂಡಿದ್ದೇವೆ. ಅಧಿಕಾರ ವಿಕೇಂದ್ರೀಕರಣದ ಬದಲು ಮೂರ್ನಾಲ್ಕು ವ್ಯಕ್ತಿಗಳಲ್ಲೇ ಅಧಿಕಾರದ ಜುಟ್ಟು ಇರುವುದನ್ನೂ ಗಮನಿಸಿದ್ದೇವೆ. ಅದೇ ರೀತಿ ಈ ದೇಶದ ಸಾಮಾನ್ಯ ಜನರನ್ನು ಹಿಂಡುವ, ಬೆರಳೆಣಿಕೆಯ ಬಂಡವಾಳಗಾರರನ್ನು ಜಗತ್ತಿನ ಅತಿ ಶ್ರೀಮಂತರ ಪಟ್ಟಿಗೆ ಸೇರಿಸಿದ ಅಂದರ್ ಬಾಹರ್ ಆಟವನ್ನು ಭಾರತೀಯರು ಕಾಣಬೇಕಾಯಿತು. ಇದು ಕೇವಲ ಆಟವಲ್ಲ; ಜನರ ಬದುಕನ್ನು ನುಂಗುವ ಅಟ್ಟಹಾಸದ ರಾಕ್ಷಸೀ ಕೃತ್ಯ ಎಂಬುದನ್ನೂ ನಾವೆಲ್ಲ ಅನುಭವಿಸಬೇಕಾಯಿತು.

ಬೆಲೆಗಳ ಏರಿಕೆಯ ಬಿಸಿ, ನಿರುದ್ಯೋಗದ ಬಿಸಿ, ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿ ಮೀಸಲಾತಿಯನ್ನು ಗಾಳಿಗೆ ತೂರಿದ ಬಿಸಿ, ಸಮುದಾಯಗಳನ್ನು ಒಡೆದು ದ್ವೇಷವನ್ನು ಬಿತ್ತಿದ ಬಿಸಿ, ಸ್ವಾತಂತ್ರ್ಯವೆಂಬುದು ಕೆಲವರ ಸ್ವೇಚ್ಛಾಚಾರವಾದ ಬಿಸಿ, ಸರಕಾರದ ಆಡಳಿತ ಯಂತ್ರವನ್ನು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಬಳಸಿಕೊಂಡ ಬಿಸಿ-ಹೀಗೆ ಬಗೆಬಗೆಯ ಬಿಸಿಗಳಿಗೆ ಮೈಕೊಟ್ಟಿದ್ದೇವೆ. ಇದು ಕೇವಲ ಬಿಸಿಯಲ್ಲ; ಇಡೀ ಭಾರತವೇ ಕುದಿವ ಕಡಾಯಿಯಲ್ಲಿ ಬೇಯುವ ಸಹಿಸಲಸಾಧ್ಯವಾದ ನೋವಿನ ಅನುಭವ.

ಇದರ ಮುಖಗಳು ಇನ್ನು ಅಸಂಖ್ಯ. ಈ.ಡಿ., ಸಿಬಿಐ, ಎನ್‌ಐಎ, ಇತ್ಯಾದಿ ಎಲ್ಲ ತನಿಖಾ ಸಂಸ್ಥೆಗಳ ಸ್ವತಂತ್ರ ಅಸ್ತಿತ್ವವನ್ನೇ ನಾಶಮಾಡಲಾಯಿತು. ಭ್ರಷ್ಟಾಚಾರದ ವಿರುದ್ಧದ ಕಾರ್ಯಾಚರಣೆ, ಅಕ್ರಮ ಸಂಪತ್ತಿನ ವಿರುದ್ಧದ ತನಿಖೆ ಇತ್ಯಾದಿ ನೆಪಗಳನ್ನು ಹೇಳಿ ತನಗಾಗದವರನ್ನು ಹಿಂಸಿಸಲು, ಟೀಕಾಕಾರನ್ನು ಬಗ್ಗುಬಡಿಯಲು ನೋಡಲಾಯಿತು. ಇಂತಹ ತನಿಖೆಗಳಿಗೆ ಒಳಗಾಗಿ ಹಿಂಸೆ ಅನುಭವಿಸಿದವರು ಯಾರು ಎಂಬುದನ್ನು ಗಮನಿಸಿದರೆ ತನಿಖೆಗಳ ಹಿಂದಿನ ಗುಟ್ಟು ಮತ್ತು ಉದ್ದೇಶ ಸುಲಭವಾಗಿ ತಿಳಿಯುತ್ತದೆ. ಜನಪ್ರತಿನಿಧಿಗಳನ್ನು ಗುಪ್ತವಾಗಿ ಕೊಳ್ಳುವ, ಅವರನ್ನು ಮಾರಾಟದ ಸರಕಿನಂತೆ ಬಳಸುವ, ಆ ಮೂಲಕ ಸರಕಾರಗಳನ್ನು ಬೀಳಿಸುವ ಮತ್ತು ಏಳಿಸುವ ಆಟಗಳೂ ಹೆಚ್ಚಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಗೇಲಿಮಾಡುವ ಇಂತಹ ಆಟಗಳು ಯಾವಾಗಿನಿಂದ ಹೆಚ್ಚಾದವು ಮತ್ತು ಇದರ ಹಿಂದಿರುವ ಹಣದ ಮೊತ್ತ, ಸಂಪತ್ತಿನ ಅಗಾಧ ಪ್ರಮಾಣ ಎಂಥದು, ಯಾರ ಕೈವಾಡ ಇವೆಲ್ಲದರ ಹಿಂದಿದೆ, ಸಾಮಾನ್ಯ ಜನತೆಯ ಬದುಕು ಯಾಕೆ ದುರ್ಭರವಾಗುತ್ತಿದೆ ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಂಡರೆ ಸತ್ಯದ ಅನೇಕ ಮುಖಗಳು ಕಾಣಿಸುತ್ತವೆ.

ಒಂದೆಡೆ ಪ್ರಜಾತಂತ್ರ ವ್ಯವಸ್ಥೆಯೇ ಬುಡಮೇಲಾಗುತ್ತಿದ್ದರೆ, ಮತ್ತೊಂದು ಕಡೆ ವ್ಯಕ್ತಿಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿ ಪ್ರಜಾತಂತ್ರ ವ್ಯವಸ್ಥೆಯ ಮೂಲಭೂತ ಕಾಳಜಿಗಳೇ ಮಾಯವಾಗುತ್ತಿವೆ. ತಮಗೆ ಅನಿಸಿದ್ದನ್ನು ನೇರವಾಗಿ ಹೇಳಿದ, ಟೀಕೆ ಮಾಡಿದ ಬುದ್ಧಿಜೀವಿಗಳು, ಕಲಾವಿದರು, ಬರಹಗಾರರು, ವಕೀಲರು, ಸಾಮಾಜಿಕ ಕಾರ್ಯಕರ್ತರು ವಿನಾಕಾರಣ ಜೈಲು ಸೇರಬೇಕಾದ ಘೋರ ಪರಿಸ್ಥಿತಿಯನ್ನು ಹುಟ್ಟುಹಾಕಲಾಗಿದೆ. ಮಾಧ್ಯಮಗಳೂ ಮುಕ್ತವಾಗಿ ಮಾತನಾಡದಂಥ, ಕಾರ್ಯ ನಡೆಸದಂಥ ಸ್ಥಿತಿಯೂ ಉಂಟಾಗಿದೆ. ತೋಳ್ಬಲ ಮತ್ತು ಅಪಾರ ಪ್ರಮಾಣದ ಹಣ ಇಂತಹ ಕೃತ್ಯಗಳ ಹಿಂದಿರುವುದು ಗುಟ್ಟಿನ ಸಂಗತಿಯಲ್ಲ. ಆಡಳಿತ ಯಂತ್ರವನ್ನು ರೂಪಾಂತರಿಸಿರುವುದು, ನ್ಯಾಯಾಂಗವನ್ನು ಕೈವಶ ಮಾಡಿಕೊಳ್ಳಲು ಬಲೆ ಬೀಸುತ್ತಿರುವುದು ಇತ್ಯಾದಿ ಪ್ರಜಾತಂತ್ರ ವಿರೋಧಿ ನಡೆಗಳನ್ನೂ ಇವತ್ತು ನೋಡಬಹುದಾಗಿದೆ.

ಇನ್ನೂ ಘೋರ ಅಪರಾಧವೆಂದರೆ, ಜನರನ್ನು ಒಡೆಯುತ್ತಿರುವ ಪ್ರಯತ್ನ. ಭಾರತವೇ ಕೂಡಿ ಬಾಳಲು ಹೆಸರಾದದ್ದು. ಬಹುಮುಖೀ ಸಂಸ್ಕೃತಿ ಇದರ ಜೀವಾಳ. ಭಾಷೆ, ಪ್ರದೇಶ, ಧರ್ಮ, ಸಂಸ್ಕೃತಿ ಇತ್ಯಾದಿ ಹತ್ತಾರು ಅಂಶಗಳು ಬೇರೆಬೇರೆಯಾಗಿದ್ದರೂ ನಾವೆಲ್ಲ ಭಾರತೀಯರಾಗಿ ಬಾಳುವ ಪ್ರಚಂಡ ಶಕ್ತಿಯೊಂದು ನಮ್ಮೊಳಗೇ ಸಾವಿರಾರು ವರ್ಷಗಳಿಂದ ಗುಪ್ತಗಾಮಿನಿಯಾಗಿ ಹರಿಯುತ್ತಿದೆ. ಇದನ್ನೆಲ್ಲ ನಾಶಮಾಡಿದಂತೆ ಇವತ್ತು ದ್ವೇಷವನ್ನು ಬಿತ್ತಿ ಜನರನ್ನು ಒಡೆಯಲಾಗುತ್ತಿದೆ. ಅಹಿಂಸೆಯನ್ನು ತುಂಡರಿಸಿ ಹಿಂಸೆಗೆ ದಾರಿ ಮಾಡಿಕೊಡಲಾಗುತ್ತಿದೆ. ಭಾಷೆ, ಧರ್ಮ, ಪ್ರದೇಶ, ಸಂಸ್ಕೃತಿ ಎಲ್ಲವೂ ಆಯುಧಗಳಾಗಿ ಬಳಕೆಯಾಗಿ ಸಹಬಾಳ್ವೆಯನ್ನು ಕಡಿದು, ಹಿಂಸೆಯೇ ತಾಂಡವವಾಡುವ ಸ್ಥಿತಿಯನ್ನು ಸೃಷ್ಟಿಸಲಾಗುತ್ತಿದೆ.

ಇದು ದುರ್ಭರ ಭಾರತ; ವಿಷವುಂಡ ಭಾರತ; ಒಡೆದ ಭಾರತ. ಇದನ್ನು ಜೋಡಿಸುವ ಯಾತ್ರೆ ಯಾರೇ ಮಾಡಲಿ, ನಮಗೆಲ್ಲ ಕೈಜೋಡಿಸಲು ಒಂದು ಅಪರೂಪದ ಅವಕಾಶ. ಎಲ್ಲ ವಿರೋಧ ಪಕ್ಷಗಳೂ ಸೇರಿ ಈ ಜೋಡೊ ಯಾತ್ರೆಯನ್ನು ಮಾಡಿದ್ದರೆ, ಇನ್ನೂ ಅರ್ಥಪೂರ್ಣವಾಗಿತ್ತು. ಇದು ಸಾಧ್ಯವಾಗದ ಕನಸೇನಲ್ಲ. ಆದರೆ ಸದ್ಯ, ಎದುರಿಗಿರುವ ವಾಸ್ತವ ಕಾಂಗ್ರೆಸ್, ರಾಹುಲ್ ರೂಪಿಸಿರುವ ಯಾತ್ರೆ. ಈ ಯಾತ್ರೆಗೆ ಕೈಜೋಡಿಸುವುದೆಂದರೆ ನಾವು ಕಾಂಗ್ರೆಸ್ ಪಕ್ಷದ ಜೊತೆ ಕೈಜೋಡಿಸಿದಂತಲ್ಲ; ಅದರ ಸಿದ್ಧಾಂತದ ಜೊತೆಗೆ, ಕಾರ್ಯಕ್ರಮದ ಜೊತೆ ಕೈಜೋಡಿಸಿದಂತೆಯೂ ಅಲ್ಲ. ಇದೊಂದು ಸದಾಶಯದ, ಸದ್ಭಾವನೆಯ, ಜೀವಪರ ಯಾತ್ರೆ. ನಾಗರಿಕ ಜಗತ್ತಿನ ಅನೇಕ ಗಣ್ಯರು ಯಾತ್ರೆಯ ಜೊತೆಗೂಡಿ ಹೆಜ್ಜೆ ಹಾಕಿದ್ದಾರೆ. ಅನೇಕ ಸಂಘ ಸಂಸ್ಥೆಗಳು, ಮಹಿಳೆಯರು, ಯುವಕರು, ವಿಭಿನ್ನ ಧಾರ್ಮಿಕ ನಂಬಿಕೆಯವರು, ವಿದ್ಯಾರ್ಥಿಗಳು, ಸಾಮಾನ್ಯ ಜನರು ಸಾಥ್ ನೀಡಿ ಬೆಂಬಲ ನೀಡಿದ್ದಾರೆ. ಭಾರತವನ್ನು ಜೋಡಿಸುವ, ಜನರನ್ನು ಕೂಡಿಸುವ, ಬದುಕನ್ನು ಸಹನೀಯ ಮಾಡುವ ಕೆಲಸ ದೊಡ್ಡದು. ಅದನ್ನು ನಾವು ಬೆಂಬಲಿಸಬೇಕು. ಆ ಮೂಲಕ ದೇಶವನ್ನು ಮತ್ತು ಜನರನ್ನು ಒಡೆಯುವ ಶಕ್ತಿಗಳನ್ನು ಹತ್ತಿಕ್ಕಬೇಕು. ಅದು ನಮ್ಮೆಲ್ಲರ ಕರ್ತವ್ಯ ಕೂಡಾ. ■

## ಜನಧ್ವನಿ



# ವನಜಾ ಎಂಬ ಬೀಜ ಮಾತೆ



**ಕೆ.ಪಿ. ಸುರೇಶ**

'ಗ್ರೀನ್ ಫೌಂಡೇಶನ್' ಸಂಸ್ಥಾಪಕಿ ಡಾ. ವನಜಾ ರಾಮಪ್ರಸಾದ್ ನಿಧನ ಹೊಂದಿದ್ದಾರೆ. ದೊಡ್ಡ ಹೋರಾಟ, ಇನ್ನೇನೋ ಝಗ್ಗನೆ ಮಾಧ್ಯಮದ ಗಮನ ಸೆಳೆಯುವ ಕೆಲಸ ಅವರು ಮಾಡಿಲ್ಲದ ಕಾರಣ ಹೌದೇ ಅವರು ಯಾರು? ಎಂದು ಕೇಳಬಹುದು.

ದೇಸೀ ತಳಿಗಳ ಸಂರಕ್ಷಣೆ ಅಭಿವೃದ್ಧಿಯನ್ನು ವ್ರತದಂತೆ ಕೈಗೊಂಡವರು ವನಜಾ. ಅಷ್ಟೇ ಆದರೆ ಅದು ಆಂಶಿಕ ಕೆಲಸ. ಇಡೀ ಈ ಕೆಲಸವನ್ನು ಮಹಿಳೆಯರನ್ನು ಕಟ್ಟಿಕೊಂಡು ಮಾಡಿದರು.

ಐ.ಐ.ಎಂ.ನಲ್ಲಿ ಮಹಿಳೆಯರ ಆರೋಗ್ಯದ ಬಗ್ಗೆ ಪಿಎಚ್.ಡಿ. ಮಾಡುತ್ತಿದ್ದಾಗ ವನಜಾ ಅವರು ಸಮಸ್ಯೆಯ ಮೂಲಕ್ಕೆ ಕೈ ಹಾಕಿದರು. ಆರೋಗ್ಯ ಸಮಸ್ಯೆ ಅವರನ್ನು ದೇಸೀ ತಳಿಗಳ ಕಡೆ ಒಯ್ದಿತು. ದೇಸೀ ತಳಿಗಳ ಪೌಷ್ಟಿಕತೆ, ರೋಗ ನಿರೋಧಕತೆ, ಸಹಿಷ್ಣುತೆ ಹೀಗೆ ಅದರ ವಿಶ್ವರೂಪ ದರ್ಶನವಾಗುತ್ತಲೇ ಹೋಯಿತು. ಮುಂದೆ ಏನೋ ಹುದ್ದೆ ಕ್ಯಾರಿಯರ್ ಸಾಧ್ಯತೆಗಳೆಲ್ಲಾ ಇದ್ದಾಗ ವನಜಾ ಅವನ್ನೆಲ್ಲಾ ಬಿಟ್ಟು ಕರ್ನಾಟಕದ ಗಡಿಯಲ್ಲಿರುವ ತಳಿಯಲ್ಲಿ ಪುಟ್ಟದಾಗಿ ಗ್ರೀನ್ ಸಂಸ್ಥೆಯನ್ನು ಆರಂಭಿಸಿದರು. ಒಂದು ಶೆಡ್, ಅದೇ ಆಫೀಸು. ಕಂಡ ಕಂಡಲ್ಲಿ ತಿರುಗಿ ರೈತರಿಂದ ನಾಟೀ ತಳಿ ಸಂಗ್ರಹಿಸಿದರು. ಈ ತಳಿ ಸಂಗ್ರಹವೆಂದರೆ ಅದೊಂದು ಭ್ರಾಮಕ ಕೆಲಸವೂ ಹೌದು. ಹತ್ತೂರಲ್ಲಿ ಹತ್ತು ತಳಿ ಸಿಕ್ಕಿತು ಅಂದುಕೊಂಡರೆ ಅವೆಲ್ಲಾ ಸ್ಥಳೀಯ ಹೆಸರುಗಳ ಭಿನ್ನತೆಯಿಂದ ಈ ಸಂಖ್ಯೆ ಅರ್ಧಕ್ಕರ್ಧ ಇಳಿಯಬಹುದು. ಇನ್ನು ಸಿಕ್ಕಿದ ಬೀಜಗಳೆಲ್ಲಾ ತಳಿ ಶುದ್ಧತೆ ಇರುವ ಬೀಜಗಳೆಂಬ ಗ್ಯಾರಂಟಿ ಇಲ್ಲ.

ತಳಿ ಶುದ್ಧತೆ ಅರಿಯಲು ಈ ತಳಿಯ ಲಕ್ಷಣಗಳ ಪಟ್ಟಿ ಪಡೆಯಬೇಕು. ಈ ಪಟ್ಟಿ ಪಡೆಯಲು ಇದರ ತಳಿ ದಾಸ್ತಾನು ಹೊಂದಿರುವ ಕೃಷಿ ವಿವಿ, ಮತ್ತಿತರ ಕೃಷಿ ಸಂಬಂಧಿತ ಕೇಂದ್ರಗಳನ್ನು ಸುತ್ತಬೇಕು.

> ಇಂದು ದೇಶಾದ್ಯಂತ ದೇಸೀ ತಳಿ, ಸಾವಯವ ಒಳಸುರಿಗಳು, ಸಾವಯವ ಕೃಷಿ ಇತ್ಯಾದಿ ದೊಡ್ಡ ಮಟ್ಟದ ಸರಕಾರಿ ಯೋಜನೆಗಳಾಗಿಯೂ ಬೆಳೆದಿದ್ದರೆ ಅದರ ಹಿಂದೆ ವನಜಾ ಅವರ ಕೊಡುಗೆಯಿದೆ. ನಮ್ಮ ರಾಜ್ಯದಲ್ಲಿ ಈ ಪರ್ಯಾಯ ಕ್ಷೇತ್ರದಲ್ಲಿ ದುಡಿಯುತ್ತಿರುವ ಬಹುತೇಕರು ಗ್ರೀನ್ ಫೌಂಡೇಶನ್‌ನಲ್ಲಿ ವನಜಾ ಅವರ ಶಿಷ್ಯತ್ವದ ಮೂಲಕ ಕಲಿತವರು.

ಆ ತಳಿ ಲಕ್ಷಣಗಳ ಸೂಚಿ ಸಿಕ್ಕಿದರೆ ಸಾಕೇ, ಈ ಬೀಜಗಳನ್ನು ಪದೇ ಪದೇ ನಾಟಿ ಮಾಡಿ ಶುದ್ಧ ಬೀಜಗಳನ್ನು ಪಡೆಯಬೇಕು. ಈ ಶುದ್ಧ ತಳಿ ಬೀಜ ಪಡೆದು ಅವನ್ನು ಕಲಾಕೃತಿಯಂತೆ ಇಟ್ಟರೆ ಉಪಯೋಗ ಇಲ್ಲ. ಅವುಗಳನ್ನು ಪ್ರತೀ ವರ್ಷ ವೃದ್ಧಿಸಿ ತಳಿ ಕಾಪಿಡಬೇಕು.

ಇವೆಲ್ಲಾ ಪ್ರಚಾರದ ಬೆಳಕು ಝಗ್ಗನೆ ಬೀಳುವ ಕ್ಷೇತ್ರವೇ ಅಲ್ಲ. ತಣ್ಣಗೆ ಯಾವ ನಿರೀಕ್ಷೆಯೂ ಇಲ್ಲದೆ ಮಾಡುವ ಕೆಲಸ.

ವನಜಾ ಹಠ ಬಿಡದೆ ಇದನ್ನು ಮಾಡಿದರು. ಆರಂಭದಿಂದ ಅವರೊಂದಿಗೆ ಕೆಲಸ ಮಾಡಿದ ಜಿ. ಕೃಷ್ಣಪ್ರಸಾದ್ ತಳಿಯ ಕೆಲಸದ ಕಷ್ಟ- ಸುಖಗಳನ್ನು ಹೇಳುವುದಿದೆ.

ಇದೇ ವೇಳೆಗೆ ವನಜಾ ಈ ತಳಿ ವೃದ್ಧಿಯ ಕೆಲಸ ಸಂಶೋಧನಾ ಕೇಂದ್ರದ ಮಾದರಿಯಲ್ಲಿ ಮಾಡಿ ಗಂಟು ಕಟ್ಟಿಟ್ಟರೆ ಏನು ಸುಖ ಎಂದು ತೀರ್ಮಾನಿಸಿ ಮಹಿಳೆಯರನ್ನೇ ಮುಂಚೂಣಿಯಲ್ಲಿಟ್ಟು ಸಮುದಾಯ ಬೀಜ ಬ್ಯಾಂಕ್ ಎಂಬ ಪರಿಕಲ್ಪನೆಯನ್ನು ಆರಂಭಿಸಿದರು. ಆಯಾ ಹಳ್ಳಿಯಲ್ಲಿರುವ ವೈವಿಧ್ಯಮಯ ತಳಿಗಳನ್ನು ಆಯಾ ಹಳ್ಳಿಯ ಹೆಣ್ಣುಮಕ್ಕಳೇ ಸಂಗ್ರಹಿಸಿ ಉಳಿಸಿ ವೃದ್ಧಿಸಿ ಸಮುದಾಯಕ್ಕೆ ಹಂಚುವ ಕೆಲಸ ಇದು.

ಕೃಷ್ಣಪ್ರಸಾದ್ ಇದರ ಸಲುವಾಗಿ ರಾಜ್ಯಾದ್ಯಂತ ಓಡಾಡಿ ಹತ್ತಾರು ಕಡೆ ಇಂತಹ ಬೀಜ ಬ್ಯಾಂಕುಗಳನ್ನು ಸ್ಥಾಪಿಸಲು ಗ್ರೀನ್ ಫೌಂಡೇಶನ್ ಪರವಾಗಿ ಕೆಲಸ ಮಾಡಿದರು.

ಕಾರಣಾಂತರಗಳಿಂದ ಕೃಷ್ಣಪ್ರಸಾದ್ ಗ್ರೀನ್ ಫೌಂಡೇಶನ್ ಬಿಟ್ಟು ಸಹಜ ಸಮೃದ್ಧ ಆರಂಭಿಸಿದಾಗಲೂ ಅವರು ಆಯ್ಕೆ ಮಾಡಿದ್ದು ವನಜಾ ಕಲಿಸಿ ಬೆರಳು ತೋರಿದ ತಳಿ ಸಂರಕ್ಷಣೆಯ ಕ್ಷೇತ್ರವನ್ನೇ.

ತಳಿ ಅಭಿವೃದ್ಧಿ ಎಂಬುದು ರಾಕೆಟ್ ವಿಜ್ಞಾನ ಅಲ್ಲ ಎಂದು ಹೇಳುತ್ತಿದ್ದ ವನಜಾ ರೈತರೇ ಇದನ್ನು ಮಾಡಬಹುದು ಎಂಬುದನ್ನು ತೋರಿಸಿ ಕೊಟ್ಟರು. ನಮ್ಮ ರೈತರು ಅದರಲ್ಲೂ ಹೆಣ್ಣುಮಕ್ಕಳ ಪಾರಂಪರಿಕ ಜ್ಞಾನದ ಮೇಲೆ ನಂಬಿಕೆ ಇಟ್ಟಿದ್ದ ಅವರು ವ್ಯವಸ್ಥಿತವಾಗಿ ಅವರಿಗೆ ವೈಜ್ಞಾನಿಕವಾಗಿ ತಳಿ ವೃದ್ಧಿ ಮಾಡುವ ಸೂತ್ರಗಳನ್ನು ಕಲಿಸಿ ಕೊಟ್ಟರು. ಅದಕ್ಕೆ ಬೇಕಾದ ಚಿತ್ರ, ಪ್ರಯೋಗ, ವೈಜ್ಞಾನಿಕ ಪರೀಕ್ಷೆಗಳನ್ನು ರೈತರ ಹಂತಕ್ಕೆ ತಲುಪಿಸಿದರು.

ತಳಿ ಶುದ್ಧ ಮಾಡಿದರೆ ಸಾಲದು, ಅವುಗಳನ್ನು ರೈತರು ಬಳಸಬೇಕು. ನಮ್ಮ ಅಪೌಷ್ಟಿಕತೆಗೆ ಇದರಲ್ಲಿ ಪರಿಹಾರವಿದೆ ಎಂದು ನಂಬಿದ್ದ ಅವರು ಪೌಷ್ಟಿಕತೆಯ ಪೂರೈಕೆಗೆ ದೇಸೀ ತಳಿಗಳು ಎಷ್ಟು ಮುಖ್ಯ ಎಂದು ಸಿದ್ಧಪಡಿಸಿ ತೋರಿಸಿಕೊಟ್ಟರು.

ದೇಸೀ ತಳಿಗಳ ಅಡುಗೆಯನ್ನು ಆವಿಷ್ಕರಿಸಿದರು. ರಾಸಾಯನಿಕ ರಹಿತ ಕೃಷಿ ಹೇಗೆ ದೇಸಿ ತಳಿಗಳ ಅವಿನಾಭಾವ ಅಂಶ ಎಂದು ಮಂಡಿಸಿದರು.

ಮೂರು ದಶಕಗಳ ಕಾಲ ನಾಟೀ ತಳಿ- ರೈತ ಮಹಿಳೆ, ಸಾವಯವ ಕೃಷಿ- ಪೌಷ್ಟಿಕತೆ- ಮಣ್ಣಿನ ಆರೋಗ್ಯ ಇವುಗಳನ್ನೆಲ್ಲಾ ಒಂದೇ ಸೂತ್ರದಲ್ಲಿ ಹೆಣೆದು ಪರ್ಯಾಯದ ಮಾದರಿಯೊಂದನ್ನು ಮುಂದಿಟ್ಟರು.

ಇಂದು ದೇಶಾದ್ಯಂತ ದೇಸೀ ತಳಿ, ಸಾವಯವ ಒಳಸುರಿಗಳು, ಸಾವಯವ ಕೃಷಿ ಇತ್ಯಾದಿ ದೊಡ್ಡ ಮಟ್ಟದ ಸರಕಾರಿ ಯೋಜನೆಗಳಾಗಿಯೂ ಬೆಳೆದಿದ್ದರೆ ಅದರ ಹಿಂದೆ ವನಜಾ ಅವರ ಕೊಡುಗೆಯಿದೆ. ನಮ್ಮ ರಾಜ್ಯದಲ್ಲಿ ಈ ಪರ್ಯಾಯ ಕ್ಷೇತ್ರದಲ್ಲಿ ದುಡಿಯುತ್ತಿರುವ ಬಹುತೇಕರು ಗ್ರೀನ್ ಫೌಂಡೇಶನ್‌ನಲ್ಲಿ ವನಜಾ ಅವರ ಶಿಷ್ಯತ್ವದ ಮೂಲಕ ಕಲಿತವರು. ಕೃಷ್ಣಪ್ರಸಾದ್, ಸೀಮಾ, ಹೊಸಪಾಳ್ಯ, ಡಾ. ನಾಡಗೌಡ, ಶಿವಕುಮಾರ್, ಶ್ರೀಕಾಂತ್- ಹೀಗೆ ಈ ಪಟ್ಟಿ ಬೆಳೆಯುತ್ತದೆ.

ರಾಜ್ಯದ ಬಹುತೇಕ ಪರ್ಯಾಯ ಕೃಷಿ ಸಾಧಕರಿಗೆ ಗ್ರೀನ್ ಜೊತೆಗೆ ಒಂದಲ್ಲ ಒಂದು ರೀತಿಯ ಸಂಬಂಧವಿತ್ತು.

ಶ್ರೀ ಪದ್ಧತಿ ಭತ್ತಕ್ಕೆ ಜನಪ್ರಿಯವಾದಾಗ ವನಜಾ ರಾಗಿಯಲ್ಲೂ ಅದು ಸಾಧ್ಯ ಎಂದು ತೋರಿಸಿಕೊಟ್ಟರು. ಸಾವಯವ ಭೀಷ್ಮ ದಿ. ನಾರಾಯಣ ರೆಡ್ಡಿಯವರಿಗೆ ಇದನ್ನು ವಿವರಿಸಿ ಅವರು ಈ ಪ್ರಯೋಗವನ್ನು ಮಾಡಿ ಯಶ ತಂದು ಕೊಟ್ಟರು. ಇಂದು ಗುಳಿ ವಿಧಾನ ಎಂದು ಈ ಬಿತ್ತನೆ ಜನಪ್ರಿಯವಾಗಿದೆ.

ಮಹಿಳೆಯರ ಜೊತೆ ಕೆಲಸ ಮಾಡುತ್ತಿದ್ದಾಗ ಈ ಎಲ್ಲಾ ಪ್ರಯೋಗ-ಪ್ರಕ್ರಿಯೆಗಳನ್ನು ವೈಜ್ಞಾನಿಕವಾಗಿ ದಾಖಲಿಸುವುದನ್ನು ಕಲಿಸಿದ್ದು ವನಜಾ. ಕೃಷಿ ವಿಜ್ಞಾನಿಗಳೆದುರು ತಾತ್ಸಾರಕ್ಕೊಳಗಾಗುವುದು ಇದೇ ಕಾರಣಕ್ಕೆ. ಇದರ ಅರಿವಿದ್ದ ವನಜಾ ಇಡೀ ತಳಿ ಅಭಿವೃದ್ಧಿಯ ಪ್ರಕ್ರಿಯೆಯನ್ನು ದಾಖಲಿಸುವುದನ್ನು ಕಲಿಸಿ ಕೊಟ್ಟರು. ಹಸಿರು ಕ್ರಾಂತಿಯ ಹರಿಕಾರರೆದುರು ನಾಟೀ ತಳಿಗಳ ಸಾಧನೆಯನ್ನು ಮುಂದಿಟ್ಟು ಸವಾಲೆಸೆದರು.

ಹೈಬ್ರಿಡ್, ಕುಲಾಂತರಿಗಳನ್ನು ನಖಶಿಖಾಂತ ವಿರೋಧಿಸಿದರು. ಖಾಸಗಿ ಕಂಪೆನಿಗಳ ಕೈಗೆ ಬೀಜೋತ್ಪಾದನೆ ನೀಡುವುದನ್ನು ವಿರೋಧಿಸಿದರು.

ಗ್ರೀನ್ ಫೌಂಡೇಶನ್ ತನ್ನ ಕೆಲಸಕ್ಕೆ ಅಂತರ್‌ರಾಷ್ಟ್ರೀಯ ಮನ್ನಣೆ ಪಡೆದಾಗಲೂ, ರಾಶಿ ರಾಶಿ ಅನುದಾನ ಪಡೆಯಬೇಕೆನ್ನಿಸಲಿಲ್ಲ. ಅಷ್ಟೇಕೆ ಫೌಂಡೇಶನ್ ಹೆಸರಿಗೆ ಸ್ಥಿರಾಸ್ತಿ ಮಾಡಲಿಲ್ಲ. ತನ್ನ ಬಳಿಕ ತನ್ನ ಕುಟುಂಬದವರೇ ಅದನ್ನು ಮುಂದುವರಿಸಬೇಕೆಂದು ಬಯಸಲಿಲ್ಲ. ತನ್ನಿಂದ ಇನ್ನು ನಿರ್ವಹಣೆ ಕಷ್ಟ ಅಂದಾಗ ವಾನಪ್ರಸ್ಥಕ್ಕೆ ಸರಿದರು.

ಅವರ ನೈತಿಕ ಸ್ಥೈರ್ಯ ಎಂಥಾದ್ದೆಂದರೆ ಭಾರತದ ಅಂದಿನ ರಾಷ್ಟ್ರಪತಿ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ವನಜಾ ರಾಷ್ಟ್ರಪತಿಯವರಿಗೆ ಗ್ರೀನ್ ಫೌಂಡೇಶನ್‌ನ ಪ್ರಕಟಣೆಗಳನ್ನು ಕೊಟ್ಟರು. ಆ ರಾಷ್ಟ್ರಪತಿ ಕುಲಾಂತರಿ ಇತ್ಯಾದಿಗಳ ಬಗ್ಗೆ ವಕಾಲತ್‌ನ ಮಾತಾಡಿದಾಗ ವನಜಾ, "ಹಾಗಿದ್ದರೆ ನಿಮಗೆ ನಮ್ಮ ಪುಸ್ತಕ ಓದುವ ಅರ್ಹತೆ ಇಲ್ಲ!" ಎಂದು ನಿರ್ದಾಕ್ಷಿಣ್ಯವಾಗಿ ಅವರ ಕೈಯಿಂದ ಆ ಪುಸ್ತಕಗಳ ಸೆಟ್ ಕಿತ್ತುಕೊಂಡರು!

ನಮ್ಮ ಸರಕಾರ ಅವರನ್ನು ಗುರುತಿಸಲಿಲ್ಲ. ಗೌರವಿಸಲಿಲ್ಲ. ಸಮಾಜಕ್ಕೆ ಅವರ ಕೆಲಸ ರೋಚಕವಾದದ್ದಾಗಿರಲಿಲ್ಲ. ಸಮಾಜವೊಂದು ಕೃತಘ್ನವಾಗುವುದು ಹೀಗೆ.

ಕನ್ನಡದ ಕೊರವಂಜಿ ಪತ್ರಿಕೆ ಮಾಸಿ ಕಣ್ಮರೆಯಾದಾಗ ರಾಶಿಯವರು ಒಂದು ವ್ಯಂಗ್ಯ ಚಿತ್ರ ಪ್ರಕಟಿಸಿದ್ದರು. "ನೀನಿದ್ದಿದ್ದೇ ಗೊತ್ತಾಗಲಿಲ್ಲವಲ್ಲಾ?" ಅನ್ನುವ ಅರ್ಥದ ವಾಕ್ಯ ಸಹಿತ.

ವನಜಾ ಅವರು ತೋರಿದ ದಿಕ್ಕಿನಲ್ಲಿ ನಡೆಯುವ ಹತ್ತು ಹಲವು ಸಂಗಾತಿಗಳು ಅವರನ್ನು ಸ್ಮರಿಸುತ್ತಲೇ ಅವರ ಆಶಯಗಳನ್ನು ವಿಸ್ತರಿಸಬೇಕು. ಅದು ಈ ದೇಶದ ರೈತರನ್ನೂ, ಪರಿಸರವನ್ನೂ ಆರ್ಥಿಕತೆಯನ್ನೂ ಉಳಿಸುವ ಬಗೆ.

ಅವರೊಂದಿಗೆ ಮೂರು ವರ್ಷ ದುಡಿದ ನನಗೆ ಅವರೊಂದು ಸದಾ ದಾರಿ ತೋರುವ ಬೆಳಕು. ಪ್ರತಿಯೊಂದು ನೆನಪೂ ಕಲಿಕೆಯ ಒಂದಂಶದ ಮೇಲೆ ಬೆಳಕು ಚೆಲ್ಲುತ್ತಿದೆ. ■

---

ವಿಶೇಷ ನ್ಯಾಯಮಂಡಳಿಯಲ್ಲಿ ಪ್ರಕರಣದ ವಿಚಾರಣೆ ಅಂತಿಮ ಘಟ್ಟದಲ್ಲಿದ್ದು, ಇನ್ನೇನು ತೀರ್ಪು ಹೊರಬೀಳುವ ಸಂದರ್ಭದಲ್ಲಿದ್ದಾಗ, 7ನೇ ಅಕ್ಟೋಬರ್ 1930ರಂದು ನ್ಯಾಯಾಲಯದ ಅಂತಿಮ ಆದೇಶವಾಗುತ್ತದೆ. ಭಗತ್ ಸಿಂಗ್‌ನ ತಂದೆ ಸರದಾರ್ ಕಿಶನ್ ಸಿಂಗ್, ನ್ಯಾಯಮಂಡಳಿಗೆ ಲಿಖಿತ ಮನವಿಯೊಂದನ್ನು ಸಲ್ಲಿಸುತ್ತಾರೆ. ಸ್ಯಾಂಡರ್ಸ್ ಹತ್ಯೆಗೂ ಭಗತ್ ಸಿಂಗ್‌ನಿಗೂ ಯಾವುದೇ ಸಂಬಂಧವೂ ಇಲ್ಲವೆಂದು ತಿಳಿಸುತ್ತಾರೆ, ತನ್ನ ಮಗ ನಿರ್ದೋಷಿ ಎಂದು ಸಾಬೀತುಪಡಿಸಲು ಸಾಕಷ್ಟು ಪುರಾವೆಗಳು ಇರುವುದಾಗಿ ಹೇಳುತ್ತ ತಾನು ನಿರಪರಾಧಿ ಎಂದು ಸಾಬೀತುಪಡಿಸಲು ತನ್ನ ಮಗನಿಗೆ ಇನ್ನೊಂದು ಅವಕಾಶ ನೀಡಬೇಕೆಂದು ಭಗತ್ ಸಿಂಗ್‌ನ ತಂದೆ ನ್ಯಾಯಾಧೀಶರನ್ನು ಕೇಳಿಕೊಳ್ಳುತ್ತಾರೆ. ಈ ವಿಷಯ ಭಗತ್ ಸಿಂಗ್‌ರ ಕಿವಿಗೆ ಬಿದ್ದೊಡನೆಯೇ ಅವರು ಕೆಂಡಾಮಂಡಲವಾಗುತ್ತಾರೆ. ತನ್ನ ತಂದೆಯ ಈ ಕೃತ್ಯಕ್ಕೆ ತೀವ್ರ ಪ್ರತಿರೋಧ ವ್ಯಕ್ತಪಡಿಸಿ ಅವರಿಗೆ ಒಂದು ಪತ್ರ ಬರೆಯುತ್ತಾರೆ.

# ತಂದೆಗೊಂದು ಪತ್ರ

■ ಕನ್ನಡಕ್ಕೆ: **ಜ್ಯೋತಿ ಎ.**

4ನೇ ಅಕ್ಟೋಬರ್ 1930

ನನ್ನ ಪ್ರೀತಿಯ ಅಪ್ಪನಿಗೆ

ನೀನು ನನ್ನ ಪರ ವಾದಿಸುವ ವಿಚಾರದಲ್ಲಿ ವಿಶೇಷ ನ್ಯಾಯಮಂಡಳಿಯ ಸದಸ್ಯರಿಗೆ ಒಂದು ಮನವಿಯನ್ನು ಸಲ್ಲಿಸಿದ್ದೀಯೆಂದು ತಿಳಿದು ದಿಗ್ಭ್ರಮೆಗೊಂಡೆ. ಈ ನಿನ್ನ ಅತಿ ಬುದ್ಧಿವಂತಿಕೆಯಿಂದಾಗಿ ನಾನು ನೆಮ್ಮದಿ ಕಳೆದುಕೊಳ್ಳುವಷ್ಟರ ಮಟ್ಟಿಗೆ ತೀವ್ರ ಪೆಟ್ಟು ತಿಂದಿದ್ದೇನೆ. ಇದು ಒಟ್ಟಾರೆ ನನ್ನ ಮಾನಸಿಕ ಸಮತೋಲನವನ್ನೇ ಬುಡಮೇಲು ಮಾಡಿಬಿಟ್ಟಿದೆ. ಈ ಹಂತದಲ್ಲಿ ಮತ್ತು ಈ ಪರಿಸ್ಥಿತಿಯಲ್ಲಿ ಅಂತಹದೊಂದು ಮನವಿ ಸಲ್ಲಿಸುವುದು ಸರಿಯೆಂದು ನೀನು ಹೇಗೆ ತಾನೇ ಯೋಚಿಸಿದೆ? ನನಗೊಂದೂ ತೋಚದಾಗಿದೆ. ಒಬ್ಬ ತಂದೆಯ ಸ್ಥಾನದಲ್ಲಿ ನಿಂತಿರುವ ನಿನ್ನ ಮನಸ್ಸಿನ ಎಲ್ಲಾ ಭಾವನೆ ಅನಿಸಿಕೆಗಳನ್ನು ನಾನು ಒಪ್ಪಿಕೊಂಡರೂ, ನನ್ನ ಸಲಹೆಯನ್ನೂ ಪಡೆಯದೆ ನನ್ನ ಪರವಾಗಿ ಅಂತಹದ್ದೊಂದು ಹೆಜ್ಜೆಯನ್ನಿಡಲು ನಿನ್ನಲ್ಲಿ ಅಧಿಕಾರವಿತ್ತೆಂದು ನನಗನಿಸದು. ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮಿಬ್ಬರ ನಿಲುವುಗಳ ನಡುವೆ ಯಾವಾಗಲೂ ಅಂತರವಿದೆ ಎಂಬುದು ನಿನಗೆ ತಿಳಿದಿದೆ. ನೀನು ಒಪ್ಪಿಗೆ ಕೊಟ್ಟರೆ ಕೊಡು ಇಲ್ಲವೇ ಬಿಡು, ಅದರ ಕಡೆ ಲಕ್ಷ್ಯ ನೀಡದೆ ನಾನು ಯಾವಾಗಲೂ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುತ್ತೇನೆ.

ಮೊದಲಿನಿಂದಲೂ ನನ್ನ ಪ್ರಕರಣವನ್ನು ನಾನೇ ಗಂಭೀರವಾಗಿ ಗಣನೆಗೆ ತೆಗೆದುಕೊಂಡು ಹೋರಾಡಲು ಮತ್ತು ನನ್ನ ಪರವಾಗಿ ನಾನೇ ಸಮರ್ಪಕವಾಗಿ ವಾದ ಮಂಡಿಸುವಂತೆ ನೀನು ನನ್ನ ಮನವೊಲಿಸಲು ಪ್ರಯತ್ನಿಸಿದ್ದು ನಿನಗೆ ನೆನಪಿರಬಹುದು.



ಆದರೆ ನಾನು ಅದನ್ನು ಯಾವಾಗಲೂ ವಿರೋಧಿಸಿದ್ದೆ ಎಂಬುದೂ ನಿನಗೆ ಗೊತ್ತಿದೆ. ನನ್ನ ಸ್ವಯಂರಕ್ಷಣೆ ಮಾಡಿಕೊಳ್ಳುವ ಯಾವ ಆಸಕ್ತಿಯೂ ನನ್ನಲ್ಲಿರಲಿಲ್ಲ. ಅದರ ಬಗ್ಗೆ ನಾನು ಒಂದೇ ಒಂದು ಕ್ಷಣವೂ ಗಂಭೀರವಾಗಿ ಯೋಚಿಸಿದ್ದಿಲ್ಲ. ಅದೊಂದು ಬರೀ ಸಿದ್ಧಾಂತವೋ ಅಥವಾ ನನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದ ನನ್ನ ವಾದವೋ, ಅದು ಬೇರೆಯೇ ಪ್ರಶ್ನೆ. ಅದನ್ನು ಇಲ್ಲಿ ಚರ್ಚಿಸಲಾಗದು.

ಈ ವಿಚಾರಣೆಯಲ್ಲಿ ಒಂದು ನಿರ್ದಿಷ್ಟ ನೀತಿಯನ್ನು ಅನುಸರಿಸುತ್ತಿದ್ದೇವೆ ಎಂಬುದು ನಿನ್ನ ಗಮನದಲ್ಲಿರಬಹುದು. ನನ್ನ ಪ್ರತಿಯೊಂದು ಕ್ರಿಯೆಯೂ ಈ ನೀತಿಯೊಂದಿಗೆ, ನಾನು ನಂಬಿರುವ ತತ್ವ ಸಿದ್ಧಾಂತಗಳೊಂದಿಗೆ, ನನ್ನ ಕಾರ್ಯಕ್ರಮದೊಂದಿಗೆ ಹೊಂದಿಕೊಳ್ಳುವಂತಿರಬೇಕು. ಇಂದಿನ ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿದೆ. ಹಾಗೊಂದು ವೇಳೆ ಸಂದರ್ಭಸೂಕ್ತ ಎನಿಸಿದರೂ ಸ್ವಯಂರಕ್ಷಣೆ ಮಾಡಿಕೊಳ್ಳುವ ವ್ಯಕ್ತಿ ನಾನಾಗುತ್ತಿರಲಿಲ್ಲ ಎನ್ನುವುದಂತೂ ನಿಶ್ಚಿತವೇ. ವಿಚಾರಣೆಯಾದ್ಯಂತ ನಾನು ಏಕೈಕ ಉದ್ದೇಶ ಹೊಂದಿದ್ದೆ. ನಮ್ಮ ವಿರುದ್ಧ ಎಷ್ಟೇ ಗಹನವಾದ ಆಪಾದನೆಗಳಿದ್ದರೂ ನಾವು ವಿಚಾರಣೆಯ ಬಗ್ಗೆ ಸಂಪೂರ್ಣ ಉಪೇಕ್ಷೆ ತೋರುವುದೇ ನಮ್ಮ ಉದ್ದೇಶವಾಗಿತ್ತು. ರಾಜಕೀಯ ಕಾರ್ಯಕರ್ತರು ನ್ಯಾಯಾಲಯಗಳಲ್ಲಿ ಕಾನೂನಾತ್ಮಕ ಹೋರಾಟ ನಡೆಸುವುದರ ಕುರಿತು ಅರೆಕ್ಷಣವೂ ಚಿಂತಿಸಬಾರದೆಂದು, ಅದರ ಬಗ್ಗೆ ಉದಾಸೀನ ತೋರಬೇಕೆಂದು ಹಾಗೂ ತಮಗೆ ವಿಧಿಸಲಾದ ಅತಿ ಘೋರ ಶಿಕ್ಷೆಗಳನ್ನೂ ಕೆಚ್ಚೆದೆಯಿಂದ ಎದುರಿಸಬೇಕೆಂದು ಅಭಿಪ್ರಾಯಪಟ್ಟಿದ್ದೆ. ತಮ್ಮ ಪರವಾಗಿ ತಾವು ವಾದ ಮಂಡಿಸಿಕೊಳ್ಳಬಹುದಾಗಿದ್ದರೂ ಅದು ಯಾವಾಗಲೂ ಪರಿಪೂರ್ಣ ರಾಜಕೀಯ ವಿವೇಚನೆಯಿಂದ ನಡೆಯಬೇಕೇ ಹೊರತು ವೈಯಕ್ತಿಕ ಹಿತದೃಷ್ಟಿಯಿಂದಲ್ಲ. ಹಾಲಿ ವಿಚಾರಣೆಯ ಸಂದರ್ಭದಲ್ಲಿ ಇದೇ ಸೂತ್ರವನ್ನು ನಮ್ಮ ನೀತಿಯನ್ನಾಗಿ ನಿರಂತರವಾಗಿ ಕಾಪಿಟ್ಟುಕೊಳ್ಳಲಾಗಿತ್ತು. ಅದರಲ್ಲಿ ಯಶಸ್ಸು ಗಳಿಸಿದೆವೋ ಇಲ್ಲವೋ ಎಂದು ತೀರ್ಮಾನಿಸುವುದು ನನಗೆ ಸಂಬಂಧಿಸಿದ ವಿಷಯವಲ್ಲ. ನಾವು ನಮ್ಮ ಸ್ವಹಿತಾಸಕ್ತಿಗಳನ್ನು ಬದಿಗಿಟ್ಟೇ ಯಾವಾಗಲೂ ನಮ್ಮ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದೇವೆ.

ಕಾನೂನು ಮತ್ತು ನ್ಯಾಯ ಇವೆರಡನ್ನೂ ನಿಂದನೆಗೆ ಗುರಿಪಡಿಸಲು ಈ ಪ್ರಕರಣದ ಆಪಾದಿತರು ಯತ್ನಿಸುತ್ತಿದ್ದಾರೆಂದು ಲಾಹೋರ್ ಪಿತೂರಿ ಮೊಕದ್ದಮೆ ಅಧ್ಯಾದೇಶದ ಪತ್ರದ ಜೊತೆಗಿದ್ದ ಹೇಳಿಕೆಯಲ್ಲಿ ವೈಸ್‌ರಾಯ್ ನುಡಿದಿದ್ದ. ಕಾನೂನನ್ನು ನಿಂದನೆಗೆ ಒಳಪಡಿಸಲು ನಾವು ಯತ್ನಿಸುತ್ತಿದ್ದೇವೋ ಅಥವಾ ಬೇರೆ ಯಾರಾದರೂ ಆ ಕೆಲಸವನ್ನು ಮಾಡುತ್ತಿದ್ದರೋ ಎಂದು ಸಾರ್ವಜನಿಕರಿಗೆ ರುಜುವಾತುಪಡಿಸಲು ಈ ಸಂದರ್ಭ ನಮಗೆ ಅವಕಾಶವನ್ನು ಒದಗಿಸಿತು. ಈ ವಿಷಯದಲ್ಲಿ ಜನರು ನಮ್ಮನ್ನು ಒಪ್ಪದಿರಬಹುದು. ನೀನೂ ಅವರ ಪೈಕಿ ಒಬ್ಬನಾಗಿರಲೂಬಹುದು. ಆದರೆ ನನ್ನ ಸಮ್ಮತಿಯಿಲ್ಲದೆ ಅಥವಾ ನನ್ನ ಅರಿವಿಗೂ ಬಾರದಂತೆ ನನ್ನ ಪರವಾಗಿ ನೀನು ಅಂತಹ ಹೆಜ್ಜೆ ಇಡಬೇಕೆಂದು ಅರ್ಥವಲ್ಲ. ನನ್ನ ಜೀವವು ಅಷ್ಟೊಂದು ಅಮೂಲ್ಯವಾದುದೆಂದು ನನಗಾದರೂ ಅನಿಸದು. ಬಹುಶಃ ನೀನು ಹಾಗೆಂದೇ ತಿಳಿದಿದ್ದಿಯೋ ಏನೋ, ನಾನು ನಂಬಿದ ಸಿದ್ಧಾಂತದ ಬೆಲೆ ತೆತ್ತು ನನ್ನ ಜೀವವನ್ನು ಕೊಳ್ಳುವುದು ಖಂಡಿತ ಯೋಗ್ಯವಲ್ಲ. ನನ್ನಷ್ಟೇ ಗಂಭೀರವಾಗಿ ಮೊಕದ್ದಮೆ ಎದುರಿಸುತ್ತಿರುವ ನನ್ನ ಬೇರೆ ಸಂಗಾತಿಗಳೂ ಇದ್ದಾರೆ. ನಾವೆಲ್ಲರೂ ಒಂದೇ ಸೂತ್ರವನ್ನು ಅಳವಡಿಸಿಕೊಂಡಿದ್ದೆವು. ವೈಯಕ್ತಿಕವಾಗಿ ಎಷ್ಟೇ ಅಧಿಕ ಬೆಲೆ ತೆರಬೇಕಾಗಿ ಬಂದರೂ ಪರವಾಗಿಲ್ಲ, ನಾವು ಕೊನೆಯವರೆಗೂ ನಮ್ಮ ನಿಲುವಿಗೆ ಬದ್ಧರಾಗಿಯೇ ನಿಲ್ಲುತ್ತೇವೆ.

ಅಪ್ಪ, ನಾನು ತುಂಬ ದಿಗ್ಭ್ರಾಂತನಾಗಿದ್ದೇನೆ. ನೀನು ಇಟ್ಟಿರುವ ಈ ಹೆಜ್ಜೆಯನ್ನು ಖಂಡಿಸುವಾಗ ಅಥವಾ ಪರಾಮರ್ಶಿಸುವಾಗ ನಾನು ರೀತಿ, ರಿವಾಜು ಎಂಬ ಸಾಮಾನ್ಯ ರೂಢಿಯನ್ನು ಎಲ್ಲಿ ಮೀರುತ್ತೇನೋ ಎಂದು ಭಯಭೀತಗೊಂಡಿದ್ದೇನೆ. ಅಲ್ಲದೆ ನನ್ನ ಭಾಷೆಯೂ ಕೊಂಚ ಒರಟಾಗಿಬಿಡಬಹುದೇನೋ. ನೇರವಾಗಿ ಹೇಳಿಬಿಡುತ್ತೇನೆ, ಕೇಳು. ಇದೀಗ ನನ್ನ ಬೆನ್ನಿಗೇ ಚೂರಿ ಹಾಕಲಾಗಿದೆಯೇನೊ ಎನ್ನುವಂತೆ ನನಗೆ ಭಾಸವಾಗುತ್ತಿದೆ. ಈ ಕೆಲಸವನ್ನು ಬೇರೆ ಯಾರಾದರೂ ಮಾಡಿದ್ದರೆ, ನಾನು ಅದನ್ನು ವಿಶ್ವಾಸದ್ರೋಹ ಎಂದು ಕರೆಯುತ್ತಿದ್ದೆ. ಆದರೆ ನಿನ್ನ ವಿಚಾರದಲ್ಲಿ ಅದನ್ನು ನಾನು ದೌರ್ಬಲ್ಯ - ಅತ್ಯಂತ ಕೆಟ್ಟ ಬಗೆಯ ದೌರ್ಬಲ್ಯ ಎಂದು ಹೇಳುತ್ತೇನೆ.

ಇದು ಎಲ್ಲರ ಅಂತಃಸತ್ವವನ್ನೂ ಪರೀಕ್ಷೆಗೊಳಪಡಿಸುವ ಕಾಲವಾಗಿತ್ತು. ಅಪ್ಪ ನೀನು ಇದರಲ್ಲಿ ಸೋತಿದ್ದೀಯ ಎಂದೇ ನಾನು ಹೇಳುವೆ. ನೀನು ಅಪ್ರತಿಮ ದೇಶಭಕ್ತ ಎಂದು ನನಗೆ ಗೊತ್ತಿದೆ. ನೀನು ಒಬ್ಬ ನಿಷ್ಠಾವಂತ ದೇಶಪ್ರೇಮಿಯೂ ಹೌದೆಂದು ನಾನು ಬಲ್ಲೆ. ಭಾರತದ ವಿಮೋಚನಾ ಚಳವಳಿಗಾಗಿ ನೀನು ನಿನ್ನ ಜೀವನವನ್ನೇ ಮುಡಿಪಾಗಿಟ್ಟಿದ್ದೀಯೆಂದೂ ನನಗೆ ಗೊತ್ತಿದೆ. ಆದರೆ ಈ ಕ್ಷಣದಲ್ಲಿ ಇಂತಹ ದೌರ್ಬಲ್ಯವನ್ನೇಕೆ ನೀನು ಪ್ರಕಟಿಸಿರುವೆ? ನನಗೆ ಅರ್ಥವಾಗುತ್ತಿಲ್ಲ.

ಅಂತಿಮವಾಗಿ ನನ್ನ ಪ್ರಕರಣದಲ್ಲಿ ಆಸಕ್ತಿ ಹೊಂದಿರುವ ನಿನಗೂ, ನನ್ನ ಇತರ ಸ್ನೇಹಿತರಿಗೂ ಮತ್ತು ಬೇರೆಲ್ಲರಿಗೂ ನಾನು ಹೇಳಲು ಬಯಸುವುದಿಷ್ಟೆ. ನಿನ್ನ ನಡೆಯನ್ನು ನಾನು ಖಂಡಿತ ಒಪ್ಪಿಲ್ಲ. ಈ ಕ್ಷಣದಲ್ಲೂ ನನ್ನ ಪರವಾಗಿ ವಾದ ಮಂಡಿಸಲು ನಾನು ಉತ್ಸುಕನಾಗಿಲ್ಲ. ಪ್ರತಿವಾದ, ಇತ್ಯಾದಿಗಳ ಕುರಿತು ನನ್ನ ಕೆಲವು ಸಹ-ಆಪಾದಿತರು ಸಲ್ಲಿಸಿದ್ದ ಅರ್ಜಿಯನ್ನು ಹಾಗೊಮ್ಮೆ ನ್ಯಾಯಾಲಯ ಮಾನ್ಯಗೊಳಿಸಿದ್ದರೂ ನನ್ನ ಪರವಾಗಿ ವಾದಿಸುವ ಗೊಡವೆಗೆ ನಾನು ಹೋಗುತ್ತಿರಲಿಲ್ಲ. ಉಪವಾಸ ಸತ್ಯಾಗ್ರಹದ ಸಂದರ್ಭದಲ್ಲಿನ ನನ್ನ ಸಂದರ್ಶನದ ಕುರಿತು ನ್ಯಾಯಮಂಡಳಿಗೆ ಸಲ್ಲಿಸಲಾಗಿದ್ದ ನನ್ನ ಅರ್ಜಿಗಳನ್ನು ತಪ್ಪಾಗಿ ಅರ್ಥೈಸಲಾಗಿ ನಾನು ಪ್ರತಿವಾದವನ್ನು ಒದಗಿಸಲಿದ್ದೇನೆಂದು ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು, ಆದರೆ ವಾಸ್ತವದಲ್ಲಿ ನಾನು ಯಾವುದೇ ಪ್ರತಿವಾದವನ್ನೂ ಮಂಡಿಸಲು ಇಚ್ಛಿಸಿರಲಿಲ್ಲ. ಇಂದೂ ಕೂಡ ನಾನು ಆ ದಿನದ ಅಭಿಪ್ರಾಯವನ್ನೇ ಹೊಂದಿದ್ದೇನೆ. ಇದನ್ನು ಬಾಲ ಕಾರಾಗೃಹದಲ್ಲಿರುವ ನನ್ನ ಸ್ನೇಹಿತರು ನಾನು ಎಸಗುವ ವಿಶ್ವಾಸದ್ರೋಹ ಮತ್ತು ವಂಚನೆ ಎಂಬುದಾಗಿ ಪರಿಗಣಿಸುತ್ತಾರೆ. ಅವರೆದುರು ನನ್ನ ನಿಲುವನ್ನು ಸ್ಪಷ್ಟಪಡಿಸಲು ನನಗೆ ಒಂದೇ ಒಂದು ಅವಕಾಶವೂ ಸಿಗುವುದಿಲ್ಲ. ಈ ಗೊಂದಲದ ಬಗೆಗಿನ ವಿವರಗಳನ್ನೆಲ್ಲ ಜನತೆ ತಿಳಿಯಬೇಕೆಂದು ನಾನು ಬಯಸುತ್ತೇನೆ. ಆದ್ದರಿಂದ ಈ ಪತ್ರವನ್ನು ಪ್ರಕಟಿಸಬೇಕೆಂದು ನಾನು ವಿನಂತಿಸುತ್ತಿದ್ದೇನೆ.

**-ನಿನ್ನ ಪ್ರೀತಿಯ ಮಗ**
**ಭಗತ್‌ಸಿಂಗ್**

**(ಭಗತ್ ಸಿಂಗ್ ಜನ್ಮದಿನದ ಹಿನ್ನಲೆಯಲ್ಲಿ, ನವಕರ್ನಾಟಕ ಪ್ರಕಾಶನದಿಂದ ಪ್ರಕಟಿತ 'ಭಗತ್ ಸಿಂಗ್ ಇಂಕ್ವಿಲಾಬ್ ಜಿಂದಾಬಾದ್!-ಆಯ್ದ ಬರಹಗಳು ಮತ್ತು ಭಾಷಣಗಳು' ಕೃತಿಯಿಂದ ಆಯ್ದ ಭಾಗ)**

---

# ಇದು ಕನ್ನಡ ಸಾಹಿತ್ಯ ಪರಿಷತ್‌ಗೆ ಹಾಗೂ ಸಮಸ್ತ ಕನ್ನಡಿಗರಿಗೆ ಮಾಡಿದ ಅನ್ಯಾಯವಲ್ಲವೇ?

**ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022ರ ಜಾರಿಯಲ್ಲಿ ಪ್ರಾಧಿಕಾರದ, ರಾಜ್ಯಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರನ್ನು ಕೈಬಿಟ್ಟಿರುವುದನ್ನು ಖಂಡಿಸಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಂದ ಮುಖ್ಯಮಂತ್ರಿಯವರಿಗೆ ಪತ್ರ**

## ಮುಖ್ಯಮಂತ್ರಿಗೆ ಒಂದು ಪತ್ರ

■ **ಡಾ. ಮಹೇಶ ಜೋಶಿ,**
**ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್**

ನ್ಯಾಯಮೂರ್ತಿ ಶ್ರೀ ಎಸ್.ಆರ್. ಬನ್ನೂರಮಠ ಅವರ ನೇತೃತ್ವದ ಕರ್ನಾಟಕ ಕಾನೂನು ಆಯೋಗವು ತನ್ನ ಐವತ್ತೇಳನೇ ವರದಿಯಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022 ಅನ್ನು ಸರಕಾರಕ್ಕೆ ಸಲ್ಲಿಸಿ, ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗಾಗಿ ಮತ್ತು ಕನ್ನಡಿಗರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಉತ್ತಮ ಅವಕಾಶಗಳನ್ನು ಒದಗಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ ಎಂದು ಸ್ಪಷ್ಟವಾಗಿ ನಮೂದಿಸಿದೆ. ಕರ್ನಾಟಕ ಕಾನೂನು ಆಯೋಗವು ಸರಕಾರಕ್ಕೆ ಸಲ್ಲಿಸಿದ್ದ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022ರ ಕಲಂ-7ರಲ್ಲಿ ಅಧಿಕೃತ ಭಾಷೆಯ ಅನುಷ್ಠಾನಕ್ಕಾಗಿ ಕಾರ್ಯವ್ಯವಸ್ಥೆ ಶೀರ್ಷಿಕೆಯಡಿಯಲ್ಲಿ ಒಂದು ರಾಜ್ಯಮಟ್ಟದ ಸಮಿತಿ ಇರತಕ್ಕದ್ದು ಎಂದು ಉಲ್ಲೇಖಿಸಿ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ ಇವರನ್ನು ರಾಜ್ಯಮಟ್ಟದ ಸಮಿತಿಯ ಸದಸ್ಯರನ್ನಾಗಿಯೂ ಹಾಗೂ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇವರನ್ನು ಜಿಲ್ಲಾ ಮಟ್ಟದ ಸದಸ್ಯರುಗಳನ್ನಾಗಿಯೂ ಸೇರ್ಪಡಿಸಿ, ವಿಧೇಯಕ ಜಾರಿಗೆ ತರಲು ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ಸಲ್ಲಿಸಿತ್ತು.




ಡಾ. ಮಹೇಶ ಜೋಶಿ

ದಿನಾಂಕ 22-09-2022ರಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕವನ್ನು ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಿದಾಗ, ಮಂಡಿಸಿದ ಈ ವಿಧೇಯಕದ ಕಲಂ-7ರಲ್ಲಿ ತಿಳಿಸಿದಂತೆ ಪ್ರಸ್ತಾಪಿತ ವಿಧೇಯಕದಲ್ಲಿ ಇದ್ದ, ರಾಜ್ಯಮಟ್ಟದ ಸಮಿತಿಯಲ್ಲಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ ಇವರನ್ನು ಹಾಗೂ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇವರುಗಳನ್ನು ಜಾರಿ ಪ್ರಾಧಿಕಾರದಿಂದ ಕೈಬಿಡಲಾಗಿದೆ.

ಸರಕಾರದ ಈ ಕ್ರಮದಿಂದಾಗಿ, ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಹಾಗೂ ಎಲ್ಲ ಕನ್ನಡ ಸಂಘ-ಸಂಸ್ಥೆಗಳ ಮಾತೃ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್‌ಗೆ ಹಾಗೂ ಸಮಸ್ತ ಕನ್ನಡಿಗರಿಗೆ ಘೋರ ಅನ್ಯಾಯವಾಗಿದೆ ಮತ್ತು ಅಕ್ಷಮ್ಯ ಅಪರಾಧವಾಗಿದೆ. ಇದು ಕನ್ನಡ ವಿರೋಧಿಗಳ ಕುತಂತ್ರ ಹಾಗೂ ಕನ್ನಡಿಗರನ್ನು ಪ್ರತಿನಿಧಿಸುವ ಕನ್ನಡ ಸಾಹಿತ್ಯ ಪರಿಷತ್‌ಗೆ ಮಾತ್ರವಲ್ಲ, ಎಲ್ಲ ಕನ್ನಡಿಗರಿಗೆ ತೋರುತ್ತಿರುವ ಅಸಡ್ಡೆ, ಅಸಹನೆ, ತಾತ್ಸಾರ ಹಾಗೂ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಕನ್ನಡ ಸಾಹಿತ್ಯ ಪರಿಷತ್‌ನ್ನು ಈ ವಿಧೇಯಕದಿಂದ ಕೈಬಿಡುವ ಮೂಲಕ ಸರಕಾರವು ಕನ್ನಡ ವಿರೋಧಿ ಧೋರಣೆ ತೋರುತ್ತಿದೆ ಎಂದು ಸಮಗ್ರ ಕನ್ನಡಿಗರು ಅದರಲ್ಲೂ, ಸಾಹಿತಿಗಳು, ಸಂಘಟಕರು, ಕನ್ನಡಪರ ಹೋರಾಟಗಾರರು ಖಂಡಿಸುತ್ತಿದ್ದಾರೆ. ಜೊತೆಗೆ ತಮಗೆ ಈಗಾಗಲೇ ತಿಳಿದಿರುವಂತೆ ನನ್ನ ಹಾಗೂ ತಮ್ಮ ತವರು ಜಿಲ್ಲೆಯಾದ ಹಾವೇರಿಯಲ್ಲಿ 86ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗುತ್ತಿದ್ದು, ಸಮ್ಮೇಳನದ ಸಂದರ್ಭದಲ್ಲಿ ಈ ವಿಚಾರವನ್ನೇ ಮುಂದಿಟ್ಟುಕೊಂಡು ಪ್ರತಿಭಟನೆ, ಘೋಷಣೆ ಮುಂತಾದ ಅಹಿತಕರ ಘಟನೆಗಳು ನಡೆಯುವ ಎಲ್ಲ ಸಾಧ್ಯತೆಗಳು ಹೆಚ್ಚಾಗುವಂತೆ ಕಾಣುತ್ತಿವೆ.

ವಿಧಾನಸಭೆಯ ಅಧಿವೇಶನದಲ್ಲಿ ಸರಕಾರ ಮಂಡಿಸಿದ ಈ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022ರಲ್ಲಿದ್ದ ಕನ್ನಡ ಸಾಹಿತ್ಯ ಪರಿಷತ್‌ನ ಹೆಸರನ್ನು ಕೈ ಬಿಟ್ಟಿರುವ ಈ ವಿಚಾರ ಈಗ ಕಾಳ್ಗಿಚ್ಚಿನಂತೆ ಎಲ್ಲ ಕಡೆ ಹಬ್ಬುತ್ತಿದೆ. ಜೊತೆಗೆ ನಾಡಿನಾದ್ಯಂತ ವಿರೋಧ ವ್ಯಕ್ತವಾಗುತ್ತಿದ್ದು, ಇದು ಕೈ ಮೀರುವುದರ ಜೊತೆಗೆ ಸಾಹಿತ್ಯ ಸಮ್ಮೇಳನದ ಮೇಲೆ ಕರಿಛಾಯೆ ಮೂಡುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಆದ್ದರಿಂದ ತಾವು ತಕ್ಷಣ ಸೂಕ್ತ ಕ್ರಮಕೈಗೊಳ್ಳಬೇಕು. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್‌ನ ಹೆಸರನ್ನು ಕೈಬಿಟ್ಟಿರುವ ಅಧಿಕಾರಿಗಳನ್ನು ಗುರುತಿಸಿ, ಅವರ ಹೆಸರುಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ ಪರಿಷತ್‌ಗೆ ಹಾಗೂ ಕನ್ನಡಿಗರಿಗೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಿಕೊಡಬೇಕೆಂಬುದು ಕನ್ನಡಿಗರೆಲ್ಲರ ಹಾಗೂ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ, ತಾಲೂಕು, ಹೋಬಳಿ, ಗಡಿರಾಜ್ಯ, ಹೊರರಾಜ್ಯ ಅಧ್ಯಕ್ಷರುಗಳ, ಕಾರ್ಯಕಾರಿ ಸಮಿತಿಗಳ ಒಕ್ಕೊರಲ ಧ್ವನಿಯಾಗಿದೆ.

ಕಲಂ-7ರಲ್ಲಿ ರಾಜ್ಯಮಟ್ಟದ ಸಮಿತಿಯನ್ನು ಪರಿಷ್ಕೃತಗೊಳಿಸಲಾಗಿದ್ದು, ಈ ಸಮಿತಿಯಲ್ಲಿರುವ ಎಲ್ಲರೂ ಸರಕಾರದ ಅಧಿಕಾರಿಗಳೇ ಇದ್ದು, ಸ್ವತಂತ್ರವಾಗಿರುವ, ಸ್ವಾಯತ್ತತೆಯಿಂದ ಸರಕಾರವನ್ನು ಎಚ್ಚರಿಸುವ ಯಾವುದೇ ಸಂಸ್ಥೆ ಇರುವುದಿಲ್ಲ. ಹಾಗಾಗಿ His Masters Voice (HMV) ಅಂದರೆ, ಸರಕಾರದ ಧ್ವನಿಯಾಗುವುದೇ ಹೊರತು, ಕನ್ನಡದ ಧ್ವನಿಯಾಗುವುದಿಲ್ಲ. ಜೊತೆಗೆ ಸರಕಾರದ ಮುಖ್ಯ ಕಾರ್ಯದರ್ಶಿಯನ್ನು ಸಮಿತಿಯ ಉಪಾಧ್ಯಕ್ಷರನ್ನಾಗಿಸಿ, ಸಚಿವ ಸ್ಥಾನಮಾನ ಹೊಂದಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಸಮಿತಿಗೆ ಕೇವಲ ಸದಸ್ಯರನ್ನಾಗಿಸಿರುವುದು ಕನ್ನಡಿಗರಿಗೆ ಮಾಡಿದ ಅವಮಾನವಾಗಿದೆ ಹಾಗೂ ಅಧಿಕಾರಶಾಹಿ ಧೋರಣೆಯಿಂದ ಸರಕಾರವನ್ನು ಶರಣಾಗತಿ ಮಾಡುವಂತೆ ಕಂಡುಬರುತ್ತಿರುವುದು, ಕನ್ನಡವನ್ನು ವ್ಯವಸ್ಥಿತವಾಗಿ ಹತ್ತಿಕ್ಕಲು ಅಧಿಕಾರಿಗಳು ಸರಕಾರವನ್ನು ತಪ್ಪುದಾರಿಗೆ ಎಳೆದು ತರುವ ಕುತಂತ್ರವಾಗಿದೆ. ಅದರಲ್ಲೂ ಕನ್ನಡಪರ ಕೆಲಸವನ್ನು ಮಾಡಬೇಕಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳೇ ಕನ್ನಡವನ್ನು ಅಧಿಕಾರಶಾಹಿಗಳ ನಿಯಂತ್ರಣದಲ್ಲಿಡುವಂತೆ ಈ ವಿಧೇಯಕವನ್ನು ರೂಪಿಸಿ, ಸರಕಾರವನ್ನು ಬಲಹೀನವನ್ನಾಗಿಸಿರುವುದು ಅತ್ಯಂತ ಖೇದಕರ ಎಂಬ ಮಾತುಗಳು ಮಾಧ್ಯಮಗಳಲ್ಲಿ, ಸಾರ್ವಜನಿಕರಲ್ಲಿ ಎದ್ದು ಕಾಣುತ್ತಿದ್ದು, ಈ ಬಗ್ಗೆ ಚರ್ಚೆಯೂ ಪ್ರಾರಂಭವಾಗಿದೆ. ಜೊತೆಗೆ ಕನ್ನಡ ಅನುಷ್ಠಾನದ ಈ ಮಹತ್ವದ ವಿಧೇಯಕದಿಂದ ಕನ್ನಡದ ಅಸ್ಮಿತೆಯ ಪ್ರತೀಕವಾಗಿರುವ ಕನ್ನಡ ಸಾಹಿತ್ಯ ಪರಿಷತ್ತನ್ನು ಹೊರಗಿಟ್ಟಿರುವುದು ಚಳವಳಿಯ ರೂಪದಲ್ಲೂ ಹೊರಹೊಮ್ಮುವ ಸಾಧ್ಯತೆ ಇದೆ.



ಪರಿಸ್ಥಿತಿ ಕೈ ಮೀರಿ ಹೋಗುವುದಕ್ಕಿಂತ ಮುಂಚೆ ಸರಕಾರ ತಕ್ಷಣ ಎಚ್ಚೆತ್ತುಕೊಂಡು ಕ್ರಮಕೈಗೊಳ್ಳಬೇಕು. ಸರಕಾರದ ಜೊತೆ ಸೌಹಾರ್ದಯುತ ಸಂಬಂಧವನ್ನು ಹೊಂದಬೇಕೆಂಬ ಉದ್ದೇಶದಿಂದ ಹಾಗೂ ಮುಂದೆ ಆಗುವ ಅನಾಹುತಕ್ಕೆ ಪರಿಷತ್ ಹೊಣೆಯಾಗದಿರುವುದರಿಂದ ಈ ಬಗ್ಗೆ ತಮಗೆ ಸಂಪೂರ್ಣ ಮಾಹಿತಿಯನ್ನು ನೀಡುತ್ತಿದ್ದೇವೆ.

ಕನ್ನಡ ಭಾಷೆಯ ಅಭಿವೃದ್ಧಿ ಕುರಿತು ಆಳವಾಗಿ ಅಧ್ಯಯನ ನಡೆಸಿ, ಚರ್ಚಿಸಿ, ಸಿದ್ಧಪಡಿಸಲಾದ ಈ ವಿಧೇಯಕವನ್ನು ಜಾರಿ ಮಾಡಲೇಬೇಕಾದ ಅನಿವಾರ್ಯತೆ ಸರಕಾರಕ್ಕೆ ಇದೆ. ವಿಧೇಯಕ ತಯಾರಿಸಿದ್ದು ಆಗಲೇಬೇಕಾದ ಮತ್ತು ಶ್ರೇಷ್ಠ ಕಾರ್ಯವಾಗಿದೆ. ಆದ್ದರಿಂದ ಮಂಡನೆಯಾಗಿರುವ ಈ ವಿಧೇಯಕವು ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಜರುಗಲಿರುವ ಅಧಿವೇಶನದಲ್ಲಿ ಚರ್ಚೆಯಾಗುವುದು ಎಂದು ಮಾಧ್ಯಮಗಳ ಮೂಲಕ ವರದಿಯಾಗಿದ್ದು, ಕನ್ನಡದ ಕೆಲಸವಾಗಿರುವ ಈ ವಿಧೇಯಕ ಜಾರಿಗೊಳಿಸುವುದು ಸರಕಾರದ ಆದ್ಯ ಕರ್ತವ್ಯವಾಗಿರುವುದರಿಂದ, ವಿಧೇಯಕದಲ್ಲಿರುವ ತಪ್ಪುಗಳನ್ನು ಸರಿಪಡಿಸಿ, ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಉಳಿಸಿ, ಬೆಳೆಸುವುದರ ಜತೆಗೆ ಅನ್ಯ ಭಾಷೆಗಳ ದಬ್ಬಾಳಿಕೆಗೆ ಅಂಕುಶ ಹಾಕಲು ಜಾರಿಗೆ ತರಲಾಗುತ್ತಿರುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022 ಅನ್ನು ಕಾನೂನಾಗಿ ಜಾರಿಗೊಳಿಸಬೇಕೆಂದು ಸಮಸ್ತ ಕನ್ನಡಿಗರ ಪರವಾಗಿ ಕನ್ನಡ ಸಾಹಿತ್ಯ ಪರಿಷತ್ ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತದೆ.

ದಿನಾಂಕ 26-8-2022ರಂದು ನಡೆದ ಶ್ರೀ ಕೃಷ್ಣರಾಜ ಪರಿಷತ್‌ನ ಮಂದಿರದ ಉದ್ಘಾಟನಾ ಸಮಾರಂಭದಲ್ಲಿ ತಾವೇ ಖುದ್ದು ಈ ವಿಧೇಯಕದ ವಿಷಯ ಪ್ರಸ್ತಾಪಿಸಿ, ಕನ್ನಡಪರವಾದ ಈ ಕಾನೂನು ಜಾರಿಗೆ ಕುರಿತಂತೆ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಚರ್ಚೆಮಾಡಬೇಕು, ಇದರ ಜವಾಬ್ದಾರಿಯನ್ನು ಕನ್ನಡ ಸಾಹಿತ್ಯ ಪರಿಷತ್ ವಹಿಸಿಕೊಳ್ಳಬೇಕು ಎಂದು ತಿಳಿಸಿದ್ದೀರಿ. ಈ ಹಿನ್ನೆಲೆಯಲ್ಲಿ ದಿನಾಂಕ 12-10-2022ರಂದು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022 ಕುರಿತಂತೆ ಚಿಂತನಾಗೋಷ್ಠಿಯನ್ನು ಪರಿಷತ್ ಏರ್ಪಡಿಸಿದ್ದು, ಸಾಹಿತ್ಯ, ಶಿಕ್ಷಣ, ಉದ್ಯೋಗ, ಕೈಗಾರಿಕಾ, ನ್ಯಾಯಾಂಗ ಸೇರಿದಂತೆ ಪ್ರಮುಖ ಕ್ಷೇತ್ರಗಳ ಪರಿಣತರನ್ನು ಈ ಗೋಷ್ಠಿಗೆ ಆಹ್ವಾನ ಮಾಡಿದ್ದೇವೆ. ಅಂದು ಸಭೆಯಲ್ಲಿ ಚರ್ಚೆಯಾದ ನಂತರ, ಕೈಗೊಂಡ ಮಹತ್ವದ ನಿರ್ಣಯಗಳನ್ನು ಸರಕಾರಕ್ಕೆ ಸಲ್ಲಿಸಲಾಗುವುದು. ●

# ಬಾಂಬೆ ಹೈಕೋರ್ಟ್‌ನ ಸಿಜೆ ದೀಪಂಕರ್ ದತ್ತಾ ಪದೋನ್ನತಿಗೆ ಶಿಫಾರಸು

ಹೊಸದಿಲ್ಲಿ,ಸೆ.27: ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ದೀಪಂಕರ ದತ್ತಾ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರನ್ನಾಗಿ ಭಡ್ತಿ ನೀಡಲು ಸುಪ್ರೀಂಕೋರ್ಟ್‌ನ ಕೊಲಿಜಿಯಂ ಮಂಗಳವಾರ ಶಿಫಾರಸು ಮಾಡಿದೆ.

ಸುಪ್ರೀಂಕೋರ್ಟ್‌ನ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾದ ಹೇಳಿಕೆಯೊಂದರ ಪ್ರಕಾರ, ಭಾರತದ ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ನೇತೃತ್ವದಲ್ಲಿ ಸೋಮವಾರ ನಡೆದ ಕೊಲಿಜಿಯಂನ ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಳ್ಳಲಾಗಿದೆ.

ನ್ಯಾಯಮೂರ್ತಿ ದತ್ತಾ ಅವರಿಗೆ 2006ರ ಜೂನ್ 22ರಂದು ಕೋಲ್ಕತಾ ಹೈಕೋರ್ಟ್‌ನ ಖಾಯಂ ನ್ಯಾಯಾಧೀಶರಾಗಿ ಭಡ್ತಿ ನೀಡಲಾಗಿತ್ತು. ಅವರಿಗೆ 2020ರ ಎಪ್ರಿಲ್ 28ರಂದು ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಪದೋನ್ನತಿ ನೀಡಲಾಗಿತ್ತು.

## ಭಾರತದಲ್ಲಿಯೇ ಕಾರ್ಲ್-ಗುಸ್ತಾಫ್ ಎಂ4 ಶಸ್ತ್ರಾಸ್ತ್ರ ವ್ಯವಸ್ಥೆಯ ತಯಾರಿಕೆ

ಹೊಸದಿಲ್ಲಿ,ಸೆ.27: ಸ್ವೀಡನ್‌ನ ರಕ್ಷಣಾ ಉತ್ಪನ್ನಗಳ ಕಂಪೆನಿ ಸಾಬ್ ತನ್ನ ಕಾರ್ಲ್ -ಗುಸ್ತಾಫ್ ಎಂ4 ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಭಾರತದಲ್ಲಿಯೇ ತಯಾರಿಸಲಿದೆ.

ಮಂಗಳವಾರ ಸುದ್ದಿಗಾರರಿಗೆ ಈ ವಿಷಯವನ್ನು ತಿಳಿಸಿದ ಕಂಪೆನಿಯ ಹಿರಿಯ ಉಪಾಧ್ಯಕ್ಷ ಜಾರ್ಗೆನ್ ಜೋಹಾನ್ಸನ್ ಭಾರತದಲ್ಲಿ ಕಂಪೆನಿಯ ನೂತನ ಸ್ಥಾವರವು 2024ರಲ್ಲಿ ಆರಂಭಗೊಳ್ಳುವ ನಿರೀಕ್ಷೆಯಿದೆ ಎಂದರು. 'ನಾವು ಇತರ ಯಾವುದೇ ದೇಶದಲ್ಲಿ ಈ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಿಲ್ಲ' ಎಂದೂ ಅವರು ತಿಳಿಸಿದರು.

## ಕೇರಳ: ಅನಿರ್ದಿಷ್ಟಾವಧಿ ನಿರಶನ ಆರಂಭಿಸಿದ ಉಚ್ಚಾಟಿತ ನನ್

ವಯನಾಡ್,ಸೆ.27: ನನ್ ಅತ್ಯಾಚಾರ ಪ್ರಕರಣದಲ್ಲಿ ಬಿಷಪ್ ಫ್ರಾಂಕೋ ಮುಲಕ್ಕಲ್ ವಿರುದ್ಧ ಪ್ರತಿಭಟನೆಗಾಗಿ ಫ್ರಾನ್ಸಿಸ್ಕನ್ ಕ್ಲಾರಿಸ್ಟ್ ಕಾಂಗ್ರಿಗೇಷನ್ (ಎಫ್‌ಸಿಸಿ)ನಿಂದ ಉಚ್ಚಾಟಿತ ಸಿಸ್ಟರ್ ಲೂಸಿ ಕಲಪ್ಪುರ (56) ಅವರು ಇಲ್ಲಿಗೆ ಸಮೀಪದ ಮಾನಂತವಾಡಿಯಲ್ಲಿನ ಕಾನ್ವೆಂಟ್‌ನೆದುರು ಮಂಗಳವಾರ ಅನಿರ್ದಿಷ್ಟಾವಧಿ ನಿರಶನವನ್ನು ಆರಂಭಿಸಿದ್ದಾರೆ. ಕಾನ್ವೆಂಟ್‌ನಲ್ಲಿ ತನಗೆ ಮೂಲಭೂತ ಸೌಲಭ್ಯಗಳನ್ನು ನಿರಾಕರಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ತನಗೆ ಆಹಾರ ಮತ್ತು ಇತರ ಸೌಲಭ್ಯಗಳನ್ನು ನಿರಾಕರಿಸಲಾಗಿದೆ ಎಂದು ಸಿಸ್ಟರ್ ಲೂಸಿ ಕಾನ್ವೆಂಟ್ ಅಧಿಕಾರಿಗಳ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದರು. ಬಿಷಪ್ ವಿರುದ್ಧ ಪ್ರಕರಣವು ಮುಗಿಯುವವರೆಗೂ ಕಾನ್ವೆಂಟ್‌ನಲ್ಲಿ ಉಳಿದುಕೊಳ್ಳಲು ಅವರಿಗೆ ಸ್ಥಳೀಯ ನ್ಯಾಯಾಲಯವು ಅವಕಾಶ ನೀಡಿದೆ. ಕಾನ್ವೆಂಟ್‌ನಲ್ಲಿಯ ಸಹವಾಸಿಗಳು ತನ್ನನ್ನು ಪ್ರತ್ಯೇಕಗೊಳಿಸಿದ್ದಾರೆ ಮತ್ತು ಅವಹೇಳನ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಸಿಸ್ಟರ್ ಲೂಸಿ, ನ್ಯಾಯಾಲಯದ ನಿರ್ದೇಶನಗಳನ್ನು ಕಾನ್ವೆಂಟ್ ಅಧಿಕಾರಿಗಳು ರಾಜಾರೋಷ ಉಲ್ಲಂಘಿಸುತ್ತಿದ್ದಾರೆ ಎಂದು ಹೇಳಿದರು.

## ವೇಶ್ಯಾವಾಟಿಕೆ, ಮಾದಕ ವಸ್ತು ಸೇವನೆಯ ಅಡ್ಡೆಯಾಗಿದ್ದ ಬಿಜೆಪಿ ಮುಖಂಡನ ಪುತ್ರನ ರೆಸಾರ್ಟ್!

### ಮಾಜಿ ಉದ್ಯೋಗಿಗಳಿಂದ ಮಾಹಿತಿ

ಡೆಹ್ರಾಡೂನ್, ಸೆ.27: ಅಂಕಿತಾ ಭಂಡಾರಿ ಹತ್ಯೆ ಪ್ರಕರಣದ ತನಿಖೆ ಮುಂದುವರಿದಿ ರುವ ನಡುವೆಯೇ, ಮುಖ್ಯ ಆರೋಪಿ ಪುಲ್ಕಿತ್ ಆರ್ಯ ಮಾಲಕತ್ವದ ರೆಸಾರ್ಟ್ ವೇಶ್ಯಾವಾಟಿಕೆ ಮತ್ತು ಮಾದಕ ವಸ್ತು ಸೇವನೆಯ ಅಡ್ಡೆಯಾಗಿತ್ತು ಎಂದು ಮಾಜಿ ಉದ್ಯೋಗಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಇವರ ತಪ್ಪೊಪ್ಪಿಗೆ ಹೇಳಿಕೆಯನ್ನು ಅಧಿಕೃತವಾಗಿ ಪರಿಗಣಿಸಲಿದೆ ಎಂದು ತನಿಖಾ ತಂಡ ಹೇಳಿದೆ.

ಉಚ್ಚಾಟಿತ ಬಿಜೆಪಿ ಮುಖಂಡ ವಿನೋದ್ ಆರ್ಯ ಅವರ ಮಗ, ರೆಸಾರ್ಟ್ ತೊರೆಯಲು ಮುಂದಾಗುವ ಉದ್ಯೋಗಿಗಳಿಗೆ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದ ಹಾಗೂ ಕಳ್ಳತನ ಹಾಗೂ ಹಲ್ಲೆಯಂಥ ಆರೋಪಗಳಲ್ಲಿ ಸಿಲುಕಿಸುತ್ತಿದ್ದ ಎಂದು ಮಾಜಿ ಸಿಬ್ಬಂದಿ ಹೇಳಿಕೆ ನೀಡಿದ್ದಾರೆ. ಈ ಎಲ್ಲ ಹೇಳಿಕೆಗಳನ್ನು ತನಿಖೆಯ ವೇಳೆ ಪರಿಗಣಿಸಲಾಗುವುದು ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಪೌರಿ ಗರ್ವಾಲ್ ಜಿಲ್ಲೆಯ ಗಂಗಾ-ಭೋಗಪುರ ಪ್ರದೇಶದಲ್ಲಿದ್ದ ಈ ರೆಸಾರ್ಟ್‌ನಲ್ಲಿ ನಡೆಯುತ್ತಿದ್ದ ಅಕ್ರಮ ಚಟುವಟಿಕೆಗಳ ಬಗ್ಗೆ ಇಬ್ಬರು ಮಾಜಿ ಸಿಬ್ಬಂದಿ, ದಂಪತಿ ಮಾಹಿತಿ ನೀಡಿದ್ದಾರೆ. ರೆಸಾರ್ಟ್ ಒಳಗೆ ವೇಶ್ಯಾವಾಟಿಕೆ ಮತ್ತು ಮಾದಕ ವಸ್ತು ಬಳಕೆಯಂಥ ಅಕ್ರಮ ಚಟುವಟಿಕೆಗಳನ್ನು ನಾವು ಸ್ವತಃ ನೋಡಿದ್ದೇವೆ ಎಂದು ಅವರು ಹೇಳಿದ್ದಾರೆ.

ಪೊಲೀಸರಿಗೆ ನೀಡಿರುವ ಹೇಳಿಕೆ ಬಗ್ಗೆ ಮಾಧ್ಯಮ ಜತೆಗೂ ಮಾತನಾಡಿದ ಅವರು, ರೆಸಾರ್ಟ್ ಅಕ್ರಮಗಳಿಗೆ ಸಾಕ್ಷಿಯಾಗಿ ಅವರು ನೀಡಿರುವ ಫೋನ್ ಕರೆಗಳ ತುಣುಕುಗಳು ಇದೀಗ ಜಾಲತಾಣಗಳಲ್ಲಿ ವೈರಲ್ ಆಗಿದೆ. ಆರ್ಯ ಹಾಗೂ ಆತನ ಸಹಾಯಕ ಅಂಕಿತ್ ಗುಪ್ತಾ ಎಂಬಾತನ ಕಿರುಕುಳದಿಂದ ನಾವು ತಪ್ಪಿಸಿಕೊಂಡೆವು ಎಂದು ಎರಡು ತಿಂಗಳ ಹಿಂದೆ ಅಲ್ಲಿ ಉದ್ಯೋಗಿಗಳಾಗಿದ್ದ ದಂಪತಿ ಹೇಳಿದ್ದಾರೆ. ಈ ಬಗ್ಗೆ ಸುದ್ದಿ ಮಾಧ್ಯಮವೊಂದು ವರದಿ ಮಾಡಿದೆ.

# ದೇಶದಲ್ಲಿ ಸಂತಾನೋತ್ಪತ್ತಿ ದರ ಗಣನೀಯ ಕುಸಿತ




ಹೊಸದಿಲ್ಲಿ ಸೆ.27: ದೇಶದಲ್ಲಿ ಸಾಮಾನ್ಯ ಸಂತಾನೋತ್ಪತ್ತಿ ದರ (ಜನರಲ್ ಫರ್ಟಿಲಿಟಿ ರೇಟ್) ಕಳೆದ ಹತ್ತು ವರ್ಷಗಳಲ್ಲಿ ಶೇಕಡ 20ರಷ್ಟು ಕುಸಿದಿರುವುದು ಅಂಕಿ ಅಂಶಗಳಿಂದ ಬಹಿರಂಗ ವಾಗಿದೆ.

ಫಲವತ್ತತೆ ದರ ಅಥವಾ ಸಂತಾನೋತ್ಪತ್ತಿ ದರ ಎಂದರೆ ಸಂತಾನೋತ್ಪತ್ತಿ ಸಾಮರ್ಥ್ಯದ (15-49) ವಯೋಮಾನದ 1000 ಮಹಿಳೆಯರಿಗೆ ಜನಿಸಿದ ಮಕ್ಕಳ ಸಂಖ್ಯೆ.

2008-2010ರ ಅವಧಿಯಲ್ಲಿ ದೇಶದ ಜಿಎಫ್‌ಆರ್ 86.1ರಷ್ಟಿತ್ತು. ಇದು 2018-20ರ ಅವಧಿಯಲ್ಲಿ 68.7ಕ್ಕೆ ಕುಸಿದಿದೆ ಎಂದು ಸ್ಯಾಂಪಲ್ ರಿಜಿಸ್ಟ್ರೇಷನ್ ಸಿಸ್ಟಂ ಅಂಕಿ ಅಂಶಗಳಿಂದ ತಿಳಿದು ಬಂದಿದೆ. ಫಲವತ್ತತೆ ದರ ಕುಸಿತ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು. ಗ್ರಾಮೀಣ ಪ್ರದೇಶದಲ್ಲಿ ಈ ಅವಧಿಯಲ್ಲಿ ಶೇಕಡ 20.2ರಷ್ಟು ಕುಸಿತ ದಾಖಲಾಗಿದ್ದರೆ, ನಗರ ಪ್ರದೇಶಗಳಲ್ಲಿ ಕುಸಿತ ಪ್ರಮಾಣ ಶೇಕಡ 15.6ರಷ್ಟಾಗಿದೆ.

ಜಿಎಫ್‌ಆರ್ ಕುಸಿದಿರುವುದು ಜನಸಂಖ್ಯಾ ಪ್ರಗತಿ ಇಳಿಕೆಯ ಸೂಚಕ. ಇದು ಉತ್ತಮ ಬೆಳವಣಿಗೆ. ಮಹಿಳೆಯರ ವಿವಾಹದ ವಯಸ್ಸು ಹೆಚ್ಚಿರುವುದು, ಸಾಕ್ಷರತೆ ಪ್ರಮಾಣ ಹೆಚ್ಚಳ, ಆಧುನಿಕ ಗರ್ಭನಿರೋಧಕ ವಿಧಾನಗಳ ಸುಲಭ ಲಭ್ಯತೆ ಈ ಬದಲಾವಣೆಗೆ ಪ್ರಮುಖ ಕಾರಣ ಎಂದು ಎಐಐಎಂಎಸ್‌ನ ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥೆ ಡಾ.ಸುನೀತಾ ಮಿತ್ತಲ್ ವಿಶ್ಲೇಷಿಸಿದ್ದಾರೆ.

ಜಮ್ಮು ಕಾಶ್ಮೀರದಲ್ಲಿ ಈ ಇಳಿಕೆ ಪ್ರಮಾಣ ಅತ್ಯಧಿಕ (ಶೇಕಡ 29.2). ದಿಲ್ಲಿ (28.5), ಉತ್ತರ ಪ್ರದೇಶ (24), ಜಾರ್ಖಂಡ್ (24), ರಾಜಸ್ಥಾನ (23.2) ನಂತರದ ಸ್ಥಾನಗಳಲ್ಲಿವೆ. ಮಹಾರಾಷ್ಟ್ರದಲ್ಲಿ ಕಳೆದ ಎರಡು ದಶಕಗಳಿಂದ ಜಿಎಫ್‌ಆರ್ ಶೇಕಡ 18.6ರಷ್ಟು ಕಡಿಮೆಯಾಗಿದೆ.

ದೇಶದಲ್ಲಿ ಒಟ್ಟು ಫಲವತ್ತತೆ ದರ (ಸಂತಾನೋತ್ಪತ್ತಿ ವಯಸ್ಸಿನಲ್ಲಿ ಪ್ರತಿ ಮಹಿಳೆಯರಿಗೆ ಹುಟ್ಟುವ ಮಕ್ಕಳ ಸಂಖ್ಯೆ) 2 ಆಗಿದ್ದು, ಬಿಹಾರದಲ್ಲಿ ಗರಿಷ್ಠ ಟಿಎಫ್‌ಆರ್ (3.0) ಇದ್ದರೆ ದೆಹಲಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಇದು ಕನಿಷ್ಠ (1.4) ಎಂದು ಎಸ್‌ಆರ್‌ಎಸ್ ಅಂಕಿ ಅಂಗಳಿಂದ ತಿಳಿದುಬಂದಿದೆ.

# ■ ಆರ್ಥಿಕ ಮೀಸಲಾತಿ ತೀರ್ಪು ಕಾದಿರಿಸಿದ ಸುಪ್ರೀಂ



ಹೊಸದಿಲ್ಲಿ,ಸೆ.27: ಆರ್ಥಿಕವಾಗಿ ದುರ್ಬಲವಾದ ವರ್ಗ(ಇಡಬ್ಲ್ಯುಎಸ್)ಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾತಿ ಹಾಗೂ ಉದ್ಯೋಗಗಳಲ್ಲಿ ಶೇ.10ರಷ್ಟು ಮೀಸಲಾತಿ ನೀಡುವ ಕೇಂದ್ರ ಸರಕಾರದ ನಿರ್ಧಾರವನ್ನು ಪ್ರಶ್ನಿಸುವ ಅರ್ಜಿಗಳ ಕುರಿತಾದ ತನ್ನ ತೀರ್ಪನ್ನು ಸುಪ್ರೀಂಕೋರ್ಟ್ ಮಂಗಳವಾರ ಕಾದಿರಿಸಿದೆ.

ಸಮಾನತೆಯ ಹಕ್ಕು ಹಾಗೂ ಮೀಸಲಾತಿಯ ತಳಹದಿ ಕುರಿತಾದ ವಿಷಯಗಳಿಗೆ ಸಂಬಂಧಿಸಿದ ಸಂವಿಧಾನದ 15 ಹಾಗೂ 16ನೇ ವಿಧಿಗಳಲ್ಲಿ ಬದಲಾವಣೆ ಮಾಡಿರುವ 103ನೇ ತಿದ್ದುಪಡಿಯನ್ನು ಅರ್ಜಿದಾರರು ವಿರೋಧಿಸಿದ್ದರು.

ಈ ವಿಷಯಕ್ಕೆ ಸಂಬಂಧಿಸಿ ನಡೆದ ವಿಚಾರಣೆಯ ಸಂದರ್ಭ ಅರ್ಜಿದಾರರ ಪರ ನ್ಯಾಯವಾದಿ ಮೋಹನ್ ಗೋಪಾಲ್ ಅವರು ಈ ತಿದ್ದುಪಡಿಯು ಸಂವಿಧಾನಕ್ಕೆ ಎಸಗುವ ವಂಚನೆಯಾಗಿದೆ ಎಂದು ವಾದಿಸಿದ್ದರು.

ಇಡಬ್ಲ್ಯುಎಸ್ ಮೀಸಲಾತಿಯನ್ನು ವಿರೋಧಿಸುವ ಅರ್ಜಿದಾರರ ಮತ್ತೊಂದು ಗುಂಪನ್ನು ಪ್ರತಿನಿಧಿಸಿದ ಹಿರಿಯ ನ್ಯಾಯವಾದಿ ಪಿ. ವಿಲ್ಸನ್ ಅವರು ಮೀಸಲಾತಿಯು ಐತಿಹಾಸಿಕವಾಗಿ ಆಗಿರುವಂತಹ ಅನ್ಯಾಯಕ್ಕಾಗಿ ನೀಡುವ ಉಪಶಮನವೇ ಹೊರತು ಬಡತನ ನಿವಾರಣೆ ಕಾರ್ಯಕ್ರಮವಲ್ಲವೆಂದು ಪ್ರತಿಪಾದಿಸಿದ್ದರು.

ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿ ಕೋಟಾವು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಹಕ್ಕುಗಳನ್ನು ಕಸಿಯುವುದಿಲ್ಲವೆಂದು ಕೇಂದ್ರ ಸರಕಾರ ಸುಪ್ರೀಂಕೋರ್ಟ್ ಗೆ ಸ್ಪಷ್ಟಪಡಿಸಿದೆ. ಮೀಸಲಾತಿ ನೀತಿಯಡಿ ಪರಿಶಿಷ್ಟ ಜಾತಿ/ ಪಂಗಡಗಳು ಸಾಕಷ್ಟು ಸೌಲಭ್ಯಗಳನ್ನು ಅನುಭವಿಸುತ್ತಿವೆಯೆಂದವರು ಸುಪ್ರೀಂಕೋರ್ಟ್ ನ್ಯಾಯಪೀಠಕ್ಕೆ ತಿಳಿಸಿದ್ದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಸಂವಿಧಾನದ 16 (4) (ಎ) (ಭಡ್ತಿಗೆ ವಿಶೇಷ ನಿಯಮ), 243ಡಿ ( ಪಂಚಾಯತ್ ಹಾಗೂ ಪುರಸಭೆ ಸ್ಥಾನಗಳಲ್ಲಿ ಮೀಸಲಾತಿ) 330 (ಲೋಕಸಭೆಯಲ್ಲಿ ಮೀಸಲಾತಿ) ಹಾಗೂ 332 ( ರಾಜ್ಯ ವಿಧಾನಸಭಾ ಸ್ಥಾನಗಳಲ್ಲಿ ಮೀಸಲಾತಿ) ವಿಧಿಗಳ ಅಡಿಯಲ್ಲಿ ಹಲವಾರು ಸವಲತ್ತುಗಳನ್ನು ನೀಡಲಾಗಿದೆ ಎಂದು ಸರಕಾರ ಸುಪ್ರೀಂಕೋರ್ಟ್‌ಗೆ ವಿವರಿಸಿತ್ತು.

## 'ಜ್ಞಾನೋದಯ'ಕ್ಕಾಗಿ ಜೀವಂತ 'ಸಮಾಧಿ'ಯಾಗಿದ್ದ ಯುವಕನನ್ನು ರಕ್ಷಿಸಿದ ಉತ್ತರ ಪ್ರದೇಶ ಪೊಲೀಸರು

ಲಕ್ನೊ,ಸೆ.27: ನವರಾತ್ರಿ ಉತ್ಸವಗಳು ಆರಂಭ ಗೊಳ್ಳುವ ಒಂದು ದಿನ ಮೊದಲು 'ಸಮಾಧಿ'ಯಾದರೆ ಜ್ಞಾನೋದಯವಾಗುತ್ತದೆ ಎಂಬ ಪುರೋಹಿತರ ಮಾತುಗಳನ್ನು ನಂಬಿ ನೆಲದಡಿ ಆರು ಅಡಿ ಆಳದಲ್ಲಿ ಹೂಳಲ್ಪಟ್ಟಿದ್ದ ಯುವಕನೋರ್ವನನ್ನು ಉತ್ತರ ಪ್ರದೇಶದ ಪೊಲೀಸರು ಮಂಗಳವಾರ ರಕ್ಷಿಸಿದ್ದಾರೆ.

ಧಾರ್ಮಿಕ ವಿಧಿಗಳ ಮೂಲಕ ದುಡ್ಡು ಸಂಪಾದಿಸಲು ಬಯಸಿದ್ದ ಉನ್ನಾವ್ ಜಿಲ್ಲೆಯ ತೇಜಪುರ ಗ್ರಾಮದ ಮೂವರು ಪುರೋಹಿತರು ನೆಲದಡಿ ಸಮಾಧಿಯಾಗುವಂತೆ ಸ್ಥಳೀಯ ನಿವಾಸಿ ಶುಭಂ ಗೋಸ್ವಾಮಿಯ ಮನವೊಲಿಸಿದ್ದರು. ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು ಆತನನ್ನು ಸಮಾಧಿಯಿಂದ ಹೊರಕ್ಕೆ ತೆಗೆದು ರಕ್ಷಿಸಿದ್ದಾರೆ. ಘಟನೆಯ ವೀಡಿಯೊ ವೈರಲ್ ಆಗಿದ್ದು, ಪೊಲೀಸರು ಗೋಸ್ವಾಮಿಯ ಮೈಮೇಲೆ ಹಾಕಲಾಗಿದ್ದ ಮಣ್ಣು ಮತ್ತು ಬಿದಿರಿನ ಹೊದಿಕೆಯನ್ನು ತೆಗೆಯುತ್ತಿರುವ ದೃಶ್ಯ ವೀಡಿಯೊದಲ್ಲಿದೆ.

ಗೋಸ್ವಾಮಿ, ಪುರೋಹಿತರಾದ ಮುನ್ನಾಲಾಲ ಮತ್ತು ಶಿವಕೇಶ ದೀಕ್ಷಿತ ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಸಮಾಧಿಗೆ ಹೊಂಡ ತೋಡುವುದರಲ್ಲಿ ಗೋಸ್ವಾಮಿಯ ತಂದೆ ವಿನೀತ ಗೋಸ್ವಾಮಿ ಕೂಡ ಭಾಗಿಯಾಗಿದ್ದ ಎನ್ನಲಾಗಿದೆ.

ಕಳೆದ ಸುಮಾರು ಐದು ವರ್ಷಗಳಿಂದ ಗ್ರಾಮದ ಹೊರಗೆ ಗುಡಿಸಲಿನಲ್ಲಿ ವಾಸವಿರುವ ಗೋಸ್ವಾಮಿ ಪುರೋಹಿತರ ಸಂಪರ್ಕಕ್ಕೆ ಬಂದ ಬಳಿಕ ಧಾರ್ಮಿಕ ವಿಧಿಗಳಲ್ಲಿ ತೊಡಗಿಕೊಳ್ಳಲು ಆರಂಭಿಸಿದ್ದ. ಆತನ ಧರ್ಮಶ್ರದ್ಧೆಯನ್ನು ಬಳಸಿಕೊಂಡು ದುಡ್ಡು ಮಾಡಲು ಯೋಜಿಸಿದ್ದ ಪುರೋಹಿತರು 'ಭೂ ಸಮಾಧಿ ' ಯಾಗುವಂತೆ ಆತನನ್ನು ಉತ್ತೇಜಿಸಿದ್ದರು.

ಗೋಸ್ವಾಮಿ ರವಿವಾರ ಸಂಜೆ ಆರು ಅಡಿ ಆಳದ ಸಮಾಧಿಯನ್ನು ಪ್ರವೇಶಿಸಿದ್ದ. ಈ ಬಗ್ಗೆ ತಿಳಿದ ಗ್ರಾಮಸ್ಥರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದರು. ಗೋಸ್ವಾಮಿಯನ್ನು ಹೊರತೆಗೆದ ಬಳಿಕ ಪೊಲೀಸರು ಆತನನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಪುರೋಹಿತರ ಸಂಚು ಬಯಲಿಗೆ ಬಂದಿದೆ.

ಘಟನೆಯಲ್ಲಿ ಭಾಗಿಯಾಗಿದ್ದ ಇತರ ಕೆಲವರು ಸ್ಥಳದಿಂದ ಪರಾರಿಯಾಗಿದ್ದಾರೆ.

## ಇಶಾ ಫೌಂಡೇಷನ್ ಪರ ಮದ್ರಾಸ್ ಹೈಕೋರ್ಟ್‌ನಲ್ಲಿ ಕೇಂದ್ರದ ಹೇಳಿಕೆ

ಚೆನ್ನೈ,ಸೆ.27: ಜಗ್ಗಿ ವಾಸುದೇವ ಅವರ ಇಶಾ ಫೌಂಡೇಷನ್ 2006 ಮತ್ತು 2014ರ ನಡುವೆ ಕೊಯಮತ್ತೂರಿನ ತನ್ನ ಆವರಣದಲ್ಲಿ ಕೈಗೊಂಡಿದ್ದ ನಿರ್ಮಾಣ ಕಾಮಗಾರಿಗಳಿಗೆ ಪರಿಸರ ಪೂರ್ವಾನುಮತಿಯನ್ನು ಪಡೆಯುವುದು ಅಗತ್ಯವಾಗಿರಲಿಲ್ಲ ಎಂದು ಕೇಂದ್ರ ಸರಕಾರವು ಸೋಮವಾರ ಮದ್ರಾಸ್ ಉಚ್ಚ ನ್ಯಾಯಾಲಯಕ್ಕೆ ತಿಳಿಸಿದೆ.

ಕೇಂದ್ರದ 2006ರ ಪರಿಸರ ಪ್ರಭಾವ ಮೌಲ್ಯಮಾಪನ ಅಧಿಸೂಚನೆಯಡಿ ಅನುಮತಿ ಪಡೆದುಕೊಳ್ಳದೆ ನಿರ್ಮಾಣ ಕಾಮಗಾರಿಯನ್ನು ಆರಂಭಿಸಿತ್ತು ಎಂದು ಆರೋಪಿಸಿ ತಮಿಳುನಾಡು ಆಡಳಿತವು ಜನವರಿಯಲ್ಲಿ ಇಶಾ ಫೌಂಡೇಷನ್ ವಿರುದ್ಧ ಕಾನೂನು ಕ್ರಮವನ್ನು ಆರಂಭಿಸಿತ್ತು.

ಇದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದ ಇಶಾ ಫೌಂಡೇಷನ್, 2014ರ ಪರಿಸರ ರಕ್ಷಣೆ ತಿದ್ದುಪಡಿ ನಿಯಮಗಳು ಶಿಕ್ಷಣ ಸಂಸ್ಥೆಗಳಿಗೆ ಪೂರ್ವಾನ್ವಯಗೊಳ್ಳುವಂತೆ ವಿನಾಯಿತಿಯನ್ನು ನೀಡಿವೆ ಎಂದು ತಿಳಿಸಿತ್ತು.

ಶಿಕ್ಷಣವನ್ನು ಉತ್ತೇಜಿಸುವ ಸಂಸ್ಥೆಯಾಗಿರುವುದರಿಂದ ಇಶಾ ಫೌಂಡೇಷನ್ ವಿನಾಯಿತಿಯನ್ನು ಪಡೆಯಬಹುದು ಎಂದು ಉಚ್ಚ ನ್ಯಾಯಾಲಯಕ್ಕೆ ತಿಳಿಸಿದ ಕೇಂದ್ರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಆರ್.ಶಂಕರನಾರಾಯಣನ್, ಕಿರುಕುಳವನ್ನು ತಡೆಯುವುದು ಮತ್ತು ಸಮ ತೋಲನವನ್ನು ಸಾಧಿಸುವುದು ವಿನಾಯಿತಿಯ ಹಿಂದಿನ ಉದ್ದೇಶವಾಗಿದೆ ಎಂದರು.

ನ್ಯಾಯಾಲಯವು ಬುಧವಾರ ವಿಚಾರಣೆಯನ್ನು ಮುಂದುವರಿಸಲಿದೆ.

## ಹಲ್ಲೆ ಆರೋಪ: ಜೈಪುರದ ಬಿಜೆಪಿ ಮೇಯರ್ ವಜಾ

ಜೈಪುರ (ರಾಜಸ್ಥಾನ),ಸೆ.27: ಜೈಪುರ ಗ್ರೇಟರ್ ಮುನ್ಸಿಪಲ್ ಕಾರ್ಪೊರೇಶನ್‌ನ ಮಾಜಿ ಆಯುಕ್ತ ಯಜ್ಞಮಿತ್ರ ಸಿಂಗ್ ದೇವ್ ಅವರ ಮೇಲಿನ ಹಲ್ಲೆ ಪ್ರಕರಣದಲ್ಲಿ ತಪ್ಪಿತಸ್ಥರೆಂದು ನ್ಯಾಯಾಂಗ ವಿಚಾರಣೆಯು ಬೆಟ್ಟು ಮಾಡಿರುವ ಹಿನ್ನೆಲೆಯಲ್ಲಿ ರಾಜಸ್ಥಾನ ಸರಕಾರವು ಬಿಜೆಪಿಯ ಸೌಮ್ಯಾ ಗುರ್ಜರ್ ಅವರನ್ನು ಮಂಗಳವಾರ ಮೇಯರ್ ಮತ್ತು ಕೌನ್ಸಿಲರ್ ಹುದ್ದೆಯಿಂದ ವಜಾಗೊಳಿಸಿದೆ.

ಸ್ಥಳೀಯ ಸ್ವಾಯತ್ತ ಆಡಳಿತ ಇಲಾಖೆಯೂ ಆರು ವರ್ಷಗಳ ಅವಧಿಗೆ ಗುರ್ಜರ್ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಆ.22ರಂದು ಇಬ್ಬರು ಬಿಜೆಪಿ ಮತ್ತು ಓರ್ವ ಪಕ್ಷೇತರ ಕೌನ್ಸಿಲರ್‌ಗಳನ್ನು ವಜಾಗೊಳಿಸಲಾಗಿತ್ತು. ಆಗ ಗುರ್ಜರ್ ವಿರುದ್ಧ ವಿಚಾರಣೆ ಬಾಕಿಯಿತ್ತು.

ಸರಕಾರದ ನಿರ್ಧಾರಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿರುವ ಉಪಮೇಯರ್, 'ರಾಜಕೀಯ ಕಾರಣಗಳು ಮತ್ತು ರಾಜಕೀಯ ವೈಷಮ್ಯದಿಂದ ಮೇಯರ್ ಮತ್ತು ಮೂವರು ಕೌನ್ಸಿಲರ್‌ಗಳನ್ನು ಉಚ್ಚಾಟಿಸಲಾಗಿದೆ.

ಜುಜುಬಿ ಘಟನೆಯನ್ನು ಬಳಸಿಕೊಂಡು ಚುನಾಯಿತ ಜನಪ್ರತಿನಿಧಿಗಳ ಸದಸ್ಯತ್ವವನ್ನು ರದ್ದುಗೊಳಿಸುವುದು ಪ್ರಜಾಪ್ರಭುತ್ವದ ಮೇಲಿನ ತೀವ್ರ ದಾಳಿಯಾಗಿದೆ. ನಾವು ಇದನ್ನು ಬಲವಾಗಿ ಪ್ರತಿರೋಧಿಸುತ್ತೇವೆ ಮತ್ತು ನಮ್ಮ ಸಹೋದ್ಯೋಗಿಗಳ ಹಕ್ಕುಗಳಿಗಾಗಿ ಹೋರಾಡು ತ್ತೇವೆ. ಅಂತಿಮ ಗೆಲುವು ನಮ್ಮದೇ ಆಗಲಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷದ ಜೂ.4ರಂದು ಮೇಯರ್ ಕಚೇರಿಯಲ್ಲಿ ಆಗಿನ ಆಯುಕ್ತ ಸಿಂಗ್ ಮತ್ತು ಕೌನ್ಸಿಲರ್‌ಗಳ ನಡುವೆ ವಿವಾದವುಂಟಾಗಿತ್ತು. ಎರಡು ದಿನಗಳ ಬಳಿಕ ಸರಕಾರವು ಮೇಯರ್ ಮತ್ತು ಸಂಬಂಧಿತ ಕೌನ್ಸಿಲರ್‌ಗಳನ್ನು ಅಮಾನತುಗೊಳಿಸಿತ್ತು.

2021,ಜೂ.7ರಂದು ಶೀಲ್ ಧಾಭಾಯಿ ಅವರನ್ನು ಉಸ್ತುವಾರಿ ಮೇಯರ್ ಆಗಿ ನೇಮಕಗೊಳಿಸಲಾಗಿತ್ತು. ಬಳಿಕ ನ್ಯಾಯಾಲಯದಿಂದ ತಡೆಯಾಜ್ಞೆಯ ಆಧಾರದಲ್ಲಿ ಸೌಮ್ಯಾ ಗುರ್ಜರ್ ಅವರನ್ನು ಮೇಯರ್ ಸ್ಥಾನದಲ್ಲಿ ಪುನರ್ ಪ್ರತಿಷ್ಠಾಪಿಸಲಾಗಿತ್ತು.



ಮಧ್ಯಪ್ರದೇಶದ ಔರೈಯಾದಲ್ಲಿ ಶಿಕ್ಷಕನಿಂದ ಬರ್ಬರವಾಗಿ ಥಳಿತಕ್ಕೊಳಗಾಗಿ ಮೃತಪಟ್ಟ ದಲಿತ ಬಾಲಕನ ಅಂತ್ಯಕ್ರಿಯೆ ಮಂಗಳವಾರ ನಡೆಯಿತು. ಈ ಸಂದರ್ಭ ಪಾರ್ಥಿವ ಶರೀರದ ಮುಂದೆ ರೋದಿಸುತ್ತಿರುವ ಕುಟುಂಬಿಕರನ್ನು ಪೊಲೀಸ್ ಅಧಿಕಾರಿಯೊಬ್ಬರು ಸಂತೈಸುತ್ತಿರುವುದು.

## ಪಕ್ಷ ವಿರೋಧಿ ಚಟುವಟಿಕೆ ಎಐಎಡಿಎಂಕೆ ಹಿರಿಯ ನಾಯಕ ಪಕ್ಷದಿಂದ ಉಚ್ಚಾಟನೆ

ಚೆನ್ನೈ,ಸೆ.27: ಪಕ್ಷವಿರೋಧಿ ಚಟುವಟಿಕೆಗಳಿಗಾಗಿ ಹಿರಿಯ ನಾಯಕ ಪನ್ರುಟ್ಟಿ ಎಸ್.ರಾಮಚಂದ್ರನ್‌ರನ್ನು ಸಂಘಟನಾ ಕಾರ್ಯದರ್ಶಿ ಹುದ್ದೆಯಿಂದ ಮತ್ತು ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಎಐಎಡಿಎಂಕೆಯ ಮಧ್ಯಂತರ ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ ಮಂಗಳವಾರ ಪ್ರಕಟಿಸಿದರು.

ರಾಮಚಂದ್ರನ್ ಅವರು ಪಳನಿಸ್ವಾಮಿಯವರ ವಿರುದ್ಧ ಕೆಲವು ಟೀಕೆಗಳನ್ನು ಮಾಡಿದ್ದ ಹಿನ್ನೆಲೆಯಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗಿದೆ.

ರಾಮಚಂದ್ರನ್ ಪಕ್ಷಕ್ಕೆ ಅಗೌರವವನ್ನುಂಟು ಮಾಡುತ್ತಿದ್ದಾರೆ ಹಾಗೂ ಪಕ್ಷದ ತತ್ವಗಳು ಮತ್ತು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಪಳನಿಸ್ವಾಮಿ ತಿಳಿಸಿದ್ದಾರೆ.

ಈ ನಡುವೆ ತಾನು ಎಐಎಡಿಎಂಕೆಯ 'ಸಂಯೋಜಕ'ಎಂದು ಹೇಳಿಕೊಳ್ಳುತ್ತಿರುವ ಪಳನಿಸ್ವಾಮಿಯವರ ವಿರೋಧಿ ಓ.ಪನ್ನೀರ್ ಸೆಲ್ವಂ ಅವರು,ರಾಮಚಂದ್ರನ್‌ರನ್ನು ಪಕ್ಷದ 'ರಾಜಕೀಯ ಸಲಹೆಗಾರ'ರಾಗಿ ನೇಮಕಗೊಳಿಸಿರುವುದಾಗಿ ಪ್ರಕಟಿಸಿದ್ದಾರೆ.

## ಪಳೆಯುಳಿಕೆ ಇಂಧನಗಳ ಬಳಕೆ ತ್ಯಜಿಸುವುದು ಭಾರತದಲ್ಲಿ ಸಾಧ್ಯವಾಗದು: ಗೌತಮ್ ಅದಾನಿ

ಹೊಸದಿಲ್ಲಿ,ಮಾ.27: ಭಾರತದ ದೊಡ್ಡ ಪ್ರಮಾಣದ ಜನಸಂಖ್ಯೆಗೆ ಪೂರೈಕೆ ಮಾಡಲಾಗುವ ಎಲ್ಲಾ ವಿಧದ ಪಳೆಯುಳಿಕೆ ಜನ್ಯ ಇಂಧನಗಳ ಬಳಕೆಯನ್ನು ತೊರೆಯಬೇಕೆಂದು ಟೀಕಾಕಾರರು ಆಗ್ರಹಿಸುತ್ತಿರುವರಾದರೂ ಭಾರತದಲ್ಲಿ ಅದು ಸಾಧ್ಯವಾಗದು ಎಂದು ಭಾರತದ ಉದ್ಯಮ ದಿಗ್ಗಜ ಗೌತಮ್ ಆದಾನಿ ಮಂಗಳವಾರ ಹೇಳಿದ್ದಾರೆ.

ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು ಕಳಪೆ ದರ್ಜೆಯ ಪಳೆಯುಳಿಕೆ ಇಂಧನದಿಂದ ಉತ್ಪಾದಿಸಲಾಗುವ ವಿದ್ಯುತ್ ಪ್ರಮಾಣವನ್ನು ಹೆಚ್ಚಿಸುವ ಕುರಿತಾದ ಭಾರತದ ಯೋಜನೆಯ ಬಗ್ಗೆ ವ್ಯಕ್ತವಾಗಿರುವ ಟೀಕೆಗಳ ಬಗ್ಗೆಯೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಾಗತಿಕ ಹವಾಮಾನ ಬದಲಾವಣೆಗೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ದೊಡ್ಡ ಮಟ್ಟದಲ್ಲಿ ಇಂಗಾಲಾಮ್ಲದ ಹೊರಸೂಸುವಿಕೆಯೇ ಕಾರಣವೆಂದು ಪ್ರಧಾನಿ ನರೇಂದ್ರ ಮೋದಿ ದೂಷಿಸಿದ್ದರು ಹಾಗೂ ಪ್ರತಿಯೋರ್ವ ಭಾರತೀಯನ ಮನೆಗೂ ವಿದ್ಯುತ್ತನ್ನು ಒದಗಿಸುವ ತನ್ನ ಗುರಿಯನ್ನು ಈಡೇರಿಸಬೇಕಾದರೆ, ಪ್ರತಿಯೊಬ್ಬನಿಗೂ ಉಚಿತ ಇಂಧನದ ಅಗತ್ಯವಿದೆ ಎಂದು ಹೇಳಿಕೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿಯವರ ಪ್ರತಿಪಾದನೆಯನ್ನು ಅದಾನಿ ನೀಡಿದ್ದ ಈ ಹೇಳಿಕೆ ಪ್ರತಿಬಿಂಬಿಸಿದೆ.

ರಾಷ್ಟ್ರವಾದವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಚೀನಾಕ್ಕೆ ಏಕಾಂಗಿಯಾಗುತ್ತಿರುವ ಭಾವನೆ ಮೂಡಲಿದೆಯೆಂದು ಅದಾನಿ ಸಂದರ್ಶನದಲ್ಲಿ ಅಭಿಪ್ರಾಯಿಸಿದ್ದಾರೆ. ಪೂರೈಕೆ ಜಾಲದ ವರ್ಗಾವಣೆ ಹಾಗೂ ತಂತ್ರಜ್ಞಾನದ ಮೇಲಿನ ನಿರ್ಬಂಧಗಳು ಜಗತ್ತಿನ ಎರಡನೇ ದೊಡ್ಡ ಆರ್ಥಿಕತೆ ಹೊಂದಿರುವ ದೇಶವಾದ ಚೀನಾಕ್ಕೆ ದೊಡ್ಡ ಬೆದರಿಕೆಯಾಗಿ ಪರಿಣಮಿಸಿದೆಯೆಂದವರು ಹೇಳಿದರು.

ಚೀನಾದ ಬೆಲ್ಟ್ ಆ್ಯಂಡ್ ರೋಡ್ ಉಪಕ್ರಮಕ್ಕೆ ಹಲವಾರು ರಾಷ್ಟ್ರಗಳಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿದ್ದು, ಬೀಜಿಂಗ್‌ನ ಜಾಗತಿಕ ಮಹತ್ವಾಕಾಂಕ್ಷೆಗೆ ಸವಾಲೊಡ್ಡಿವೆಯೆಂದು, ವಿಶ್ವದ ಮೂರನೇ ಅತಿ ದೊಡ್ಡ ಶ್ರೀಮಂತನೆಂಬ ಹೆಗ್ಗಳಿಕೆ ಪಡೆದಿರುವ ಗೌತಮ್ ಅದಾನಿ ತಿಳಿಸಿದ್ದಾರೆ. 1990ರ ಕೊನೆ ದಶಕದ ಸಂದರ್ಭದಲ್ಲಿ ಜಪಾನ್‌ನಲ್ಲಿ ಸಂಭವಿಸಿದಂತೆ, ರಿಯಲ್ ಎಸ್ಟೇಟ್ ಮಾರುಕಟ್ಟೆ ಕರಗತೊಡಗಿದೆ ಎಂದು ಗೌತಮ್ ಆದಾನಿ ಅವರು ಹೇಳಿದರು.

## ವಿಮಾನ ಖರೀದಿ ಮಾತುಕತೆ ತ್ರಿಶಂಕು ಸ್ಥಿತಿಯಲ್ಲಿ ಜೆಟ್ ಏರ್‌ವೇಸ್‌ನ ಪುನರಾರಂಭದಲ್ಲಿ ವಿಳಂಬ

ಹೊಸದಿಲ್ಲಿ,ಸೆ.27: ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ದಿವಾಳಿತನದಿಂದ ಹೊರಬರುವ ಪ್ರಕ್ರಿಯೆಗೊಳಗಾಗಿರುವ ಜೆಟ್ ಏರ್‌ವೇಸ್ ಇಂಡಿಯಾ ಲಿ.ಈ ಮೊದಲು ಯೋಜಿಸಿದ್ದಂತೆ ಈ ತಿಂಗಳಲ್ಲಿ ತನ್ನ ಕಾರ್ಯಾಚರಣೆಗಳನ್ನು ಪುನರಾರಂಭಿಸುವುದಿಲ್ಲ ಎಂದು ಬಲ್ಲ ಮೂಲಗಳು ತಿಳಿಸಿವೆ.

ಒಂದು ಕಾಲದಲ್ಲಿ ಭಾರತದ ಅಗ್ರ ಖಾಸಗಿ ವಿಮಾನಯಾನ ಸಂಸ್ಥೆಯಾಗಿದ್ದ ಜೆಟ್‌ನ ಸಾಲದಾತರು ವಿಮಾನ ಖರೀದಿಯಂತಹ ಯಾವುದೇ ಹೊಸ ಬಾಧ್ಯತೆಗಳನ್ನು ಹೊತ್ತುಕೊಳ್ಳಲು ಅವಕಾಶ ನೀಡಲು ಹಿಂಜರಿಯುತ್ತಿರುವುದರಿಂದ ಅದು ಸೆಪ್ಟಂಬರ್‌ನಲ್ಲಿ ಟಿಕೆಟ್‌ಗಳ ಮಾರಾಟವನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದು ಮಾತುಕತೆಗಳಲ್ಲಿ ಭಾಗಿಯಾಗಿರುವ ಮೂಲಗಳು ತಿಳಿಸಿವೆ. ಜೆಟ್ ವಿಮಾನ ತಯಾರಕರು ಮತ್ತು ಲೀಸ್ ಕಂಪೆನಿಗಳೊಂದಿಗೂ ಮಾತುಕತೆ ನಡೆಸುತ್ತಿದೆ ಎಂದು ಅವು ಹೇಳಿದವು.

ಆರಂಭಿಕ ವಿಮಾನಗಳ ಸ್ವಾಧೀನದ ಬಗ್ಗೆ ಸಂಸ್ಥೆಯ ಮಾತುಕತೆಗಳು ಅಂತಿಮ ಹಂತದಲ್ಲಿದ್ದು,ಮುಂಬರುವ ವಾರಗಳಲ್ಲಿ ಟಿಕೆಟ್ ಮಾರಾಟ ಮತ್ತು ಯಾನಗಳ ಪುನರಾರಂಭಕ್ಕೆ ಅದು ಸಜ್ಜಾಗುತ್ತಿದೆ ಎಂದು ಜೆಟ್‌ನ ನೂತನ ಮಾಲಕರ ಪ್ರತಿನಿಧಿಯೋರ್ವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಯಾವುದೇ ಅಂತಿಮ ಗಡುವಿಲ್ಲ. ದಿನಾಂಕಗಳನ್ನು ನಾವು ಮಾತ್ರ ನಿಗದಿಗೊಳಿಸುತ್ತೇವೆ ಮತ್ತು ಇದು 100 ಮೀ.ಓಟವಲ್ಲ,ಮ್ಯಾರಥಾನ್ ಆಗಿದೆ ಎಂದು ನಾವು ಸದಾ ಹೇಳುತ್ತಲೇ ಬಂದಿದ್ದೇವೆ 'ಎಂದು ಅವರು ಹೇಳಿದ್ದಾರೆ.

ಜೆಟ್ ಏರ್‌ವೇಸ್ ವಿಮಾನಗಳಿಗಾಗಿ ಬೇಡಿಕೆಗಳನ್ನು ಸಲ್ಲಿಸಲು ಯಾವುದೇ ನಿರ್ಬಂಧವಿಲ್ಲ ಮತ್ತು ಅದು ಹೊಸ ಆಸ್ತಿಗಳನ್ನು ಸೇರ್ಪಡೆಗೊಳಿಸಲು ಸ್ವತಂತ್ರವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸುಮಾರು 50 ಏರ್‌ಬಸ್ ಎಸ್‌ಇ ಎ220 ವಿಮಾನಗಳಿಗೆ ಬೇಡಿಕೆ ಸಲ್ಲಿಸಲು ಜೆಟ್ ಮಾತುಕತೆಗಳು ಮುಂದುವರಿದ ಹಂತದಲ್ಲಿವೆ. ಬೋಯಿಂಗ್ ಕಂಪೆನಿಯೊಂದಿಗೂ ಅದು ಮಾತುಕತೆ ನಡೆಸುತ್ತಿದೆ ಎಂದು ಮಾಧ್ಯಮಗಳು ಆಗಸ್ಟ್‌ನಲ್ಲಿ ವರದಿ ಮಾಡಿದ್ದವು.

2019ರಲ್ಲಿ ಸಾಲದ ಹೊರೆಯಿಂದಾಗಿ ದಿವಾಳಿಯಾಗಿದ್ದ ಜೆಟ್ ಏರ್‌ವೇಸ್‌ನ್ನು ದುಬೈನ ಉದ್ಯಮಿ ಮುರಾರಿಲಾಲ ಜಲಾನ್ ಮತ್ತು ಲಂಡನ್‌ನ ಕಾಲ್ರಾಕ್ ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಲಿ.ನ ಅಧ್ಯಕ್ಷ ಫ್ಲೋರಿಯನ್ ಫ್ರಿಷ್ಟ್ ವಹಿಸಿಕೊಳ್ಳುತ್ತಿದ್ದಾರೆ. ಈ ವರ್ಷದ ಮಾರ್ಚ್‌ನಲ್ಲಿ ಜೆಟ್‌ನ ವಿಮಾನಗಳು ಆಗಸದಲ್ಲಿ ಮತ್ತೆ ಹಾರುವಂತೆ ಮಾಡುವುದಾಗಿ ಅವರು ಪಣ ತೊಟ್ಟಿದ್ದರು,ಆದರೆ ತನ್ನ ಹಳೆಯ ವಿಮಾನಗಳನ್ನು ಇತರ ವಿಮಾನಯಾನ ಸಂಸ್ಥೆಗಳಿಗೆ ಲೀಸ್‌ಗೆ ನೀಡಿದ ಬಳಿಕ ಜೆಟ್ ಯಾವುದೇ ಹೊಸ ವಿಮಾನಗಳಿಗಾಗಿ ಬೇಡಿಕೆಯನ್ನು ಸಲ್ಲಿಸಿಲ್ಲ. ಆದಾಗ್ಯೂ ಅದು ಸಿಬ್ಬಂದಿ ನೇಮಕ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರವನ್ನು ಆರಂಭಿಸಿತ್ತು.

ಭಾರತದ ದಿವಾಳಿತನ ನ್ಯಾಯಾಲಯವು ಅ.11ರಂದು ನೂತನ ಮಾಲಕರಿಂದ ಜೆಟ್‌ಗಾಗಿ ರಕ್ಷಣೆ ಯೋಜನೆಯ ಪ್ರಗತಿಯ ಕುರಿತು ವಿಚಾರಣೆ ನಡೆಸಲಿದೆ.

## 45 ವೀಡಿಯೊಗಳನ್ನು ನಿರ್ಬಂಧಿಸಲು ಯೂಟ್ಯೂಬ್‌ಗೆ ಸೂಚಿಸಿದ ಕೇಂದ್ರ

ಹೊಸದಿಲ್ಲಿ, ಸೆ.27: ದೇಶದ ಸಾರ್ವಭೌಮತೆ, ಭದ್ರತೆ, ಜಾಗತಿಕ ಸಂಬಂಧಗಳು ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟಾಗುತ್ತದೆ ಎಂಬ ಕಾರಣ ನೀಡಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು 10 ಚಾನೆಲ್‌ಗಳ 45 ವೀಡಿಯೊಗಳನ್ನು ನಿರ್ಬಂಧಿಸುವಂತೆ ಯೂಟ್ಯೂಬ್‌ಗೆ ಸೂಚನೆ ನೀಡಿದೆ.

ಈ ವೀಡಿಯೊಗಳಲ್ಲಿ ಜನಪ್ರಿಯ ಯೂಟ್ಯೂಬರ್ ಧ್ರುವ್ ರಾಥೀ ಅವರ ''ವೈ ಇಮ್ರಾನ್ ಖಾನ್ ಲಾಸ್ಟ್? ಪೊಲಿಟಿಕಲ್ ಕ್ರೈಸಿಸ್ ಇನ್ ಪಾಕಿಸ್ತಾನ್,'' ಎಂಬ ಶೀರ್ಷಿಕೆಯ ವೀಡಿಯೊ ಕೂಡ ಸೇರಿದೆ. ಈ ವೀಡಿಯೊದಲ್ಲಿ ಭಾರತದ ಕೆಲ ಭೂಭಾಗಗಳನ್ನು ಪಾಕಿಸ್ತಾನದಲ್ಲಿರುವಂತೆ ತೋರಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

ನಿರ್ಬಂಧಿಸುವಂತೆ ಸೂಚಿಸಲಾದ ಕೆಲ ವೀಡಿಯೊಗಳು ದೇಶದಲ್ಲಿ ಕೋಮು ಸೌಹಾರ್ದ ಹಾಗೂ ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುವ ಸಾಧ್ಯತೆಯಿತ್ತು. ಕೆಲ ವೀಡಿಯೊಗಳು ಸುಳ್ಳು ಹೇಳಿಕೆಗಳನ್ನು ನೀಡಿವೆ ಹಾಗೂ ಸರಕಾರ ಕೆಲ ಸಮುದಾಯಗಳ ಧಾರ್ಮಿಕ ಹಕ್ಕುಗಳನ್ನು ಕಸಿದಿವೆ ಹಾಗೂ ನಾಗರಿಕ ಯುದ್ಧವನ್ನು ಘೋಷಿಸಿವೆ ಎಂದು ಹೇಳಿದೆ ಎಂದು ಸಚಿವಾಲಯ ಹೇಳಿದೆ.

ಗುಪ್ತಚರ ಮಾಹಿತಿಯಡಿ ಹಾಗೂ ಹೊಸ ಐಟಿ ನಿಯಮಗಳ ಅನ್ವಯ ಆದೇಶ ಹೊರಡಿಸಲಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕುರ್ ಹೇಳಿದ್ದಾರೆ.

ಕಳೆದ ವರ್ಷದಿಂದೀಚೆಗೆ ಸರಕಾರವು 78 ಸುದ್ದಿ ಚಾನೆಲ್‌ಗಳು ಹಾಗೂ 560 ಯುಆರ್‌ಎಲ್‌ಗಳನ್ನು ಯುಟ್ಯೂಬ್‌ನಲ್ಲಿ ನಿಷೇಧಿಸಿದೆ.

ಮೊದಲನೇ ಪುಟದಿಂದ...

## ಫಾಲ್ಕೆ ಪುರಸ್ಕಾರ

ಆಶಾ ಭೋಂಸ್ಲೆ, ಹೇಮಾಮಾಲಿನಿ, ಪೂನಂ ಧಿಲ್ಲೋನ್, ಉದಿತ್ ನಾರಾಯಣ್ ಹಾಗೂ ಟಿ.ಎಸ್. ನಾಗಾಭರಣ ಅವರನ್ನೊಳಗೊಂಡ ಐವರು ಸದಸ್ಯರ ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರ ಸಮಿತಿಯು ಆಶಾ ಪಾರೇಖ್ ಅವರನ್ನು ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಠಾಕೂರ್ ತಿಳಿಸಿದ್ದಾರೆ.

79 ವರ್ಷದ ಆಶಾ ಪಾರೇಖ್ ಅವರು ನಟಿಯಾಗಿ ಐದು ದಶಕಗಳಿಗೂ ಹೆಚ್ಚು ಕಾಲ ಚಿತ್ರರಂಗದಲ್ಲಿ ಮಿಂಚಿದ್ದಾರೆ. ಮುಂಬೈನಲ್ಲಿ ಗುಜರಾತಿ ಕುಟುಂಬವೊಂದರಲ್ಲಿ 1942ರ ಅಕ್ಟೋಬರ್ 2ರಂದು ಜನಿಸಿದ ಆಶಾ ಪಾರೇಖ್ ಅವರು 10ನೇ ವರ್ಷದಲ್ಲಿ ಚಿತ್ರರಂಗವನ್ನು ಪ್ರವೇಶಿಸಿದ್ದರು. ಈವರೆಗೆ 95ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿದ್ದಾರೆ.

ದಿಲ್ ದೇಖೆ ದೇಖೋ, ಕಟಿ ಪತಂಗ್, ತೀಸ್ರಿ ಮಂಝಿಲ್, ಬಹಾರೋಂ ಕೆ ಸಪ್ನೆ, ಪ್ಯಾರ್ ಕಾ ಮೌಸಮ್ ಹಾಗೂ ಕಾರವಾನ್ ಸೇರಿದಂತೆ 95ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದರು. ಕನ್ನಡದ ಶರವೇಗದ ಸರದಾರ ಚಿತ್ರದಲ್ಲಿಯೂ ನಟಿಸಿದ್ದರು. 1952ನೇ ಇಸವಿಯಲ್ಲಿ ಆಸ್ಮಾನ್ ಚಿತ್ರದ ಮೂಲಕ ಬಾಲನಟಿಯಾಗಿ ಚಿತ್ರರಂಗಕ್ಕೆ ಪದಾರ್ಪಣೆಗೈದಿದ್ದರು.

1959ರಲ್ಲಿ ಬಿಡುಗಡೆಯಾದ ನಾಸೀರ್ ಹುಸೇನ್ ನಿರ್ದೇಶನದ ದಿಲ್ ದೇಖೇ ದೇಖೋ ಆಕೆ ನಾಯಕಿಯಾಗಿ ನಟಿಸಿದ ಮೊದಲ ಚಿತ್ರವಾಗಿತ್ತು.

1990ರ ದಶಕದಲ್ಲಿ ಆಶಾ ಪಾರೇಖ್ ಟಿವಿ ಧಾರಾವಾಹಿ ಕೋರಾಕಾಗಝ್ ಅನ್ನು ನಿರ್ದೇಶಿಸುವ ಮೂಲಕ ನಿರ್ದೇಶಕಿಯಾಗಿಯೂ ಹೆಸರು ಮಾಡಿದ್ದರು. 1998-2011ರವರೆಗೆ ಭಾರತೀಯ ಚಲನಚಿತ್ರ ಸೆನ್ಸಾರ್ ಮಂಡಳಿಯ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ್ದರು.

ಸಿನೆಮಾರಂಗಕ್ಕೆ ಆಶಾಪಾರೇಖ್ ಅವರ ಅಪೂರ್ವ ಸೇವೆಯನ್ನು ಪರಿಗಣಿಸಿ 1992ರಲ್ಲಿ ಭಾರತ ಸರಕಾರ ಅವರಿಗೆ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿತ್ತು.

## ವೀಕ್ಷಕರ ಶಿಫಾರಸು

ಗೆಹ್ಲೋಟ್ ಅವರನ್ನು ಪದಚ್ಯುತಗೊಳಿಸಿ, ಸಚಿನ್ ಪೈಲಟ್ ಅವರನ್ನು ಮುಖ್ಯಮಂತ್ರಿ ಮಾಡಲು, ಕಾಂಗ್ರೆಸ್‌ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕನ್ ಸಂಚು ಹೂಡಿದ್ದಾರೆಂದು, ಗೆಹ್ಲೋಟ್ ನಿಷ್ಠರು ಸೋಮವಾರ ತೀವ್ರ ವಾಗ್ದಾಳಿ ನಡೆಸಿದ್ದರು.

ಆದಾಗ್ಯೂ ಪೈಲಟ್ ಬಣವು ಸದ್ಯದ ಬೆಳವಣಿಗೆಗಳ ಬಗ್ಗೆ ಮೌನ ವಹಿಸಿದ್ದು, ಕಾಂಗ್ರೆಸ್ ಹೈಕಮಾಂಡ್‌ನ ನಿರ್ಧಾರಕ್ಕಾಗಿ ಕಾಯುತ್ತಿದೆ ಎನ್ನಲಾಗಿದೆ.

ಗೆಹ್ಲೋಟ್‌ಗೆ 90 ಶಾಸಕರ ಬೆಂಬಲವಿರುವುದಾಗಿ ಅವರ ನಿಷ್ಠರು ಹೇಳಿಕೊಂಡಿದ್ದಾರೆ. ಆದರೆ ಪೈಲಟ್ ಬೆಂಬಲಿಗರು ಅದನ್ನು ತಳ್ಳಿಹಾಕಿದ್ದಾರೆ. ಅಲ್ಲದೆ ಗೆಹ್ಲೋಟ್ ಬಣದೊಂದಿಗೆ ಗುರುತಿಸಿಕೊಂಡಿದ್ದ ಹಲವು ಶಾಸಕರಿಗೆ ಪಕ್ಷದ ಶಾಸಕರ ಸಭೆ ನಡೆಯುವ ಸ್ಥಳ ಮತ್ತು ಸಮಯದ ಬಗ್ಗೆ ತಪ್ಪು ಮಾಹಿತಿ ನೀಡಲಾಗಿತ್ತು ಮತ್ತು ಶಾಸಕರ ಸಂಖ್ಯಾಬಲವನ್ನು ತೋರಿಸುವ ಉದ್ದೇಶದಿಂದ ಗೆಹ್ಲೋಟ್ ಬೆಂಬಲಿಗ ಧರಿವಾಲ್ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗಿತ್ತು ಎಂದು ಹೇಳಿದ್ದಾರೆ.

## 'ವಿಜ್ಞಾನ ರತ್ನ'ಕ್ಕೆ ಕೇಂದ್ರದ ಚಿಂತನೆ

ಉನ್ನತ ಮಟ್ಟದ ಶಾಂತಿಸ್ವರೂಪ ಭಟ್ನಾಗರ್ ಪ್ರಶಸ್ತಿಗಳ ನೀಡಿಕೆಯನ್ನು ಮುಂದುವರಿಸು ವಂತೆ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್)ಗೆ ಸೂಚಿಸಿರುವ ಭಲ್ಲಾ,ಆದರೆ ಪ್ರಶಸ್ತಿ ಪುರಸ್ಕೃತರಿಗೆ ಮಾಸಿಕ 15,000 ರೂ.ಗೌರವಧನವನ್ನು 15 ವರ್ಷಗಳಿಗೆ ಸೀಮಿತಗೊಳಿಸುವಂತೆ ತಿಳಿಸಿದ್ದಾರೆ.

ಎಲ್ಲ ಖಾಸಗಿ ದತ್ತಿ,ಉಪನ್ಯಾಸ/ಸ್ಕಾಲರ್‌ಶಿಪ್/ಫೆಲೋಶಿಪ್ ಮತ್ತು ಆಂತರಿಕ ಪ್ರಶಸ್ತಿಗಳನ್ನು ಮುಂದುವರಿಸದಂತೆ 200ಕ್ಕೂ ಅಧಿಕ ಪ್ರಶಸ್ತಿಗಳನ್ನು ನೀಡುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸೂಚಿಸಲಾಗಿದೆ. ಪೂರ್ಣ ಸಮರ್ಥನೆ ಮತ್ತು ಸೂಕ್ತ ಗೌರವಧನದೊಂದಿಗೆ ಸ್ಕಾಲರ್‌ಶಿಪ್/ಫೆಲೋಶಿಪ್‌ಗಳ ವಿತರಣೆಗಾಗಿ ಹೊಸ ಯೋಜನೆಯನ್ನು ಆರಂಭಿಸುವಂತೆ ಮತ್ತು ಆಂತರಿಕ ಪ್ರಶಸ್ತಿಗಳನ್ನು ಈ ಯೋಜನೆಯಲ್ಲಿ ವಿಲೀನಗೊಳಿಸುವಂತೆಯೂ ಅದಕ್ಕೆ ತಿಳಿಸಲಾಗಿದೆ.

ಎಲ್ಲ ಸಚಿವಾಲಯಗಳು ನೀಡುತ್ತಿರುವ ಪ್ರಶಸ್ತಿಗಳನ್ನು ತರ್ಕಬದ್ಧಗೊಳಿಸುವಂತೆ ಗೃಹ ಕಾರ್ಯದರ್ಶಿಗಳು ಕಳೆದ ಮೇ ತಿಂಗಳಿನಲ್ಲಿ ಅವುಗಳಿಗೆ ಸೂಚಿಸಿದ್ದರು.

ಪ್ರತೀ ವರ್ಷ 51 ನರ್ಸ್‌ಗಳಿಗೆ ನೀಡಲಾಗುತ್ತಿರುವ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಗಳ ಸಂಖ್ಯೆಗೆ ಮಿತಿ ಹೇರುವಂತೆ ಮತ್ತು ಬಿ.ಸಿರಾಯ್ ಪ್ರಶಸ್ತಿ ಸೇರಿದಂತೆ ರಾಷ್ಟ್ರೀಯ ವೈದ್ಯಕೀಯ ಮಂಡಳಿಯು ನೀಡುತ್ತಿರುವ ಮೂರು ಪ್ರಶಸ್ತಿಗಳನ್ನು ಮರುಪರಿಶೀಲಿಸಿ ಅತ್ಯುನ್ನತ ಮಟ್ಟದ ಹೊಸ ಪ್ರಶಸ್ತಿಯನ್ನು ಸ್ಥಾಪಿಸುವಂತೆ ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ.

32 ದತ್ತಿ ಪ್ರಶಸ್ತಿಗಳು ಸೇರಿದಂತೆ 37 ಪ್ರಶಸ್ತಿಗಳನ್ನು ರದ್ದುಗೊಳಿಸುವಂತೆ ಆರೋಗ್ಯ ಸಂಶೋಧನೆ ಇಲಾಖೆಗೆ ಸೂಚಿಸಿರುವ ಗೃಹ ಕಾರ್ಯದರ್ಶಿಗಳು ಕಲ್ಕತ್ತಾ ನ್ಯಾಷನಲ್ ಮೆಡಿಕಲ್ ಕಾಲೇಜಿನ ಅಲ್ಪಾವಧಿಯ ಸ್ಟೂಡೆಂಟ್‌ಶಿಪ್ ಎಕ್ಸ್ ಲನ್ಸ್ ಅವಾರ್ಡ್‌ನ್ನು ಸಂಶೋಧನಾ ಅನುದಾನವನ್ನಾಗಿ ಪರಿವರ್ತಿಸುವಂತೆ ಸೂಚಿಸಿದ್ದಾರೆ.

ಅಸ್ತಿತ್ವದಲ್ಲಿರುವ ಹಾಲಿ ಪ್ರಶಸ್ತಿಗಳನ್ನು ರದ್ದುಗೊಳಿಸಿ ಉನ್ನತ ಮಟ್ಟದ ಹೊಸ ಪ್ರಶಸ್ತಿಗಳನ್ನು ಸ್ಥಾಪಿಸುವಂತೆ ಭೂ ವಿಜ್ಞಾನಗಳ ಸಚಿವಾಲಯ, ಬಾಹ್ಯಾಕಾಶ ಇಲಾಖೆ ಮತ್ತು ಅಣುಶಕ್ತಿ ಇಲಾಖೆಗೆ ಸೂಚಿಸಲಾಗಿದೆ.

ಈ ಸಂಬಂಧ ಪುನರ್‌ಪರಿಶೀಲನಾ ಸಭೆಯನ್ನು ಪ್ರಧಾನಿ ಕಚೇರಿಯು ಶೀಘ್ರ ನಡೆಸಲಿದೆ ಎಂದು ಗೃಹ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಭಾರತ, ಪಾಕಿಸ್ತಾನ ಭಿನ್ನ ಮಹತ್ವಗಳನ್ನು ಹೊಂದಿರುವ ಭಾಗೀದಾರರು

## ಅಮೆರಿಕ

ವಾಶಿಂಗ್ಟನ್, ಸೆ. 27: ಭಾರತ ಮತ್ತು ಪಾಕಿಸ್ತಾನಗಳೆರಡೂ ಭಿನ್ನ ಮಹತ್ವಗಳನ್ನು ಹೊಂದಿರುವ ಅಮೆರಿಕದ ಭಾಗೀದಾರರು ಎಂದು ಅಮೆರಿಕ ಸರಕಾರ ಸೋಮವಾರ ಹೇಳಿದೆ. ಪಾಕಿಸ್ತಾನಕ್ಕೆ ಎಫ್-16 ಯುದ್ಧ ವಿಮಾನಗಳನ್ನು ನೀಡುವ ಹಿಂದಿನ ಔಚಿತ್ಯವನ್ನು ಅಮೆರಿಕ ಪ್ರವಾಸದಲ್ಲಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಪ್ರಶ್ನಿಸಿದ ಒಂದು ದಿನದ ಬಳಿಕ ಅಮೆರಿಕ ಈ ಪ್ರತಿಕ್ರಿಯೆ ನೀಡಿದೆ.




ಪಾಕಿಸ್ತಾನಕ್ಕೆ ನೀಡುತ್ತಿರುವ ಎಫ್-16 ನಿರ್ವಹಣಾ ನೆರವು ಭಯೋತ್ಪಾದನೆಯ ವಿರುದ್ಧ ಹೋರಾಡುವುದಕ್ಕಾಗಿ ಎಂಬ ಅಮೆರಿಕದ ವಾದವನ್ನು ಉಲ್ಲೇಖಿಸಿದ ಜೈಶಂಕರ್, ಎಫ್-16 ಯುದ್ಧ ವಿಮಾನ ಗಳನ್ನು ಎಲ್ಲಿ ಮತ್ತು ಯಾರ ವಿರುದ್ಧ ಬಳಸಲಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ ಎಂದು ಹೇಳಿದ್ದರು. ''ಇಂಥ ವಿಷಯಗಳನ್ನು ಹೇಳಿ ನೀವು ಯಾರನ್ನೂ ಮೂರ್ಖರನ್ನಾಗಿಸಲು ಸಾಧ್ಯವಿಲ್ಲ'' ಎಂದು ಭಾರತೀಯ-ಅಮೆರಿಕನ್ನರೊಂದಿಗಿನ ಸಂವಾದದ ವೇಳೆ ಕೇಳಲಾದ ಪ್ರಶ್ನೆಯೊಂದಕ್ಕೆ ಅವರು ಉತ್ತರಿಸುತ್ತಿದ್ದರು.





''ಪಾಕಿಸ್ತಾನದೊಂದಿಗಿನ ನಮ್ಮ ಸಂಬಂಧ ಮತ್ತು ಇನ್ನೊಂದೆಡೆ ಭಾರತದೊಂದಿಗಿನ ನಮ್ಮ ಸಂಬಂಧವು ಪರಸ್ಪರ ನಂಟು ಹೊಂದಿವೆ ಎಂಬುದಾಗಿ ನಾವು ಪರಿಗಣಿಸುವುದಿಲ್ಲ. ಈ ಎರಡೂ ದೇಶಗಳು ವಿಭಿನ್ನ ಮಹತ್ವಗಳನ್ನು ಹೊಂದಿರುವ ನಮ್ಮ ಭಾಗೀದಾರರು'' ಎಂದು ಅಮೆರಿಕದ ವಿದೇಶ ಇಲಾಖೆಯ ವಕ್ತಾರ ನೆಡ್ ಪ್ರೈಸ್ ದೈನಂದಿನ ಸುದ್ದಿಗೋಷ್ಠಿಯಲ್ಲಿ ಹೇಳಿದರು.

''ನಾವು ಈ ಎರಡೂ ದೇಶಗಳನ್ನು ಭಾಗೀದಾರರು ಎಂಬುದಾಗಿ ನೋಡುತ್ತೇವೆ. ಯಾಕೆಂದರೆ, ಹಲವು ವಿಷಯಗಳಲ್ಲಿ ನಾವು ಈ ದೇಶಗಳೊಂದಿಗೆ ಪರಸ್ಪರ ಪೂರಕ ಹಿತಾಸಕ್ತಿಗಳನ್ನು ಹೊಂದಿದ್ದೇವೆ. ಭಾರತದೊಂದಿಗೆ ನಾವು ಹೊಂದಿರುವ ಸಂಬಂಧಕ್ಕೆ ಅದರದೇ ಆದ ಮಹತ್ವವಿದೆ. ಅದೇ ರೀತಿ, ಪಾಕಿಸ್ತಾನದೊಂದಿಗೆ ನಾವು ಹೊಂದಿರುವ ಸಂಬಂಧಕ್ಕೂ ಅದರದೇ ಆದ ಮಹತ್ವವಿದೆ'' ಎಂದು ಅವರು ಹೇಳಿದರು.

ಎಫ್-16 ಯುದ್ಧ ವಿಮಾನಗಳ ನಿರ್ವಹಣೆಗಾಗಿ ಪಾಕಿಸ್ತಾನಕ್ಕೆ 450 ಮಿಲಿಯ ಡಾಲರ್ (ಸುಮಾರು 3,670 ಕೋಟಿ ರೂಪಾಯಿ) ನೆರವು ನೀಡುವ ನಿರ್ಧಾರವನ್ನು ಅಮೆರಿಕದ ಬೈಡನ್ ಸರಕಾರವು ಈ ತಿಂಗಳ ಆರಂಭದಲ್ಲಿ ಘೋಷಿಸಿತ್ತು. ಅಫ್ಘಾನ್ ತಾಲಿಬಾನ್ ಮತ್ತು ಹಕ್ಕಾನಿ ನೆಟ್‌ವರ್ಕ್ ಸಂಘಟನೆಗಳಿಗೆ ಸುರಕ್ಷಿತ ಆಶ್ರಯ ಒದಗಿಸಿರುವುದಕ್ಕಾಗಿ ಹಿಂದಿನ ಟ್ರಂಪ್ ಸರಕಾರವು ಪಾಕಿಸ್ತಾನಕ್ಕೆ ನೀಡುವ ಸೇನಾ ನೆರವನ್ನು ಸ್ಥಗಿತಗೊಳಿಸಿತ್ತು.

# ಬಾಹ್ಯಾಕಾಶ ನೌಕೆಯನ್ನು ಕ್ಷುದ್ರಗ್ರಹಕ್ಕೆ ಅಪ್ಪಳಿಸಿದ ನಾಸಾ




ಕ್ಯಾಲಿಫೋರ್ನಿಯ, ಸೆ. 27: ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ನಾಸಾ)ಯ ಬಾಹ್ಯಾಕಾಶ ನೌಕೆಯೊಂದು ಭೂಮಿಯಿಂದ 1.09 ಕೋಟಿ ಕಿ.ಮೀ. ದೂರದಲ್ಲಿರುವ ಕ್ಷುದ್ರಗ್ರಹವೊಂದಕ್ಕೆ ಅಪ್ಪಳಿಸಿದೆ. ಇಂಥ ಢಿಕ್ಕಿಗಳ ಮೂಲಕ ಬೃಹತ್ ಬಾಹ್ಯಾಕಾಶ ಬಂಡೆಗಳನ್ನು ಅವುಗಳ ಪಥದಿಂದ ಸ್ವಲ್ಪವಾದರೂ ಹೊರಕ್ಕೆ ದೂಡಲು ಸಾಧ್ಯವಾಗಬಹುದೇ ಎನ್ನುವುದನ್ನು ಪರೀಕ್ಷಿಸುವುದಕ್ಕಾಗಿ ನಾಸಾ ಈ ಪ್ರಯೋಗವನ್ನು ಮಾಡಿದೆ.

ಫುಟ್ಬಾಲ್ ಮೈದಾನದಷ್ಟು ಗಾತ್ರದ ಕ್ಷುದ್ರ ಗ್ರಹವೊಂದಕ್ಕೆ ಗಂಟೆಗೆ 22,530 ಕಿ.ಮೀ. ವೇಗದಲ್ಲಿ ಢಿಕ್ಕಿ ಹೊಡೆಸುವ ನಿರ್ದಿಷ್ಟ ಉದ್ದೇಶಕ್ಕಾಗಿಯೇ ನಾಸಾವು ತನ್ನ 'ಡಾರ್ಟ್' ಬಾಹ್ಯಾಕಾಶ ನೌಕೆಯನ್ನು 2021 ನವೆಂಬರ್‌ನಲ್ಲಿ ಉಡಾಯಿಸಿತ್ತು.

ಕ್ಷುದ್ರಗ್ರಹಗಳು ಅಪಾಯಕಾರಿ ರೀತಿಯಲ್ಲಿ ಅಪ್ಪಳಿಸುವ ಸಾಧ್ಯತೆಗಳಿಂದ ಭೂಮಿಯನ್ನು ರಕ್ಷಿಸುವ ನಿಟ್ಟಿನಲ್ಲಿ ನಾಸಾ ನಡೆಸಿದ ಮೊದಲ ಪ್ರಯೋಗ ಇದಾಗಿದೆ. 'ಡಿಮೊರ್‌ಫೋಸ್' ಎಂಬ ಈ ನಿರ್ದಿಷ್ಟ ಕ್ಷುದ್ರಗ್ರಹವು ಭೂಮಿಯತ್ತ ಧಾವಿಸುತ್ತಿರಲಿಲ್ಲ. ಕ್ಷುದ್ರಗ್ರಹವೊಂದರ ಮೇಲೆ ಪಥ ವಿಮುಖ ಪ್ರಯೋಗವನ್ನು ಮಾಡುವುದಕ್ಕಾಗಿ ಅದನ್ನು ನಾಸಾವು ಆರಿಸಿತು. ಅಳತೆಗಳಲ್ಲಿ ಕ್ಷುದ್ರಗ್ರಹದ ಪಥವು ಸ್ವಲ್ಪವಾದರೂ ಬದಲಾವಣೆಯಾಗಿರುವುದು ಪತ್ತೆಯಾದರೆ, ಈ ಯೋಜನೆ ಯಶಸ್ವಿಯಾಗಿದೆ ಎಂಬುದಾಗಿ ನಾಸಾ ಭಾವಿಸುತ್ತದೆ.

ಈ ಅಳತೆ ಪೂರ್ಣಗೊಳ್ಳಲು ದಿನಗಳು ಅಥವಾ ವಾರಗಳೇ ಬೇಕಾಗಬಹುದು. ಢಿಕ್ಕಿ ಹೊಡೆಯುವ ಕ್ಷಣಗಳ ಮೊದಲು, ಬಾಹ್ಯಾಕಾಶ ನೌಕೆಯಲ್ಲಿದ್ದ ಕ್ಯಾಮರವೊಂದು ಕ್ಷುದ್ರಗ್ರಹದ ಚಿತ್ರವನ್ನು ಹತ್ತಿರದಿಂದ ಸೆರೆಹಿಡಿದಿದೆ. ಚಿತ್ರವು ಕ್ಷುದ್ರಗ್ರಹದಲ್ಲಿರುವ ಬಂಡೆಗಲ್ಲುಗಳನ್ನು ಅತ್ಯಂತ ಹತ್ತಿರದಿಂದ ಸೆರೆಹಿಡಿದಿದೆ. ಬಳಿಕ ನಾಸಾವು ನೌಕೆಯೊಂದಿಗಿನ ಸಂಪರ್ಕವನ್ನು ಕಳೆದುಕೊಂಡಿತು.

# ರಶ್ಯದ ಪರಮಾಣು ಬೆದರಿಕೆ ಖಂಡಿತ ಹುಸಿಯಲ್ಲ

## ಮಾಜಿ ಅಧ್ಯಕ್ಷ ಎಚ್ಚರಿಕೆ

ಮಾಸ್ಕೊ (ರಶ್ಯ), ಸೆ. 27: ರಶ್ಯದ ವಿರುದ್ಧದ ಆಕ್ರಮಣಗಳು ಮಿತಿ ಮೀರಿದರೆ ಪರಮಾಣು ಅಸ್ತ್ರಗಳನ್ನು ಬಳಸಿಯಾದರೂ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕು ಅದಕ್ಕಿದೆ ಎಂದು ರಶ್ಯದ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ಮಂಗಳವಾರ ಹೇಳಿದ್ದಾರೆ ಹಾಗೂ ''ಇದು ಖಂಡಿತವಾಗಿಯೂ ಹುಸಿ ಬೆದರಿಕೆಯಲ್ಲ'' ಎಂದಿದ್ದಾರೆ.




ಹೆಚ್ಚಿನ ಸಮಾಲೋಚನೆಯಿಲ್ಲದೆಯೇ ಪ್ರತಿಕ್ರಿಯಿಸುವ ಹಕ್ಕನ್ನು ರಶ್ಯ ಹೊಂದಿದೆ ಎಂದು ರಶ್ಯದ ಭದ್ರತಾ ಮಂಡಳಿಯ ಉಪಾಧ್ಯಕ್ಷರೂ ಆಗಿರುವ ಮೆಡ್ವೆಡೆವ್ ಹೇಳಿದರು.

ರಶ್ಯ ಅತಿಕ್ರಮಿಸಿಕೊಂಡಿರುವ ಉಕ್ರೇನ್ ಭೂಭಾಗದ ಹೆಚ್ಚಿನ ಪ್ರದೇಶಗಳಲ್ಲಿ ಜನಮತಗಣನೆ ನಡೆಸುವ ರಶ್ಯದ ನಿರ್ಧಾರದ ಬಗ್ಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಉದ್ವಿಗ್ನತೆ ಹೆಚ್ಚಿರುವಂತೆಯೇ ಮೆಡ್ವೆಡೆವ್ ಈ ಎಚ್ಚರಿಕೆಯನ್ನು ನೀಡಿದ್ದಾರೆ.

# ಶಿಂಝೊ ಅಬೆಗೆ ಶ್ರದ್ಧಾಂಜಲಿ ಸಲ್ಲಿಸಿದ ಮೋದಿ, ವಿಶ್ವ ನಾಯಕರು



ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಟೋಕಿಯೊದಲ್ಲಿ ಜಪಾನ್‌ನ ಮಾಜಿ ಪ್ರಧಾನಿ ಶಿಂಝೊ ಅಬೆಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಟೋಕಿಯೊ, ಸೆ. 27: ಎರಡೂವರೆ ತಿಂಗಳ ಹಿಂದೆ ಹತ್ಯೆಗೊಳಗಾಗಿರುವ ಜಪಾನ್‌ನ ಮಾಜಿ ಪ್ರಧಾನಿ ಶಿಂಝೊ ಅಬೆ ಅವರ ಅಂತ್ಯ ಸಂಸ್ಕಾರ ಮಂಗಳವಾರ ಸರಕಾರಿ ಗೌರವಗಳೊಂದಿಗೆ ನಡೆಯಿತು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ವಿಶ್ವ ನಾಯಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಶ್ರದ್ಧಾಂಜಲಿ ಸಲ್ಲಿಸಿದರು. ಮೋದಿ ಜಪಾನ್‌ನ ಮಾಜಿ ನಾಯಕನಿಗೆ ಪುಷ್ಪಾಂಜಲಿ ಅರ್ಪಿಸಿದರು.

ಶಿಂಝೊ ಅಬೆ ಅವರ ಪತ್ನಿ ಅಕೀ ಕಪ್ಪು ಕಿಮೋನೊ ಧರಿಸಿ ತನ್ನ ಗಂಡನ ಚಿತಾಭಸ್ಮವಿರುವ ಕರಂಡಿಗೆಯನ್ನು ಟೋಕಿಯೊದ ಬುಡೊಕಾನ್ ಸಭಾಂಗಣಕ್ಕೆ ಹೊತ್ತುಕೊಂಡು ಸಾಗಿದರು. ಸಭಾಂಗಣದಲ್ಲಿ ಸಾವಿರಾರು ಮಂದಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ 19 ಕುಶಾಲ ತೋಪುಗಳನ್ನು ಸಿಡಿಸಲಾಯಿತು. ಪ್ರಧಾನಿ ಮೋದಿ ಮಂಗಳವಾರ ಜಪಾನ್ ಪ್ರಧಾನಿ ಫುಮಿಯೊ ಕಿಶಿಡ ಅವರನ್ನು ಭೇಟಿಯಾದರು.

67 ವರ್ಷದ ಅಬೆ ಜಪಾನ್‌ನ ಅತಿ ದೀರ್ಘಾವಧಿ ಸೇವೆ ಸಲ್ಲಿಸಿದ ಪ್ರಧಾನಿಯಾಗಿದ್ದರು. ಜುಲೈ 8ರಂದು ದಕ್ಷಿಣದ ನಗರ ನಾರದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಿದ್ದಾಗ ವ್ಯಕ್ತಿಯೊಬ್ಬನು ಅವರ ಮೇಲೆ ಗುಂಡು ಹಾರಿಸಿ ಹತ್ಯೆಗೈದಿದ್ದನು.

ಆಸ್ಟ್ರೇಲಿಯ ಪ್ರಧಾನಿ ಆ್ಯಂಟನಿ ಅಲ್ಬಾನೀಸ್, ಜಪಾನ್‌ನ ಯುವರಾಜ ಅಕಿಶಿನೊ, ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹಾಗೂ ಇತರ ನಾಯಕರು ಉಪಸ್ಥಿತರಿದ್ದರು.

### ವಿವಾದಾಸ್ಪದ ಅಂತ್ಯ ಸಂಸ್ಕಾರ

ಜಪಾನ್ ಮಾಜಿ ಪ್ರಧಾನಿ ಶಿಂಝೊ ಅಬೆಯ ಅಂತ್ಯ ಸಂಸ್ಕಾರ ವಿವಾದಕ್ಕೀಡಾಗಿದೆ. ಅಂತ್ಯ ಸಂಸ್ಕಾರಕ್ಕಾಗಿ ಸರಕಾರ ಮಾಡುತ್ತಿರುವ ಅಗಾಧ ಖರ್ಚಿಗೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ್ದಾರೆ. ಅದೂ ಅಲ್ಲದೆ, ಸರಕಾರಿ ಅಂತ್ಯಸಂಸ್ಕಾರವನ್ನು ರಾಜ ಕುಟುಂಬದವರಿಗೆ ಮೀಸಲಿರಿಸಲಾಗಿದೆ. ರಾಜಕಾರಣಿಯೊಬ್ಬರಿಗೆ ಸರಕಾರಿ ಅಂತ್ಯಸಂಸ್ಕಾರ ಮಾಡುತ್ತಿರುವುದು ಜಪಾನ್ ಇತಿಹಾಸದಲ್ಲಿ ಇದು ಎರಡನೇ ಬಾರಿಯಾಗಿದೆ. ಇಂಥ ಮೊದಲ ಪ್ರಕರಣ ದಶಕಗಳ ಹಿಂದೆ ನಡೆದಿತ್ತು. ಸುಮಾರು 60 ಶೇಕಡ ಜಪಾನೀಯರು ಈ ದುಂದುವೆಚ್ಚದ ಅಂತ್ಯಸಂಸ್ಕಾರವನ್ನು ವಿರೋಧಿಸುತ್ತಿದ್ದಾರೆ ಎಂದು ಇತ್ತೀಚಿನ ಸಮೀಕ್ಷೆಗಳು ಹೇಳಿವೆ.

# ರಶ್ಯ ಸೆರೆ ಹಿಡಿದ ಸೈನಿಕನ ಮೊದಲ, ನಂತರದ ಆಘಾತಕಾರಿ ಚಿತ್ರಗಳನ್ನು ಬಿಡುಗಡೆ ಮಾಡಿದ ಉಕ್ರೇನ್




ಕೀವ್ (ಉಕ್ರೇನ್), ಸೆ. 27: ರಶ್ಯದ ಬಂಧನದಲ್ಲಿದ್ದು ಬದುಕಿ ಬಂದ ಉಕ್ರೇನ್‌ನ ಸೈನಿಕರೊಬ್ಬರ ಆಘಾತಕಾರಿ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ. ಉಕ್ರೇನ್ ರಕ್ಷಣಾ ಸಚಿವಾಲಯವು ಮಿಖೈಲೊ ಡಿಯಾನೊವ್‌ರ ಚಿತ್ರಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದೆ. ಮುಖ ಮತ್ತು ಕೈಗಳಲ್ಲಿ ಗಾಯಗಳನ್ನು ಹೊಂದಿರುವ ಹಾಗೂ ದೈಹಿಕವಾಗಿ ಅತ್ಯಂತ ಕ್ಷೀಣವಾಗಿರುವ ಈ ಸೈನಿಕ ಬದುಕಿ ಬಂದದ್ದೇ ಪವಾಡ ಎಂದು ಅದು ಹೇಳಿದೆ.

''ಉಕ್ರೇನ್ ಸೈನಿಕ ಮಿಖೈಲೊ ಡಿಯಾನೊವ್ ಅದೃಷ್ಟವಂತರ ಪೈಕಿ ಒಬ್ಬರು. ಅವರ ಇತರ ಸಹ ಯುದ್ಧ ಕೈದಿಗಳಿಗೆ ಹೋಲಿಸಿದರೆ ಅವರು ಅದೃಷ್ಟವಂತರು. ಅವರು ರಶ್ಯದ ಸೆರೆಯಿಂದ ಜೀವಂತವಾಗಿ ಹೊರಬಂದಿದ್ದಾರೆ'' ಎಂಬುದಾಗಿ ರಕ್ಷಣಾ ಸಚಿವಾಲಯವು ಚಿತ್ರಕ್ಕೆ ವಿವರಣೆಯನ್ನು ನೀಡಿದೆ. ''ಜಿನೀವಾ ಒಪ್ಪಂದವನ್ನು ರಶ್ಯ ಅನುಸರಿಸುವುದು ಹೀಗೆ. ರಶ್ಯವು ಹೀಗೆ ಅನಾಗರಿಕ ನಾಝಿ ಪರಂಪರೆಯನ್ನು ಮುಂದುವರಿಸುತ್ತಿದೆ'' ಎಂದು ಅದು ಹೇಳಿದೆ.

ಈ ಸೈನಿಕನನ್ನು ರಶ್ಯವು ಈ ವರ್ಷದ ಆದಿ ಭಾಗದಲ್ಲಿ ಮರಿಯುಪೋಲ್‌ನಲ್ಲಿ ಬಂಧಿಸಿತ್ತು. ರಶ್ಯವು ಕಳೆದ ಬುಧವಾರ ಬಿಡುಗಡೆಗೊಳಿಸಿದ 205 ಉಕ್ರೇನ್ ಯುದ್ಧ ಕೈದಿಗಳ ಪೈಕಿ ಅವರು ಒಬ್ಬರಾಗಿದ್ದಾರೆ.

# ಆರ್ಥಿಕ ಕುಸಿತದತ್ತ ಸಾಗುತ್ತಿರುವ ಜಗತ್ತು: ಡಬ್ಲ್ಯುಟಿಒ ಮುಖ್ಯಸ್ಥೆ

ಜಿನೀವಾ (ಸ್ವಿಟ್ಸರ್‌ಲ್ಯಾಂಡ್), ಸೆ. 27: ಹಲವಾರು ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ಜಗತ್ತು ಆರ್ಥಿಕ ಕುಸಿತದತ್ತ ಸಾಗುತ್ತಿದೆ ಎಂದು ನನಗನಿಸುತ್ತದೆ ಎಂದು ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ)ಯ ಮಹಾನಿರ್ದೇಶಕಿ ನಗೋಝಿ ಒಕೊಂಜೊ-ಇವೀಲಾ ಮಂಗಳವಾರ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ, ಆರ್ಥಿಕ ಬೆಳವಣಿಗೆಗೆ ಪುನಶ್ಚೇತನ ನೀಡಲು ಕ್ರಾಂತಿಕಾರಿ ನೀತಿಗಳನ್ನು ಜಾರಿಗೆ ತರುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.




ಉಕ್ರೇನ್ ವಿರುದ್ಧ ರಶ್ಯ ನಡೆಸುತ್ತಿರುವ ಯುದ್ಧ, ಹವಾಮಾನ ಬಿಕ್ಕಟ್ಟು, ಆಹಾರ ಬೆಲೆ ಹೆಚ್ಚಳ ಮತ್ತು ನಶಿಸುತ್ತಿರುವ ಇಂಧನ ಮೂಲಗಳು ಹಾಗೂ ಕೋವಿಡ್-19 ಸಾಂಕ್ರಾಮಿಕದ ಪರಿಣಾಮಗಳು ಜಾಗತಿಕ ಆರ್ಥಿಕ ಕುಸಿತಕ್ಕೆ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿವೆ ಎಂದು ಅವರು ಹೇಳಿದರು.

''ಧಾವಿಸುತ್ತಿರುವ ಆರ್ಥಿಕ ಕುಸಿತವನ್ನು ಎದುರಿಸಲು ನಾವು ಸಿದ್ಧತೆಗಳನ್ನು ಮಾಡಬೇಕಾಗಿದೆ'' ಎಂದು ಜಿನೀವಾದಲ್ಲಿ ನಡೆದ ವಿಶ್ವ ವ್ಯಾಪಾರ ಸಂಘಟನೆಯ ವಾರ್ಷಿಕ ಸಾರ್ವಜನಿಕ ಸಮಾವೇಶವನ್ನು ಉದ್ಘಾಟಿಸಿದ ಅವರು ಹೇಳಿದರು.

# ಮಂಗಳ ಗ್ರಹದಲ್ಲಿ ಈಗಲೇ 7,118 ಕೆಜಿ ತ್ಯಾಜ್ಯ!

ಪ್ಯಾರಿಸ್, ಸೆ. 27: ಸುಮಾರು 50 ವರ್ಷಗಳ ಹಿಂದೆ ಮಂಗಳ ಗ್ರಹದ ಶೋಧ ಕಾರ್ಯಾಚರಣೆ ಆರಂಭಿಸಿರುವ ಮಾನವ ಕುಲವು, ಅಲ್ಲಿಗೆ ಹಲವು ಬಾಹ್ಯಾಕಾಶ ನೌಕೆಗಳನ್ನು ಈಗಾಗಲೇ ಕಳುಹಿಸಿದೆ. 2030ರ ದಶಕದ ವೇಳೆಗೆ ಅಲ್ಲಿಗೆ ಮೊದಲ ಬಾರಿಗೆ ಮಾನವನನ್ನು ಕಳುಹಿಸುವ ಯೋಜನೆಯನ್ನು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಹೊಂದಿದೆ.




ಮಂಗಳ ಗ್ರಹದ ಮೇಲೆ ಮಾನವ ಕಾಲಿಡಲು ಇನ್ನೂ ತುಂಬಾ ಸಮಯವಿದೆಯಾದರೂ, ಅಲ್ಲಿ ಕಸವನ್ನು ಹರಡುವುದರಿಂದ ಮಾನವರೇನೂ ಹಿಂದೆ ಬಿದ್ದಿಲ್ಲ. ''ಕೆಂಪು ಗ್ರಹದಲ್ಲಿ ಈಗಾಗಲೇ 7118.6 ಕೆಜಿ ಮಾನವ ನಿರ್ಮಿತ ತ್ಯಾಜ್ಯ ಜಮಾವಣೆಯಾಗಿದೆ'' ಎಂದು ವೆಸ್ಟ್ ವರ್ಜೀನಿಯ ವಿಶ್ವವಿದ್ಯಾನಿಲಯದಲ್ಲಿ ರೋಬೊಟಿಕ್ಸ್‌ನಲ್ಲಿ ರಿಸರ್ಚ್ ಫೆಲೋ ಆಗಿರುವ ಕ್ಯಾಗ್ರಿ ಕಿಲಿಕ್ ಹೇಳುತ್ತಾರೆ. ಇದನ್ನು ಲೆಕ್ಕ ಹಾಕಲು ಮಂಗಳ ಗ್ರಹಕ್ಕೆ ಕಳುಹಿಸಲಾಗಿರುವ ಎಲ್ಲಾ ಶೋಧಕಗಳ ದ್ರವ್ಯರಾಶಿಯನ್ನು ಲೆಕ್ಕ ಮಾಡಿ ಅದರಿಂದ ಈಗಲೂ ಕ್ರಿಯಾಶೀಲವಾಗಿರುವ ಶೋಧಕಗಳ ದ್ರವ್ಯರಾಶಿಯನ್ನು ಕಳೆಯಲಾಗಿದೆ.

ವಿವಿಧ ದೇಶಗಳು 18 ಮಾನವ ನಿರ್ಮಿತ ಶೋಧಕ ನೌಕೆಗಳನ್ನು ಈಗಾಗಲೇ ಮಂಗಳಕ್ಕೆ ಕಳುಹಿಸಿವೆ.

# ರಶ್ಯ ಅನಿಲ ಪೈಪ್‌ಲೈನ್‌ಗಳಲ್ಲಿ ಸ್ವೀಡನ್, ಡೆನ್ಮಾರ್ಕ್ ಸಮೀಪ ಸೋರಿಕೆ

ಸ್ಟಾಕ್‌ಹೋಮ್/ಕೋಪನ್‌ಹೇಗನ್, ಸೆ. 27: ಬಾಲ್ಟಿಕ್ ಸಮುದ್ರದ ತಳದಲ್ಲಿ ಹಾದು ಹೋಗಿರುವ ರಶ್ಯದ ಎರಡು ಅನಿಲ ಪೈಪ್‌ಲೈನ್‌ಗಳಲ್ಲಿ ಸ್ವೀಡನ್ ಮತ್ತು ಡೆನ್ಮಾರ್ಕ್ ಸಮೀಪ ದಿಢೀರ್ ಸೋರಿಕೆಗಳು ಸಂಭವಿಸಿವೆ ಹಾಗೂ ಅದರ ತನಿಖೆಗೆ ಯುರೋಪಿಯನ್ ದೇಶಗಳು ಮಂಗಳವಾರ ಮುಂದಾಗಿವೆ.




ಉಕ್ರೇನ್ ಮೇಲೆ ರಶ್ಯ ನಡೆಸುತ್ತಿರುವ ಯುದ್ಧದಿಂದಾಗಿ ಐರೋಪ್ಯ ದೇಶಗಳು ಎದುರಿಸುತ್ತಿರುವ ಇಂಧನ ಬಿಕ್ಕಟ್ಟಿನ ಮೂಲದಲ್ಲಿ ರಶ್ಯದ ಈ ಅನಿಲ ಪೈಪ್‌ಲೈನ್‌ಗಳಿವೆ. ನಾರ್ಡ್ ಸ್ಟ್ರೀಮ್ ವನ್ ಪೈಪ್‌ಲೈನ್‌ನಲ್ಲಿ ಸುಮಾರು ಎರಡು ಸೋರಿಕೆಗಳು ಇರುವ ಬಗ್ಗೆ ಸ್ವೀಡನ್‌ನ ಸಮುದ್ರ ಪ್ರಾಧಿಕಾರವು ಎಚ್ಚರಿಕೆಯೊಂದನ್ನು ಹೊರಡಿಸಿದೆ. ಇದಕ್ಕಿಂತ ಸ್ವಲ್ಪ ಮೊದಲು, ಸಮೀಪದ ನಾರ್ಡ್ ಸ್ಟ್ರೀಮ್ 2 ಪೈಪ್‌ಲೈನ್‌ನಲ್ಲಿ ಸೋರಿಕೆ ಇರುವುದನ್ನು ಡೆನ್ಮಾರ್ಕ್ ಪತ್ತೆಹಚ್ಚಿತ್ತು. ಈ ಹಿನ್ನೆಲೆಯಲ್ಲಿ, ಸೋರಿಕೆಯ 5 ನಾಟಿಕಲ್ ಮೈಲ್ ತ್ರಿಜ್ಯದಲ್ಲಿ ಹಡಗುಗಳ ಚಲನೆಯನ್ನು ನಿಷೇಧಿಸಲಾಗಿದೆ.

ಯುರೋಪ್ ಮತ್ತು ಮಾಸ್ಕೊ ರಶ್ಯ ನಡುವಿನ ಇಂಧನ ಸಮರದಲ್ಲಿ ಈ ಎರಡು ಪೈಪ್‌ಲೈನ್‌ಗಳನ್ನು ರಶ್ಯವು ದಾಳಗಳನ್ನಾಗಿ ಬಳಸುತ್ತಿದೆ. ಹೀಗಾಗಿ, ಪಾಶ್ಚಿಮಾತ್ಯ ದೇಶಗಳಲ್ಲಿ ಅನಿಲ ಬೆಲೆಗಳು ಗಗನಕ್ಕೇರಿವೆ.

# ಇಂದು ಮೊದಲ ಟ್ವೆಂಟಿ-20: ಭಾರತ-ದಕ್ಷಿಣ ಆಫ್ರಿಕಾ ಹಣಾಹಣಿ

## ■ ವಿಶ್ವಕಪ್‌ಗೆ ಮೊದಲು ಡೆತ್ ಬೌಲಿಂಗ್ ಸಮಸ್ಯೆ ನಿವಾರಿಸಿಕೊಳ್ಳುವ ವಿಶ್ವಾಸದಲ್ಲಿ ರೋಹಿತ್ ಬಳಗ

ತಿರುವನಂತಪುರ, ಸೆ.27: ದಕ್ಷಿಣ ಆಫ್ರಿಕಾ ವಿರುದ್ಧ ಬುಧವಾರ ಇಲ್ಲಿ ಆರಂಭವಾಗಲಿರುವ 3 ಪಂದ್ಯಗಳ ಟ್ವೆಂಟಿ-20 ಸರಣಿಯಲ್ಲಿ ಆಡಲಿರುವ ಆತಿಥೇಯ ಭಾರತವು ಡೆತ್ ಬೌಲಿಂಗ್ ಸಮಸ್ಯೆಯನ್ನು ನಿವಾರಿಸಿಕೊಳ್ಳುವ ಜೊತೆಗೆ ಹೊಸ ಆಟಗಾರರಿಗೆ ಅವಕಾಶ ನೀಡುವ ಮೂಲಕ ಮುಂಬರುವ ಟ್ವೆಂಟಿ-20 ವಿಶ್ವಕಪ್‌ಗೆ ತಯಾರಿ ನಡೆಸುವತ್ತ ಚಿತ್ತಹರಿಸಿದೆ.

ಆಸ್ಟ್ರೇಲಿಯ ವಿರುದ್ಧ ಸರಣಿಯನ್ನು ಜಯಿಸಿದ ಬಳಿಕ ಡೆತ್ ಬೌಲಿಂಗ್ ಸುಧಾರಿಸಿಕೊಳ್ಳುವತ್ತ ಹೆಚ್ಚು ಗಮನ ನೀಡಲು ಭಾರತದ ನಾಯಕ ರೋಹಿತ್ ಶರ್ಮಾ ನಿರ್ಧರಿಸಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ವಿಶ್ವಕಪ್‌ಗಿಂತ ಮೊದಲು ಹಾರ್ದಿಕ್ ಪಾಂಡ್ಯ ಹಾಗೂ ಭುವನೇಶ್ವರ ಕುಮಾರ್ ಅವರಿಗೆ ವಿಶ್ರಾಂತಿ ನೀಡಲಾಗಿದ್ದು, ಈ ಸರಣಿಯಲ್ಲಿ ಈ ಇಬ್ಬರು ಪ್ರಮುಖ ಬೌಲರ್‌ಗಳು ಆಡುವುದಿಲ್ಲ.

ವಿಶ್ವಕಪ್‌ನ ಮೀಸಲು ಆಟಗಾರರ ಪೈಕಿ ಒಬ್ಬರಾಗಿರುವ ಹಿರಿಯ ವೇಗದ ಬೌಲರ್ ಮುಹಮ್ಮದ್ ಶಮಿ ಕೋವಿಡ್-19 ಸೋಂಕಿನಿಂದ ಇನ್ನಷ್ಟೇ ಚೇತರಿಸಿಕೊಳ್ಳಬೇಕಾಗಿದೆ. ಆಸ್ಟ್ರೇಲಿಯ ವಿರುದ್ಧ ಸರಣಿಗೆ ಅಲಭ್ಯರಾಗಿದ್ದ ಶಮಿ ದಕ್ಷಿಣ ಆಫ್ರಿಕಾ ವಿರುದ್ಧದ 3 ಪಂದ್ಯಗಳ ಸರಣಿಯಿಂದಲೂ ಹೊರಗುಳಿದಿದ್ದಾರೆ. ಆಸ್ಟ್ರೇಲಿಯ ವಿರುದ್ಧ ಸರಣಿಯಲ್ಲಿ ಅಷ್ಟೇನೂ ಗಮನಾರ್ಹ ಪ್ರದರ್ಶನ ನೀಡದ ಹರ್ಷಲ್ ಪಟೇಲ್ ವಿಶ್ವಕಪ್‌ಗಿಂತ ಮೊದಲು ನಡೆಯುವ ಈ ಮೂರು ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಹರ್ಷಲ್ ಪಟೇಲ್ ಅವರ ವೃತ್ತಿಜೀವನದ ಎಕಾನಮಿ ರೇಟ್ 9.05. ಆದರೆ, ಆಸ್ಟ್ರೇಲಿಯ ವಿರುದ್ಧ ಪ್ರತಿ ಓವರ್‌ಗೆ 12 ರನ್ ನೀಡಿದ್ದರು. ವಿಶ್ವಕಪ್‌ಗೆ ಮೀಸಲು ಆಟಗಾರನಾಗಿರುವ ದೀಪಕ್ ಚಹಾರ್ ಆಸ್ಟ್ರೇಲಿಯ ವಿರುದ್ಧ ಸರಣಿಯಲ್ಲಿ ಅವಕಾಶ ಪಡೆದಿರಲಿಲ್ಲ. ಮೂರು ಪಂದ್ಯಗಳಲ್ಲಿ ಭಾರತವು ವೇಗಿಗಳನ್ನು ರೊಟೇಟ್ ಮಾಡಲು ಬಯಸಿದರೆ ಚಹಾರ್ ಅವಕಾಶ ಪಡೆಯಬಹುದು.

ಅರ್ಷದೀಪ್ ಸಿಂಗ್ ವಾಪಸಾಗಿದ್ದು, ಸ್ಲಾಗ್ ಓವರ್‌ನಲ್ಲಿ ತಂಡಕ್ಕೆ ಶಕ್ತಿ ತುಂಬಲಿದ್ದಾರೆ. ಬೆನ್ನುನೋವಿನ ಬಳಿಕ ಸಂಪೂರ್ಣ ಲಯ ಕಂಡುಕೊಳ್ಳುವ ಗುರಿ ಇಟ್ಟುಕೊಂಡಿರುವ ಜಸ್‌ಪ್ರೀತ್ ಬುಮ್ರಾ ಅವರೊಂದಿಗೆ ಸಿಂಗ್ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.




ವಿಶ್ವಕಪ್‌ಗಿಂತ ಮೊದಲು ಎಲ್ಲ ಆಟಗಾರರಿಗೆ ಆಡಲು ಸಾಕಷ್ಟು ಅವಕಾಶ ನೀಡುವ ಮಹತ್ವದ ಕುರಿತು ನಾಯಕ ರೋಹಿತ್ ಒಲವು ವ್ಯಕ್ತಪಡಿಸಿದ್ದಾರೆ. ಆಸ್ಟ್ರೇಲಿಯ ವಿರುದ್ಧ ಕೊನೆಯ 2 ಪಂದ್ಯಗಳಲ್ಲಿ ಮಿಂಚಲು ವಿಫಲರಾಗಿದ್ದ ಕೆ.ಎಲ್.ರಾಹುಲ್ ಈ ಮೂರು ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡುವ ಭರವಸೆಯಲ್ಲಿದ್ದಾರೆ.

ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಉತ್ತಮ ಟಚ್‌ನಲ್ಲಿದ್ದಾರೆ. ಭಾರತವು ಟಿ-20 ವಿಶ್ವಕಪ್‌ನಲ್ಲಿ ಭಾಗವಹಿಸಲು ಆಸ್ಟ್ರೇಲಿಯಕ್ಕೆ ತೆರಳುವ ಮೊದಲು ಮೊದಲಿನ ಲಯ ಕಂಡುಕೊಳ್ಳುವುದು ರಾಹುಲ್‌ಗೆ ಅತ್ಯಂತ ಮುಖ್ಯವಾಗಿದೆ. ವಿಶ್ವಕಪ್ ತಂಡಕ್ಕೆ ಆಯ್ಕೆಯಾಗಿರುವ ದೀಪಕ್ ಹೂಡಾ ಬೆನ್ನುನೋವಿನಿಂದಾಗಿ ದಕ್ಷಿಣ ಆಫ್ರಿಕಾ ಟಿ-20 ಸರಣಿಯಿಂದಲೂ ಹೊರಗುಳಿದಿದ್ದಾರೆ. ಹೀಗಾಗಿ ಅವರು ಮೆಗಾ ಸ್ಪರ್ಧೆಗೆ ಮೊದಲು ಸ್ವದೇಶದಲ್ಲಿ ನಡೆದ ಎಲ್ಲ ಆರು ಪಂದ್ಯಗಳಿಂದ ವಂಚಿತರಾಗಲಿದ್ದಾರೆ.

ಶ್ರೇಯಸ್ ಅಯ್ಯರ್ ತಂಡದಲ್ಲಿ ಹೂಡಾ ಅವರ ಸ್ಥಾನ ತುಂಬುವ ನಿರೀಕ್ಷೆ ಇದೆ.

ಆಸ್ಟ್ರೇಲಿಯದಲ್ಲಿ ನಡೆಯುವ ವಿಶ್ವಕಪ್‌ನ ಗ್ರೂಪ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಹಾಗೂ ಭಾರತ ಮುಖಾಮುಖಿಯಾಗಲಿವೆ. ಭಾರತದ ವಾತಾವರಣ ಆಸ್ಟ್ರೇಲಿಯಕ್ಕಿಂತ ಸಂಪೂರ್ಣ ಭಿನ್ನವಾಗಿದೆ. ಹಾಗಾಗಿ ಉಭಯ ತಂಡಗಳು 3 ಪಂದ್ಯಗಳನ್ನು ಗುರಿಯಾಗಿರಿಸಿ ಆಡಲಿವೆ.

### ತಂಡಗಳು

■ ಭಾರತ(ಸಂಭಾವ್ಯರು): 1. ರೋಹಿತ್ ಶರ್ಮಾ(ನಾಯಕ), 2. ಕೆ.ಎಲ್.ರಾಹುಲ್, 3. ವಿರಾಟ್ ಕೊಹ್ಲಿ, 4.ಸೂರ್ಯಕುಮಾರ್ ಯಾದವ್, 5. ರಿಷಭ್ ಪಂತ್, 6. ಅಕ್ಷರ್ ಪಟೇಲ್, 7. ದಿನೇಶ್ ಕಾರ್ತಿಕ್(ವಿಕೆಟ್‌ಕೀಪರ್), 8. ದೀಪಕ್ ಚಹಾರ್, 9. ಅರ್ಷದೀಪ್ ಸಿಂಗ್, 10. ಜಸ್‌ಪ್ರೀತ್ ಬುಮ್ರಾ, 11. ಯಜುವೇಂದ್ರ ಚಹಾಲ್.

■ ದಕ್ಷಿಣ ಆಫ್ರಿಕಾ(ಸಂಭಾವ್ಯರು): 1. ಕ್ವಿಂಟನ್ ಡಿಕಾಕ್(ವಿಕೆಟ್‌ಕೀಪರ್), 2. ಟೆಂಬಾ ಬವುಮಾ(ನಾಯಕ), 3. ರಿಲೀ ರೊಸ್ಸೊ, 4. ಐಡೆನ್ ಮರ್ಕ್ರಾಮ್ , 5. ಡೇವಿಡ್ ಮಿಲ್ಲರ್, 6. ಟ್ರಿಸ್ಟನ್ ಸ್ಟಬ್ಸ್, 7. ಆ್ಯಂಡಿಲ್ ಫೆಹ್ಲುಕ್ವಾಯೊ/ಡ್ವೆಯ್ನ್ ಪ್ರಿಟೋರಿಯಸ್, 8. ಮಾರ್ಕೊ ಜಾನ್ಸನ್, 9. ಕಾಗಿಸೊ ರಬಾಡ, 10. ಅನ್ರಿಚ್ ನೋರ್ಟ್ಜೆ, 11. ತಬ್ರೇಝ್ ಶಮ್ಸಿ.

### ಅಂಕಿ ಅಂಶ

■ ಭಾರತವು ಈ ವರ್ಷ ಪವರ್‌ಪ್ಲೇ ವೇಳೆ 63 ಸಿಕ್ಸರ್‌ಗಳನ್ನು ಸಿಡಿಸಿದೆ. ಈ ಮೂಲಕ ಈ ಸಾಧನೆ ಮಾಡಿದ ಮೊದಲ ತಂಡ ಎನಿಸಿಕೊಂಡಿದೆ. 37 ಸಿಕ್ಸರ್‌ಗಳನ್ನು ಸಿಡಿಸಿರುವ ಐರ್‌ಲ್ಯಾಂಡ್ ಎರಡನೇ ಸ್ಥಾನದಲ್ಲಿದೆ.

■ ಪಂದ್ಯ ಆರಂಭದ ಸಮಯ:
ರಾತ್ರಿ 7:00

### ಪಿಚ್ ಹಾಗೂ ವಾತಾವರಣ

ತಿರುವನಂತಪುರದ ಗ್ರೀನ್‌ಫೀಲ್ಡ್ ಸ್ಟೇಡಿಯಂನಲ್ಲಿ ಈ ತನಕ ಕೇವಲ 2 ಟ್ವೆಂಟಿ-20 ಪಂದ್ಯಗಳು ನಡೆದಿವೆ. ಒಂದು ಪಂದ್ಯ ಮಳೆಬಾಧಿತವಾಗಿ 8 ಓವರ್‌ಗೆ ಕಡಿತಗೊಂಡಿತ್ತು. ಮುನ್ಸೂಚನೆ ಪ್ರಕಾರ ಬುಧವಾರ ರಾತ್ರಿ ತುಂತುರು ಮಳೆಯಾಗುವ ಸಾಧ್ಯತೆಯಿದೆ.

# ಐಸಿಸಿ ಏಕದಿನ ರ‍್ಯಾಂಕಿಂಗ್: ಹರ್ಮನ್‌ಪ್ರೀತ್ ಕೌರ್ ಐದನೇ ಸ್ಥಾನಕ್ಕೆ ಲಗ್ಗೆ




ದುಬೈ, ಸೆ.27: ಇಂಗ್ಲೆಂಡ್ ವಿರುದ್ಧ ಅಮೋಘ ಪ್ರದರ್ಶನ ನೀಡಿರುವ ಭಾರತದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮಂಗಳವಾರ ಬಿಡುಗಡೆಯಾಗಿರುವ ಐಸಿಸಿ ಮಹಿಳಾ ಬ್ಯಾಟರ್‌ಗಳ ಏಕದಿನ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನ ತಲುಪಿದ್ದಾರೆ.

ಇಂಗ್ಲೆಂಡ್ ವಿರುದ್ಧ 3-0 ಅಂತರದಿಂದ ಕ್ಲೀನ್‌ಸ್ವೀಪ್ ಸಾಧಿಸಿರುವ ಭಾರತ ಮಹಿಳಾ ತಂಡದ ನೇತೃತ್ವವಹಿಸಿರುವ ಕೌರ್ ರ‍್ಯಾಂಕಿಂಗ್‌ನಲ್ಲಿ ಪ್ರಗತಿ ಸಾಧಿಸಿದರು. ಕೌರ್ ಕ್ಯಾಂಟರ್‌ಬರಿಯಲ್ಲಿ ನಡೆದ ಎರಡನೇ ಪಂದ್ಯದಲ್ಲಿ 111 ಎಸೆತಗಳಲ್ಲಿ ಔಟಾಗದೆ 143 ರನ್ ಗಳಿಸಿದ್ದರು.

ಇಂಗ್ಲೆಂಡ್ ವಿರುದ್ಧ ಸರಣಿಯ ಕೊನೆಯ ಎರಡು ಪಂದ್ಯಗಳಲ್ಲಿ ನೀಡಿರುವ ಉತ್ತಮ ಪ್ರದರ್ಶನವನ್ನು ಆಧರಿಸಿ ಓಪನರ್ ಸ್ಮೃತಿ ಮಂಧಾನ ಹಾಗೂ ದೀಪ್ತಿ ಶರ್ಮಾ ಹೊಸ ರ‍್ಯಾಂಕಿಂಗ್‌ನಲ್ಲಿ ಭಡ್ತಿ ಪಡೆದಿದ್ದಾರೆ. ಮಾಜಿ ಅಗ್ರ ರ‍್ಯಾಂಕಿನ ಆಟಗಾರ್ತಿ ಮಂಧಾನ ಎರಡು ಪಂದ್ಯಗಳಲ್ಲಿ 40 ಹಾಗೂ 50 ರನ್ ಗಳಿಸಿದ್ದರು. ಒಂದು ಸ್ಥಾನ ಮೇಲಕ್ಕೇರಿ 6ನೇ ಸ್ಥಾನ ತಲುಪಿದರು. ಲಾರ್ಡ್ಸ್‌ನಲ್ಲಿ ನಡೆದ 3ನೇ ಪಂದ್ಯದಲ್ಲಿ ಔಟಾಗದೆ 68 ರನ್ ಗಳಿಸಿದ್ದ ಶರ್ಮಾ 8 ಸ್ಥಾನ ಮೇಲಕ್ಕೇರಿ 24ನೇ ರ‍್ಯಾಂಕಿಗೆ ಲಗ್ಗೆ ಇಟ್ಟಿದ್ದಾರೆ.

ಪೂಜಾ ವಸ್ತ್ರಕರ್(4 ಸ್ಥಾನ ಭಡ್ತಿ ಪಡೆದು 49ನೇ ಸ್ಥಾನ)ಹಾಗೂ ಹರ್ಲೀನ್ ಡಿಯೊಲ್(46 ಸ್ಥಾನ ಭಡ್ತಿ ಪಡೆದು 81ನೇ ರ‍್ಯಾಂಕ್)ಬ್ಯಾಟರ್‌ಗಳ ಲಿಸ್ಟ್‌ನಲ್ಲಿ ಭಡ್ತಿ ಪಡೆದ ಭಾರತದ ಇತರ ಆಟಗಾರ್ತಿಯರಾಗಿದ್ದಾರೆ.

ಎರಡು ಪಂದ್ಯಗಳಲ್ಲಿ 4 ವಿಕೆಟ್‌ಗಳನ್ನು ಬಾಚಿಕೊಂಡಿರುವ ರೇಣುಕಾ ಸಿಂಗ್ 35 ಸ್ಥಾನ ಮುನ್ನಡೆ ಪಡೆದು 35ನೇ ಸ್ಥಾನ ತಲುಪಿದ್ದಾರೆ.

ಮಾಜಿ ಅಗ್ರ ರ‍್ಯಾಂಕಿನ ಆಟಗಾರ್ತಿ, ವೇಗದ ಬೌಲರ್ ಜೂಲನ್ ಗೋಸ್ವಾಮಿ ಐದನೇ ಸ್ಥಾನದೊಂದಿಗೆ ನಿವೃತ್ತಿಯಾದರು.

ಬ್ಯಾಟರ್‌ಗಳ ಪೈಕಿ ಇಂಗ್ಲೆಂಡ್‌ನ ಡ್ಯಾನಿ ವ್ಯಾಟ್ 2ನೇ ಪಂದ್ಯದಲ್ಲಿ 65 ರನ್ ಗಳಿಸಿದ್ದು 2 ಸ್ಥಾನ ಭಡ್ತಿ ಪಡೆದು 21ನೇ ರ‍್ಯಾಂಕಿಗೆ ತಲುಪಿದರೆ, ಆ್ಯಮಿ ಜಾನ್ಸ್ 4 ಸ್ಥಾನ ಭಡ್ತಿ ಪಡೆದು 30ನೇ ರ‍್ಯಾಂಕಿಗೆ ಲಗ್ಗೆ ಇಟ್ಟಿದ್ದಾರೆ.

ವೆಸ್ಟ್‌ಇಂಡೀಸ್ ನಾಯಕಿ ಹ್ಯಾಲಿ ಮ್ಯಾಥ್ಯೂಸ್ ತನ್ನ ವೃತ್ತಿಜೀವನದಲ್ಲಿ ಮೊದಲ ಬಾರಿ ಏಕದಿನ ಮಾದರಿ ಕ್ರಿಕೆಟ್‌ನ ಆಲ್‌ರೌಂಡರ್ ಪಟ್ಟಿಯಲ್ಲಿ ನಂ.1 ಸ್ಥಾನ ಪಡೆದಿದ್ದಾರೆ. ಮ್ಯಾಥ್ಯೂಸ್ ನ್ಯೂಝಿಲ್ಯಾಂಡ್ ವಿರುದ್ಧ 2-1 ಅಂತರದಿಂದ ಗೆದ್ದ ಸರಣಿಯಲ್ಲಿ ಒಟ್ಟು 88 ರನ್ ಹಾಗೂ 5 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

# 2023ರ ಹಾಕಿ ವಿಶ್ವಕಪ್ ಟೂರ್ನಿ: ಭಾರತಕ್ಕೆ ಸ್ಪೇನ್ ಮೊದಲ ಎದುರಾಳಿ

ಲಾಸಾನ್(ಸ್ವಿಟ್ಸರ್‌ಲ್ಯಾಂಡ್), ಸೆ.27: ಅಂತರ್‌ರಾಷ್ಟ್ರೀಯ ಹಾಕಿ ಫೆಡರೇಶನ್ (ಎಫ್‌ಐಎಚ್)ಮಂಗಳವಾರ 2023ರ ಹಾಕಿ ವಿಶ್ವಕಪ್ ಟೂರ್ನಿಗೆ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ವೇಳಾಪಟ್ಟಿಯ ಪ್ರಕಾರ ಭಾರತೀಯ ಹಾಕಿ ತಂಡವು ರೂರ್ಕೆಲಾದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟಿರುವ ಬಿರ್ಸಾ ಮುಂಡಾ ಇಂಟರ್‌ನ್ಯಾಶನಲ್ ಹಾಕಿ ಸ್ಟೇಡಿಯಂನಲ್ಲಿ ಜನವರಿ 13ರಂದು ಸ್ಪೇನ್ ವಿರುದ್ಧ ಆಡುವ ಮೂಲಕ ವಿಶ್ವಕಪ್‌ನಲ್ಲಿ ತನ್ನ ಅಭಿಯಾನ ಆರಂಭಿಸಲಿದೆ.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿರುವ ಭಾರತವು ರೂರ್ಕೆಲಾದಲ್ಲಿ ಜನವರಿ 15ರಂದು ನಡೆಯಲಿರುವ ಮತ್ತೊಂದು ಪಂದ್ಯದಲ್ಲಿ ವಿಶ್ವದ ನಂ.6ನೇ ತಂಡ ಇಂಗ್ಲೆಂಡ್‌ನ್ನು ಎದುರಿಸಲಿದೆ.

ಜನವರಿ 19ರಂದು ಭಾರತೀಯ ಹಾಕಿ ತಂಡವು ಭುವನೇಶ್ವರದ ಕಳಿಂಗ ಸ್ಟೇಡಿಯಂನಲ್ಲಿ 'ಡಿ' ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ವಿಶ್ವದ 16ನೇ ರ‍್ಯಾಂಕಿನ ವೇಲ್ಸ್ ತಂಡದ ವಿರುದ್ಧ ಆಡಲಿದೆ. ಹಾಕಿ ವಿಶ್ವಕಪ್-2023 ಜನವರಿ 13ರಂದು ಆರಂಭವಾಗಲಿದ್ದು, ಜನವರಿ 29ರ ತನಕ ನಡೆಯಲಿದೆ. ನಾಲ್ಕು ಗುಂಪುಗಳಲ್ಲಿರುವ ಒಟ್ಟು 16 ತಂಡಗಳು ಚಾಂಪಿಯನ್‌ಶಿಪ್ ಟ್ರೋಫಿಗಾಗಿ ಸೆಣಸಾಡಲಿವೆ. ಭಾರತವು ಸ್ಪೇನ್, ಇಂಗ್ಲೆಂಡ್ ಹಾಗೂ ವೇಲ್ಸ್ ಜೊತೆಗೆ 'ಡಿ' ಗುಂಪಿನಲ್ಲಿದೆ.

ಜನವರಿ 13ರಂದು ಕಳಿಂಗ ಸ್ಟೇಡಿಯಂನಲ್ಲಿ 2016ರ ಒಲಿಂಪಿಕ್ಸ್ ಚಾಂಪಿಯನ್ ಅರ್ಜೆಂಟೀನ ಹಾಗೂ ಆಫ್ರಿಕಾದ ಗರಿಷ್ಠ ರ‍್ಯಾಂಕಿನ ದೇಶ ದಕ್ಷಿಣ ಆಫ್ರಿಕಾವು 2023ರ ಎಫ್‌ಐಎಚ್ ಒಡಿಶಾ ಹಾಕಿ ವಿಶ್ವಕಪ್‌ನಲ್ಲಿ ಉದ್ಘಾಟನಾ ಪಂದ್ಯವನ್ನು ಆಡಲಿವೆ. ದಿನದ ಎರಡನೇ ಪಂದ್ಯದಲ್ಲಿ ವಿಶ್ವದ ನಂ.1 ತಂಡ ಆಸ್ಟ್ರೇಲಿಯವು ಫ್ರಾನ್ಸ್ ತಂಡವನ್ನು ಎದುರಿಸಲಿದೆ.

ಟೂರ್ನಿಯಲ್ಲಿ ಒಟ್ಟು 44 ಪಂದ್ಯಗಳು ನಡೆಯುತ್ತವೆ. ಫೈನಲ್ ಪಂದ್ಯವು ಜನವರಿ 29ರಂದು ಭುವನೇಶ್ವರದಲ್ಲಿ ನಡೆಯಲಿದೆ.

ಚಿಲಿ ಹಾಗೂ ವೇಲ್ಸ್ ಮೊತ್ತ ಮೊದಲ ಬಾರಿ ಪುರುಷರ ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿವೆ. ಬೆಲ್ಜಿಯಂ ಹಾಲಿ ಚಾಂಪಿಯನ್ ಆಗಿದೆ. 2018ರ ಆವೃತ್ತಿಯ ವಿಶ್ವಕಪ್ ಫೈನಲ್‌ನಲ್ಲಿ ಬೆಲ್ಜಿಯಂ ತಂಡ ನೆದರ್‌ಲ್ಯಾಂಡ್ ಅನ್ನು ಮಣಿಸಿತ್ತು.

1975ರಲ್ಲಿ ಭಾರತವು ವಿಶ್ವಕಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿತ್ತು. ಕೌಲಾಲಂಪುರದಲ್ಲಿ ನಡೆದ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಪಾಕಿಸ್ತಾನವನ್ನು 2-1 ಅಂತರದಿಂದ ಮಣಿಸಿ ಪ್ರಶಸ್ತಿ ಜಯಿಸಿತ್ತು. ಭಾರತವು ನಾಲ್ಕನೇ ಬಾರಿ 2023ರಲ್ಲಿ ಪುರುಷರ ವಿಶ್ವಕಪ್ ಆತಿಥ್ಯವನ್ನು ವಹಿಸಿಕೊಳ್ಳಲಿದೆ.

■ 'ಎ' ಗುಂಪು: ಆಸ್ಟ್ರೇಲಿಯ, ಅರ್ಜೆಂಟೀನ, ಫ್ರಾನ್ಸ್, ದಕ್ಷಿಣ ಆಫ್ರಿಕಾ
■ 'ಬಿ' ಗುಂಪು: ಬೆಲ್ಜಿಯಂ, ಜರ್ಮನಿ, ಕೊರಿಯಾ, ಜಪಾನ್
■ 'ಸಿ' ಗುಂಪು: ನೆದರ್‌ಲ್ಯಾಂಡ್, ನ್ಯೂಝಿಲ್ಯಾಂಡ್, ಮಲೇಶ್ಯ, ಚಿಲಿ
■ 'ಡಿ' ಗುಂಪು: ಭಾರತ, ಇಂಗ್ಲೆಂಡ್, ಸ್ಪೇನ್, ವೇಲ್ಸ್

# ಮೂರನೇ ಏಕದಿನ ಪಂದ್ಯ: ಭಾರತ 'ಎ' ತಂಡಕ್ಕೆ ಭರ್ಜರಿ ಜಯ

## ನ್ಯೂಝಿಲ್ಯಾಂಡ್ 'ಎ' ವಿರುದ್ಧ ಕ್ಲೀನ್‌ಸ್ವೀಪ್

ಚೆನ್ನೈ, ಸೆ.27: ಮಧ್ಯಮ ವೇಗದ ಬೌಲರ್ ರಾಜ್ ಅಂಗದ್ ಬಾವಾ(5.3-0-11-4) ಅಮೋಘ ಬೌಲಿಂಗ್ ನೆರವಿನಿಂದ ಭಾರತ 'ಎ' ತಂಡ ನ್ಯೂಝಿಲ್ಯಾಂಡ್ 'ಎ' ವಿರುದ್ಧದ ಮೂರನೇ ಏಕದಿನ ಪಂದ್ಯವನ್ನು 106 ರನ್‌ಗಳ ಅಂತರದಿಂದ ಗೆದ್ದುಕೊಂಡಿದೆ. ಈ ಮೂಲಕ 3 ಪಂದ್ಯಗಳ ಸರಣಿಯನ್ನು 3-0 ಅಂತರದಿಂದ ಕ್ಲೀನ್‌ಸ್ವೀಪ್ ಸಾಧಿಸಿದೆ.

ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತವು 284 ರನ್ ಗಳಿಸಿತು. ಗೆಲ್ಲಲು ಕಠಿಣ ಗುರಿ ಬೆನ್ನಟ್ಟಿದ ನ್ಯೂಝಿಲ್ಯಾಂಡ್ 178 ರನ್‌ಗೆ ಆಲೌಟಾಯಿತು.

ಈ ವರ್ಷಾರಂಭದಲ್ಲಿ ನಡೆದ ಅಂಡರ್-19 ವಿಶ್ವಕಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದ ಅಂಗದ್ ಬಾವಾ ತನ್ನ ಮೊದಲ ಸ್ಪೆಲ್‌ನಲ್ಲಿ ಮಾರ್ಕ್ ಚಾಪ್‌ಮನ್(11) ವಿಕೆಟ್ ಪಡೆದರು. ಲೆಗ್ ಸ್ಪಿನ್ನರ್ ರಾಹುಲ್ ಚಹಾರ್(2-39) ಹಾಗೂ ಕುಲದೀಪ್ ಯಾದವ್(2-29)ತಲಾ ಎರಡು ವಿಕೆಟ್ ಪಡೆದು ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಆರಂಭಿಕ ಬ್ಯಾಟರ್ ಡೇನ್ ಕ್ಲೀವರ್ 89 ಎಸೆತಗಳಲ್ಲಿ 83 ರನ್ ಗಳಿಸಿ ತಂಡದ ಪರ ಗರಿಷ್ಠ ಸ್ಕೋರ್ ಗಳಿಸಿದರು. ಆತಿಥೇಯರ ಪರ ನಾಯಕ ಸಂಜು ಸ್ಯಾಮ್ಸನ್(54 ರನ್), ತಿಲಕ್ ವರ್ಮಾ(50 ರನ್) ಹಾಗೂ ಶಾರ್ದೂಲ್ ಠಾಕೂರ್(33 ಎಸೆತದಲ್ಲಿ 51 ರನ್)ನಿರ್ಣಾಯಕ ಕೊಡುಗೆ ನೀಡಿ ಸ್ಪರ್ಧಾತ್ಮಕ ಮೊತ್ತ ಗಳಿಸಲು ನೆರವಾದರು.

# ಬಿಡಬ್ಲ್ಯುಎಫ್ ರ‍್ಯಾಂಕಿಂಗ್: 4 ವರ್ಷಗಳ ಬಳಿಕ ಮೊದಲ ಬಾರಿ 15ನೇ ರ‍್ಯಾಂಕಿಗೆ ತಲುಪಿದ ಪ್ರಣಯ್




ಹೊಸದಿಲ್ಲಿ, ಸೆ.27: ಸುಮಾರು 4 ವರ್ಷಗಳ ಅಂತರದ ನಂತರ ಭಾರತದ ಹಿರಿಯ ಶಟ್ಲರ್ ಎಚ್.ಎಸ್. ಪ್ರಣಯ್ ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್(ಬಿಡಬ್ಲ್ಯುಎಫ್)ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ-15ರೊಳಗೆ ಪ್ರವೇಶಿಸಿದ್ದಾರೆ.

ಪ್ರಣಯ್ 2018ರ ಅಕ್ಟೋಬರ್ 17ರಂದು ಕೊನೆಯ ಬಾರಿ ವಿಶ್ವದ ನಂ.15ನೇ ರ‍್ಯಾಂಕಿಗೆ ತಲುಪಿದ್ದರು. ಒಂದು ಸ್ಥಾನ ಭಡ್ತಿ ಪಡೆದ ಪ್ರಣಯ್ ಮತ್ತೊಮ್ಮೆ ಅಗ್ರ-15ರಲ್ಲಿ ಸ್ಥಾನ ಗಿಟ್ಟಿಸಿಕೊಂಡರು.

ಮತ್ತೊಂದೆಡೆ, ಪುರುಷರ ಡಬಲ್ಸ್ ಜೋಡಿ ಎಂ.ಆರ್. ಅರ್ಜುನ್ ಹಾಗೂ ಧ್ರುವ ಕಪಿಲಾ 3 ಸ್ಥಾನ ಮೇಲಕ್ಕೇರಿ 23ನೇ ಸ್ಥಾನ ತಲುಪಿದರು. ಮಿಕ್ಸೆಡ್ ಡಬಲ್ಸ್ ಜೋಡಿ ಇಶಾನ್ ಭಟ್ನಾಗರ್ ಹಾಗೂ ತನಿಶಾ ಭಟ್ನಾಗರ್ 2 ಸ್ಥಾನ ಜಿಗಿದು 30ನೇ ರ‍್ಯಾಂಕಿಗೆ ತಲುಪಿದರು. ಈ ತಿಂಗಳಾರಂಭದಲ್ಲಿ ಎಂ.ಆರ್. ಅರ್ಜುನ್ ಹಾಗೂ ಧ್ರುವ ಕಪಿಲಾ ಮಹಾ ಮೆಟ್ರೊ ಮಹಾರಾಷ್ಟ್ರ ಇಂಟರ್‌ನ್ಯಾಶನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಜಯಿಸಿದ್ದರು.

ಇತ್ತೀಚೆಗೆ ಬಿಡಬ್ಲ್ಯುಎಫ್ ವಿಶ್ವ ಟೂರ್ ರ‍್ಯಾಂಕಿಂಗ್‌ನಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಣಯ್ ವಿಶ್ವದ ನಂ.1 ಆಟಗಾರನಾಗಿ ಹೊರಹೊಮ್ಮಿದ್ದರು. ಸೆಪ್ಟಂಬರ್ 6ರಂದು ಬಿಡುಗಡೆಯಾದ ರ‍್ಯಾಂಕಿಂಗ್‌ನಲ್ಲಿ ಪ್ರಣಯ್ ನಂ.1 ಶಟ್ಲರ್ ಆಗಿ ಹೊರಹೊಮ್ಮಿದ್ದರು.

ವಾರ್ತಾಭಾರತಿ
YouTube ಚಾನಲ್
Subscribe ಮಾಡಿ
ಬೆಲ್ ಐಕನ್ ಒತ್ತಿ
ಪ್ರತಿದಿನ ವಿಶಿಷ್ಟ ವೀಡಿಯೋಗಳನ್ನು ವೀಕ್ಷಿಸಿ












Mattress •Pillows •Cushions
Rubberised Bare Block Manufactured by an ISO 9001 Certified Company
Email: uniquemarketingjc@gmail.com Web:www.johnsoncomfort.in
UNIQUE MARKETING: Manar Complex, Behind KMC Jyothi, Mangalore-01
Ph: 0824-2428633 Mob: 8095439878


# ಅ.15ರಿಂದ 19ರವರೆಗೆ 61ನೇ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ ಚಾಂಪಿಯನ್‌ಶಿಪ್



ಬೆಂಗಳೂರು, ಸೆ.27: ಅಕ್ಟೋಬರ್ 15ರಿಂದ 19ರವರೆಗೆ ಬೆಂಗಳೂರಿನಲ್ಲಿ 61ನೇ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ ಚಾಂಪಿಯನ್ ಶಿಪ್ ನಡೆಯಲಿದೆ. 30 ವರ್ಷಗಳ ನಂತರ ಈ ಕ್ರೀಡಾಕೂಟವನ್ನು ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ಆಯೋಜಿಸುತ್ತಿದೆ ಎಂದು ಚಾಂಪಿಯನ್ ಶಿಪ್ ಕಮಿಟಿ ಅಧ್ಯಕ್ಷರೂ ಆದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಮಂಗಳವಾರ ನಗರದಲ್ಲಿನ ಖಾಸಗಿ ಹೊಟೇಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕ್ರೀಡಾಕೂಟದಲ್ಲಿ ಒಟ್ಟು 47 ಬಗೆಯ ಸ್ಪರ್ಧೆಗಳು ನಡೆಯಲಿದ್ದು, ಸಿಎಂ ಬಸವರಾಜ ಬೊಮ್ಮಾಯಿ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಅ.19ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಭಾಗವಹಿಸಲಿದ್ದಾರೆ ಎಂದರು.

ಕ್ರೀಡಾಕೂಟವು ನಿಯಮಗಳಿಗೆ ಅನುಸಾರವಾಗಿ ನಡೆಯಲಿದ್ದು, ಉದ್ದೀಪನ ಮದ್ದು ಸೇವನೆ ಪರೀಕ್ಷೆ ಮಾಡಲಾಗುವುದು. ದೇಶದಲ್ಲಿ ಮತ್ತು ರಾಜ್ಯದಲ್ಲಿ ಕ್ರೀಡಾ ಸಂಸ್ಕೃತಿ ಸೃಷ್ಟಿಯಾಗಬೇಕು ಎನ್ನುವುದೇ ಈ ಕ್ರೀಡಾಕೂಟದ ಧ್ಯೇಯವಾಗಿದೆ ಎಂದು ಅವರು ಹೇಳಿದರು.

ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸಾವಿರಾರು ಕ್ರೀಡಾಪಟುಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಕೂಟದ ಅಂಗವಾಗಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕ್ರೀಡಾ ಸಚಿವ ನಾರಾಯಣಗೌಡ ಭಾಗವಹಿಸಲಿದ್ದಾರೆ ಎಂದು ಅವರು ನುಡಿದರು.

ಕೂಟಕ್ಕೆ ಅಗತ್ಯವಾದ ಗುಣಮಟ್ಟದ ಮೂಲ ಸೌಕರ್ಯ, ಕ್ರೀಡಾಂಗಣ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. ಅಥ್ಲೆಟಿಕ್ಸ್ ಎಲ್ಲ ಆಟಗಳ ತಾಯಿಯಾಗಿದ್ದು, ಸರಕಾರವು ಎಲ್ಲ ಬಗೆಯ ಸಹಕಾರ ಕೊಡುತ್ತಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕ್ರೀಡಾ ಚಟುವಟಿಕೆ ಮತ್ತು ದೈಹಿಕ ಕ್ಷಮತೆಗೆ ಒತ್ತು ಕೊಡಲಾಗಿದೆ. ಏಕೆಂದರೆ, ಆರೋಗ್ಯವಂತ ಯುವಜನರೇ ದೇಶದ ಆಸ್ತಿ ಎಂದು ಅವರು ಅಭಿಪ್ರಾಯಪಟ್ಟರು.

ರಾಷ್ಟ್ರಮಟ್ಟದ ಕ್ರೀಡಾಪಟು ಅಂಜು ಬಾಬಿ ಜಾರ್ಜ್ ಮಾತನಾಡಿ, ಚಾಂಪಿಯನ್ ಶಿಪ್‌ನಲ್ಲಿ ಸ್ಪರ್ಧೆಯು ತೀವ್ರವಾಗಿ ಇರಲಿದೆ. ಈ ಕ್ರೀಡಾಕೂಟಕ್ಕೆ ಕರ್ನಾಟಕ ಸರಕಾರವು ಅತ್ಯುತ್ತಮ ವ್ಯವಸ್ಥೆ ಮಾಡುತ್ತಿದೆ ಎಂದು ಬಣ್ಣಿಸಿದರು.


ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್‌ನ ಸತ್ಯನಾರಾಯಣ, ನಿಕಟಪೂರ್ವ ಉಪಾಧ್ಯಕ್ಷ ಪುರುಷೋತ್ತಮ್, ಕಾರ್ಯದರ್ಶಿ ರಾಜವೀರ್ ಉಪಸ್ಥಿತರಿದ್ದರು.

ಅಶ್ವತ್ಥ ನಾರಾಯಣ

## ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ವಿಚಾರ

# ಬೊಮ್ಮಾಯಿ ಮೇಲೆ ಬಿಎಸ್‌ವೈ ಒತ್ತಡ ಹಾಕಲಿ

ಬಸವ ಜಯಮೃತ್ಯುಂಜಯ ಸ್ವಾಮಿ



ಬೆಳಗಾವಿ, ಸೆ.27: ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಲೆ ಒತ್ತಡ ಹಾಕಿ ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ಕಲ್ಪಿಸುವಂತೆ ಸಲಹೆ ನೀಡಬೇಕೆಂದು ಕೂಡಲಸಂಗಮ ಪೀಠದ ಶ್ರೀ ಬಸವ ಜಯಮೃತ್ಯುಂಜಯಸ್ವಾಮಿ ಆಗ್ರಹಿಸಿದ್ದಾರೆ.

ಮಂಗಳವಾರ ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದನದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಅವರು ಪಂಚಮಸಾಲಿ ಸಮಾಜಕ್ಕೆ '2ಎ' ಮೀಸಲಾತಿ ಸಿಗಬೇಕೆಂದು ಧ್ವನಿಗೂಡಿಸಿದ್ದಾರೆ. ಮುಂದಿನ ದಿನಗಳಲ್ಲೂ ಯಡಿಯೂರಪ್ಪ ತಮ್ಮ ಮಾನಸಪುತ್ರ ಬಸವರಾಜ ಬೊಮ್ಮಾಯಿ ಮೇಲೆ ಒತ್ತಡ ಹಾಕಿ ಸಮಾಜಕ್ಕೆ ಮೀಸಲಾತಿ ಕಲ್ಪಿಸುವಂತೆ ಜಯಮೃತ್ಯುಂಜಯಸ್ವಾಮಿ ಆಗ್ರಹಿಸಿದರು.

ಮುಖ್ಯಮಂತ್ರಿ ಮುಂದಿನ ಸಚಿವ ಸಂಪುಟದಲ್ಲಿ ಸಭೆ ನಡೆಸಿ ತೀರ್ಮಾನ ಮಾಡಲಾಗುವುದೆಂದು ಭರವಸೆ ನೀಡಿದ್ದಾರೆ. ಈ ಮಾತನ್ನು ಅವರು ತಪ್ಪಿದರೆ ನವೆಂಬರ್ 2ನೇ ವಾರದಲ್ಲಿ ಬೆಂಗಳೂರಿನಲ್ಲಿ ಪಂಚಮಸಾಲಿ ಸಮಾಜದಿಂದ 25 ಲಕ್ಷ ಜನರನ್ನು ಸೇರಿಸಿ ವಿಧಾನಸೌಧ ಮುಂದೆ ಪ್ರತಿಭಟನೆ ನಡೆಸುತ್ತೇವೆ ಎಂದು ಸ್ವಾಮೀಜಿ ಎಚ್ಚರಿಕೆ ನೀಡಿದರು.

ಇದು ಕೊನೆ ಹಂತದ ಪ್ರತಿಭಟನೆ ಆಗಿರುವುದರಿಂದ 'ಮಾಡು ಇಲ್ಲವೇ ಮಡಿ, ಮಡಿಯುವ ಮುನ್ನ ಮೀಸಲಾತಿ ಪಡಿ' ಎಂಬ ಪ್ರತಿಭಟನೆಗೆ ಮುಂದಾಗುತ್ತೇವೆ. ಬಸವರಾಜ ಬೊಮ್ಮಾಯಿ ಕಂಕಣ ಬದ್ಧರಾಗಿ ಮೀಸಲಾತಿ ಕೊಡಿಸುವಲ್ಲಿ ಯಶಸ್ವಿಯಾಗಬೇಕು ಎಂದು ಅವರು ಆಗ್ರಹಿಸಿದರು.

## ಬಾಗ್ಮನೆ ಟೆಕ್ ಪಾರ್ಕ್ ಹೈಕೋರ್ಟ್‌ನಲ್ಲಿ ಇಂದು ಅರ್ಜಿ ವಿಚಾರಣೆ

ಬೆಂಗಳೂರು, ಸೆ.27: ನಗರದಲ್ಲಿನ ರಾಜಕಾಲುವೆ ಒತ್ತುವರಿ ತೆರವುಗೊಳಿಸುವ ವಿಷಯದಲ್ಲಿ ಬಾಗ್ಮನೆ ಟೆಕ್ ಪಾರ್ಕ್ ಸಂಸ್ಥೆ ಸಲ್ಲಿಸಿದ್ದ ದೂರಿನ ಅನ್ವಯ ಲೋಕಾಯುಕ್ತ ಪ್ರಾರಂಭಿಸಿರುವ ಪ್ರಕ್ರಿಯೆಗಳ ಕಾನೂನು ಬದ್ಧತೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ಸೆ.28ರಂದು ನಡೆಯಲಿದೆ.

ಈ ಕುರಿತು ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಅಧ್ಯಕ್ಷ ಎಸ್.ಆರ್.ಹಿರೇಮಠ ಅವರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯು ಬುಧವಾರ ಮತ್ತೆ ವಿಚಾರಣೆಗೆ ಬರಲಿದೆ.

ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಮಳೆಯಾಗಿದೆ. ವಸತಿ ಸಮುಚ್ಚಯಗಳು ಸೇರಿದಂತೆ ವಿವಿಧ ಕಟ್ಟಡಗಳು ರಾಜಕಾಲುವೆ ಒತ್ತುವರಿ ಮಾಡಿರುವ ಪರಿಣಾಮ ಮಳೆ ನೀರು ಸರಾಗವಾಗಿ ಹರಿಯಲಾರದೆ ಕೆಲ ಭಾಗಗಳಲ್ಲಿ ಮನೆಗಳಿಗೆ ನೀರು ನುಗ್ಗುವುದಕ್ಕೆ ಕಾರಣವಾಗಿತ್ತು. ಈ ಗೊಂದಲಗಳಿಗೆ ಪರಿಹಾರ ಕಲ್ಪಿಸುವ ಸಲುವಾಗಿ ಬಿಬಿಎಂಪಿ ತಕ್ಷಣ ಕ್ರಮಕ್ಕೆ ಮುಂದಾಗಿದ್ದು ರಾಜ ಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಗೆ ಮುಂದಾಗಿತ್ತು.

ಈ ನಡುವೆ ಭಾಗ್ಮನೆ ಟೆಕ್‌ಪಾರ್ಕ್‌ನಿಂದ ಸೆ.11ರಂದು ಲೋಕಾಯುಕ್ತರಿಗೆ ದೂರು ಸಲ್ಲಿಸಿ ಭಾಗ್ಮನೆ ಟೆಕ್ ಪಾರ್ಕ್‌ನ ಕಾಂಪೌಂಡ್ ಮತ್ತು ಚರಂಡಿಯ ಮೇಲಿನ ಕಲ್ಲುಗಳನ್ನು ಪಾಲಿಕೆ ಅಧಿಕಾರಿಗಳು ತೆಗೆಯುವ ಬಗ್ಗೆ ಆತಂಕವಿದೆ ಎಂದು ಮನವಿ ಮಾಡಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ್ದ ಲೋಕಾಯುಕ್ತರು, ಬಾಗ್ಮನೆ ಟೆಕ್ ಪಾರ್ಕ್‌ನ ಒತ್ತುವರಿ ತೆರವು ಮಾಡಿದ್ದಲ್ಲಿ ಈ ಭಾಗದಲ್ಲಿನ ನೆರೆಹೊರೆಯರ ಮನೆಗಳಿಗೆ ನೀರು ನುಗ್ಗುವ ಸಾಧ್ಯತೆಗಳಿವೆ. ಆದುದರಿಂದ, ಒತ್ತುವರಿ ತೆರವು ಸದ್ಯಕ್ಕೆ ಸ್ಥಗಿತಗೊಳಿಸುವಂತೆ ಸೂಚನೆ ನೀಡಿದ್ದರು.

ಈ ರೀತಿಯಲ್ಲಿ ಸೂಚನೆ ನೀಡಲು ಲೋಕಾಯುಕ್ತರಿಗೆ ಕಾನೂನಿನಲ್ಲಿ ಅವಕಾಶವಿಲ್ಲ. ಆದುದರಿಂದ, ಬಾಗ್ಮನೆ ಒತ್ತುವರಿಗೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ನೀಡಿರುವ ದೂರಿನ ಸಂಬಂಧದ ಪ್ರಕ್ರಿಯೆಯನ್ನು ರದ್ದು ಮಾಡಬೇಕು ಎಂದು ಅರ್ಜಿಯಲ್ಲಿ ಕೋರಿದ್ದಾರೆ. ಅಲ್ಲದೆ, ಕರ್ನಾಟಕ ಲೋಕಾಯುಕ್ತ ರಾಜ್ಯದಲ್ಲಿ ಭ್ರಷ್ಟಾಚಾರ ನಿರ್ಮೂಲ ಮಾಡುವ ನಿಟ್ಟಿನಲ್ಲಿ ಶ್ರಮಿಸಬೇಕಾಗಿದೆ ಎಂದು ಸಮಾಜ ಪರಿವರ್ತನಾ ಸಮುದಾಯ ಅರ್ಜಿಯಲ್ಲಿ ಉಲ್ಲೇಖಿಸಿದೆ.

## ಜನರ ಗಮನ ಬೇರೆಡೆ ಸೆಳೆಯಲು ಪಿಎಫ್‌ಐ ಕಾರ್ಯಕರ್ತರ ಬಂಧನ: ಮಧು ಬಂಗಾರಪ್ಪ



ಮೈಸೂರು, ಸೆ.27: ಪಿಎಸ್ಸೈ ಹಗರಣ, 40 ಪರ್ಸೆಂಟ್ ಕಮಿಷನ್, ಸೇರಿದಂತೆ ಹಲವಾರು ಭ್ರಷ್ಟಾಚಾರಗಳ ಆರೋಪ ಬಿಜೆಪಿ ಮೇಲಿರುವುದರಿಂದ ಜನರ ಗಮನ ಬೇರೆಡೆ ಸೆಳೆಯಲು ಪಿಎಫ್‌ಐ, ಎಸ್‌ಡಿಪಿ ಕಾರ್ಯಕರ್ತರನ್ನು ಬಂಧಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ವಾಗ್ದಾಳಿ ನಡೆಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಿಜೆಪಿಯವರ ಮೇಲೆ ಆರೋಪಗಳು ಬಂದಾಗಲೆಲ್ಲಾ ಜನರ ಮನಸ್ಸನ್ನು ಬೇರೆಡೆ ಸೆಳೆಯಲು ಧರ್ಮ, ಜಾತಿಯನ್ನು ತರುತ್ತಾರೆ. ಈಗ ಪಿಎಫ್‌ಐ ಮತ್ತು ಎಸ್‌ಡಿಪಿಐ ಕಾರ್ಯಕರ್ತರನ್ನು ಬಂಧಿಸುವ ನಾಟಕವಾಡುತ್ತಿದ್ದಾರೆ ಎಂದು ಹರಿಹಾಯ್ದರು.

ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ರೈತ, ದಲಿತ ಹಿಂದುಳಿದ ವರ್ಗ ಸೇರಿದಂತೆ ಯಾರೊಬ್ಬರೂ ನೆಮ್ಮದಿಯಿಂದ ಬದುಕಲು ಆಗುತ್ತಿಲ್ಲ, ಪೆಟ್ರೋಲ್, ಗ್ಯಾಸ್ ಸೇರಿದಂತೆ ಅಗತ್ಯವಸ್ತುಗಳ ಬೆಲೆಯನ್ನು ಗಗನಕ್ಕೆ ಏರಿಸಿದ್ದಾರೆ. ಉಜ್ವಲ ಯೋಜನೆಯಲ್ಲಿ ಉಚಿತ ಸಿಲಿಂಡರ್ ಕೊಡುವ ನಾಟಕವಾಡಿ ಜನರನ್ನು ಸಂಕಷ್ಟಕ್ಕೀಡು ಮಾಡಿ 1,050 ರೂ.ಗೆ ಗ್ಯಾಸ್ ಬೆಲೆ ಏರಿಸಿದ್ದಾರೆ. ಈಗ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲು ಮುಂದಾಗಿದ್ದಾರೆ. ಇವರು ಮೀಟರ್ ಅಳವಡಿಸಿದ್ದೇ ಆದರೆ ಅವುಗಳನ್ನು ಕಿತ್ತುಹಾಕುವ ಕೆಲಸವನ್ನು ಕಾಂಗ್ರೆಸ್ ಕಾರ್ಯಕರ್ತರು ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯ ಸರಕಾರದ ಖಜಾನೆ ಸಂಪೂರ್ಣ ಖಾಲಿಯಾಗಿದೆ. ಇವರು ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳಲ್ಲಿ ಬಡವರಿಗೆ ಒಂದೇ ಒಂದು ಮನೆ ಕೊಡಲು ಆಗಿಲ್ಲ, ಪ್ರತಿಯೊಂದರ ಮೇಲೂ ಜಿ.ಎಸ್.ಟಿ., ತೆರಿಗೆ ಹಾಕಿ ಜನರ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ಹೆಣವನ್ನು ಅಂತ್ಯ ಸಂಸ್ಕಾರ ಮಾಡಲೂ ಜಿಎಸ್‌ಟಿ ಹಾಕುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ವಾಸು, ಮಾಜಿ ಮುಡಾ ಅಧ್ಯಕ್ಷ ಗೋವಿಂದರಾಜು, ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ ಸೇರಿದಂತೆ ಹಲವರು ಉಸ್ಥಿತರಿದ್ದರು.

## ಪಿಎಫ್‌ಐ ನಾಯಕರ ಬಂಧನ ಕಾನೂನುಬಾಹಿರ: ಮಜೀದ್

ಬೆಂಗಳೂರು, ಸೆ.27: ರಾಜ್ಯ ಬಿಜೆಪಿ ಸರಕಾರ ತನ್ನ ರಾಜಕೀಯ ಶತ್ರುಗಳನ್ನು ಗುರಿಯಾಗಿಸಿಕೊಂಡು ಎಸ್‌ಡಿಪಿಐ ಪಕ್ಷ ಮತ್ತು ಪಿಎಫ್‌ಐ ನಾಯಕರನ್ನು ಅಸಂವಿಧಾನಿಕ-ಕಾನೂನುಬಾಹಿರವಾಗಿ ಬಂಧಿಸುತ್ತಿದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ಆರೋಪಿಸಿದ್ದಾರೆ.

ಪೊಲೀಸರ ದಾಳಿ ಕುರಿತು ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಯಾವುದೇ ಆಧಾರವಿಲ್ಲದೆ ಅಮಾಯಕರನ್ನು ಕೇವಲ ರಾಜಕೀಯ ದ್ವೇಷಕ್ಕೆ ಬಂಧಿಸುವ ಮೂಲಕ ತುರ್ತು ಪರಿಸ್ಥಿತಿಯಂತಹ ವಾತಾವರಣವನ್ನು ಸೃಷ್ಟಿ ಮಾಡಿ ನಮ್ಮ ಪಕ್ಷವನ್ನು ಮತ್ತು ಪಿಎಫ್‌ಐ ಹಾಗೂ ಸಿಎಫ್‌ಐ ಸಂಘಟನೆಗಳನ್ನು ಭಯಪಡಿಸುವ ಪ್ರಯತ್ನ ನಡೆಯುತ್ತಿದೆ ಎಂದು ದೂರಿದ್ದಾರೆ.

ಈ ಪ್ರಜಾಪ್ರಭುತ್ವ ವಿರೋಧಿ ಸರಕಾರದ ನಡೆ ದೇಶದಲ್ಲಿ ಕಾನೂನು, ಸಂವಿಧಾನ ಇದೆಯೋ? ಇಲ್ಲವೋ? ಅನ್ನುವ ಅನುಮಾನ ಮೂಡುವಷ್ಟರ ಮಟ್ಟಿಗೆ ಅಸಹ್ಯಕರ ರೀತಿಯ ದ್ವೇಷ ರಾಜಕಾರಣಕ್ಕೆ ಬಿಜೆಪಿ ಮುಂದಾಗಿದೆ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

# 'ಬೆಂಗಳೂರು' ಬಾಹ್ಯಾಕಾಶ ತಂತ್ರಜ್ಞಾನದ ತಾಯಿ

ಸಿಎಂ ಬೊಮ್ಮಾಯಿ

ಬೆಂಗಳೂರು, ಸೆ.27: ದೇಶದಲ್ಲೇ ಶೇ.25ರಷ್ಟು ಏರೋಸ್ಪೇಸ್ ಭಾಗಗಳನ್ನು ಬೆಂಗಳೂರಿನಲ್ಲಿ ಉತ್ಪಾದನೆಯಾಗುತ್ತಿದೆ. ಹೀಗಾಗಿಯೆ ಬೆಂಗಳೂರು ಬಾಹ್ಯಾಕಾಶ ತಂತ್ರಜ್ಞಾನದ ತಾಯಿ ಹಾಗೂ ಹಬ್ ಎನ್ನುವ ಖ್ಯಾತಿ ಪಡೆದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಂಗಳವಾರ ನಗರದ ಎಚ್‌ಎಎಲ್ ಏರೋಸ್ಪೇಸ್ ವಿಭಾಗದಲ್ಲಿ ಇಂಟಿಗ್ರೇಟೆಡ್ ಕ್ರಯೋಜೆನಿಕ್ ಇಂಜಿನ್ ಮ್ಯಾನುಫ್ಯಾಕ್ಚರಿಂಗ್ ಫೆಸಿಲಿಟಿ (ಐಎಂಎಫ್) ಹಾಗೂ ಏರೋಸ್ಪೇಸ್ ವಿಭಾಗದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.




ಇಸ್ರೋ ಮತ್ತು ಎಚ್‌ಎಎಲ್ ಎರಡರ ಸಂಯೋಜನೆಯಿಂದಾಗಿ ದೇಶದ ಬಾಹ್ಯಾಕಾಶದ ನಗರವೆಂದು ಬೆಂಗಳೂರನ್ನು ಪರಿಗಣಿಸಲಾಗಿದೆ. ಶೇ.65ರಷ್ಟು ಏರೋಸ್ಪೇಸ್ ಭಾಗಗಳನ್ನು ಬೆಂಗಳೂರಿನಿಂದ ರಫ್ತು ಮಾಡಲಾಗುತ್ತಿದೆ. ಶೇ.60ರಷ್ಟು ರಕ್ಷಣಾ ಸಾಮಗ್ರಿಗಳನ್ನು ಇಲ್ಲಿ ಉತ್ಪಾದಿಸಲಾಗುತ್ತಿದೆ. ಅದರಲ್ಲೂ ಶೇ.25ರಷ್ಟು ಏರೋಸ್ಪೇಸ್ ಭಾಗಗಳು ಬೆಂಗಳೂರಿನಲ್ಲಿ ಉತ್ಪಾದನೆಯಾಗುತ್ತಿದೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದರು.

ನಾವು ಇಂದು ನೂರಾರು ಉಪಗ್ರಹಗಳನ್ನು ಬ್ಯಾಹ್ಯಾಕಾಶಕ್ಕೆ ಹಾರಿಸಿದ್ದೇವೆ. ಈಗ ವಾಣಿಜ್ಯ ಉಪಗ್ರಹಗಳನ್ನು ಸಹ ಹಾರಿಸುವ ಘಟ್ಟಕ್ಕೆ ಬಂದಿದ್ದೇವೆ. ನಾಲ್ಕೈದು ದಶಕಗಳಿಂದ ಕ್ರಯೋಜೆನಿಕ್ ಇಂಜಿನ್ ಪ್ರಪಂಚದಲ್ಲಿ ಚರ್ಚೆಯಾಗುತ್ತಿರುವ ವಿಷಯವಾಗಿದ್ದರೂ, ಈ ಪೈಕಿ ಕೆಲವೇ ದೇಶಗಳಲ್ಲಿ ಇದರ ಅಭಿವೃದ್ಧಿ ಸಾಧ್ಯವಾಗಿದೆ ಎಂದು ಅವರು ಹೇಳಿದರು.

ಬಾಹ್ಯಾಕಾಶ ತಂತ್ರಜ್ಞಾನ ಕೆಲವೇ ದೇಶಗಳಲ್ಲಿದ್ದುದರಿಂದ ಅದರ ಅಭಿವೃದ್ಧಿಯೂ ನಾಲ್ಕೈದು ದೇಶಗಳಿಗೆ ಸೀಮಿತವಾಗಿಯೇ ಇತ್ತು. ಕ್ರಯೋಜೆನಿಕ್ ಇಂಜಿನ್‌ಗೆ ಬಳಸುವ ಸಾಮಗ್ರಿಗಳ ಬಗ್ಗೆ ಮುಖ್ಯವಾಗಿ ಚರ್ಚೆಯಾಗುತ್ತಿತ್ತು. ಅದರ ಸಂಶೋಧನೆಯೇ ಒಂದು ಸಾಧನೆ. ನಂತರದಲ್ಲಿ ಇಂಧನವನ್ನು ಹಾಕುವ ಸಾಧನವನ್ನು ಕಂಡು ಹಿಡಿಯಲಾಗಿದೆ ಎಂದ ಅವರು, ಹೈಬ್ರಿಡ್ ಕ್ರಯೋಜೆನಿಕ್ ಇಂಜಿನ್ ಅನ್ನು ಇಸ್ರೋ ಅಭಿವೃದ್ಧಿ ಪಡಿಸುತ್ತಿದ್ದು, ಎಚ್‌ಎಎಲ್ ಶೀಘ್ರದಲ್ಲಿಯೇ ಉತ್ಪಾದನೆ ಮಾಡಲು ಸಾಧ್ಯವಾಗಲಿದೆ ಎಂದರು.

ಭಾರತ ಅನಾದಿ ಕಾಲದಿಂದಲೂ ಬಾಹ್ಯಾಕಾಶದ ಅನ್ವೇಷಣೆಯಲ್ಲಿ ತೊಡಗಿದೆ. ಆರ್ಯಭಟ ಈ ಬಗ್ಗೆ ಸಂಶೋಧನೆಗಳನ್ನು ಕೈಗೊಂಡಿದ್ದರು. ಇಂದಿನ ಅನ್ವೇಷಣೆಗಳಿಗೆ ಅವರ ಸಂಶೋಧನೆಗಳು ಸ್ಫೂರ್ತಿಯಾಗಿದೆ ಎಂದು ಬಸವರಾಜ ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದು ವಿಜ್ಞಾನ ಕ್ಷೇತ್ರದಲ್ಲಿ ಭಾರತ ಬೇರೆ ಯಾವ ದೇಶಕ್ಕೂ ಕಡಿಮೆ ಇಲ್ಲ. ಅಂತರಿಕ್ಷ ಸಂಶೋಧನೆಗಳಲ್ಲಿ ತೊಡಗಿರುವ ಎಲ್ಲ ವಿಜ್ಞಾನಿಗಳು ಹಾಗೂ ಇಂಜಿನಿಯರ್‌ಗಳಿಗೆ ಅಭಿನಂದನೆ ತಿಳಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪವಾರ್, ಎಚ್‌ಎಎಲ್ ಅಧ್ಯಕ್ಷ ಅನಂತಕೃಷ್ಣ, ಇಸ್ರೋ ಅಧ್ಯಕ್ಷ ಸೋಮನಾಥ್, ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

> "ರಾಜ್ಯದಲ್ಲಿ ಏರೋಸ್ಪೇಸ್, ಆರ್ ಆ್ಯಂಡ್ ಡಿ, ರಕ್ಷಣಾ ನೀತಿಗಳು ಜಾರಿಯಲ್ಲಿದ್ದು, ಸರಕಾರದ ವತಿಯಿಂದ ಈ ಎಲ್ಲ ಸಂಶೋಧನೆಗಳಿಗೆ ಅಗತ್ಯ ಸಹಕಾರವನ್ನು ನೀಡಲಿದೆ. ಕರ್ನಾಟಕ ಹೊಸ ವಿಜ್ಞಾನ, ಆವಿಷ್ಕಾರ ಹಾಗೂ ಹೊಸ ಪಥದತ್ತ ನಡೆಯುತ್ತಿದೆ. ನಮ್ಮ ಸರಕಾರ ಘೋಷ ವಾಕ್ಯವೂ 'ನವ ಭಾರತಕ್ಕಾಗಿ ನವ ಕರ್ನಾಟಕ' ಎಂದಿದೆ.
>
> -ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

## ದಸರಾ ಮುಖ್ಯ ಕವಿಗೋಷ್ಠಿಗೆ ಮೃತ ಕವಿ ಹೆಸರು ಆಹ್ವಾನ ಪತ್ರಿಕೆಯಲ್ಲಿ ಭಾರೀ ಎಡವಟ್ಟು

ಮೈಸೂರು, ಸೆ.27: ಇತ್ತೀಚೆಗೆ ವಿವಿಧ ಟ್ರಸ್ಟ್ ಗಳಿಗೆ ನೇಮಕ ಮಾಡುವಾಗ ಕಳೆದ ವರ್ಷವೇ ಮೃತಪಟ್ಟಿದ್ದ ರಾಜೇಶ್ವರಿ ತೇಜಸ್ವಿ ಅವರನ್ನು ನೇಮಿಸಿ ಎಡವಟ್ಟು ಮಾಡಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಬಾರಿ ದಸರಾ ಮುಖ್ಯ ಕವಿಗೋಷ್ಠಿಗೆ ಮೃತಪಟ್ಟ ಕವಿಯ ಹೆಸರನ್ನು ಸೇರಿಸಿ ಮತ್ತೊಂದು ಎಡವಟ್ಟನ್ನು ಮಾಡಿದೆ.

ಮೂರು ವರ್ಷಗಳ ಹಿಂದೆಯೇ ಮೃತಪಟ್ಟ ಹಿರಿಯ ಕವಿ, ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕರಾಗಿದ್ದ ಜಿ.ಕೆ.ರವೀಂದ್ರಕುಮಾರ್ ಅವರ ಹೆಸರನ್ನು ದಸರಾ ಮುಖ್ಯ ಕವಿಗೋಷ್ಠಿಗೆ ಸೇರಿಸಲಾಗಿದೆ.

ಇದು ಆಹ್ವಾನ ಪತ್ರಿಕೆಯಲ್ಲೂ ಮುದ್ರಣವಾಗಿ ವೈರಲ್ ಆಗಿ ಸಾಕಷ್ಟು ಟೀಕೆಗೆ ಗುರಿಯಾಗಿದೆ. ಈ ವಿಷಯ ತಿಳಿಯುತಿದ್ದಂತೆ ದಸರಾ ಕವಿಗೋಷ್ಠಿ ಉಪ ಸಮಿತಿ ಅವರ ಹೆಸರು ಬದಲಿಸಿ ಹೊಸ ಆಹ್ವಾನ ಪತ್ರಿಕೆ ಮುದ್ರಿಸಿ ರವಾನಿಸಿದೆ.

ಈ ನಡುವೆ ಮುಖ್ಯ ಕವಿಗೋಷ್ಠಿಗೆ ಕೆಲವರನ್ನು ಆಯ್ಕೆ ಮಾಡಿರುವುದು ಚರ್ಚೆಗೆ ಕಾರಣವಾಗಿದೆ. ಕೆಲವು ದಿನಗಳ ಹಿಂದೆಯಷ್ಟೇ ಅಕಾಡಮಿ ಸ್ಥಾನದಿಂದ ಬದಲಾಯಿಸಿದವರನ್ನು ಕವಿಗೋಷ್ಠಿಗೆ ಹಾಕಲಾಗಿದೆ. ಕೆಲವರ ಹೆಸರನ್ನು ತಪ್ಪಾಗಿ ಮುದ್ರಿಸಲಾಗಿದೆ.

2007ರಲ್ಲೂ ಕವಿಗೋಷ್ಠಿಗೆ ಆಯ್ಕೆ ಮಾಡುವಾಗ ಹೀಗೆಯೇ ಎಡವಟ್ಟು ಮಾಡಿ ಇಡೀ ಕವಿಗೋಷ್ಠಿಯೇ ತನ್ನ ಮಹತ್ವವನ್ನು ಕಳೆದುಕೊಂಡಿತ್ತು. ಆನಂತರ ಎಚ್ಚೆತ್ತ ಸರಕಾರ ಕವಿಗೋಷ್ಠಿ ಉಪಸಮಿತಿಗೆ ಅರ್ಹರು ಹಾಗೂ ಅನುಭವಿಗಳನ್ನು ನೇಮಿಸಿ ಸರಿಪಡಿಸಿತ್ತು. ಮತ್ತೆ ಈ ಬಾರಿ ಕವಿಗಳ ಆಯ್ಕೆಯಲ್ಲಿ ಆಗಿರುವ ಎಡವಟ್ಟು ಕವಿಗೋಷ್ಠಿ ಮತ್ತೆ ಹಳೆ ಹಾದಿ ಹಿಡಿಯಲಿದೆಯೇ ಎನ್ನುವ ಚರ್ಚೆಯನ್ನು ಹುಟ್ಟುಹಾಕಿದೆ.

### ಪ್ರತಾಪಸಿಂಹ ಕ್ಷೇತ್ರದ ಹೆಸರು ಬದಲಾವಣೆ

ಮೈಸೂರು-ಕೊಡಗು ಸಂಸದ ಪ್ರತಾಪಸಿಂಹ ಅವರನ್ನು ಕವಿಗೋಷ್ಠಿ ಸಮಿತಿಯವರು ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಎಂದು ಆಹ್ವಾನಪತ್ರಿಕೆಯಲ್ಲಿ ತಪ್ಪಾಗಿ ಮುದ್ರಿಸಿ ಎಡವಟ್ಟು ಮಾಡಿದ್ದಾರೆ.


APARTMENT/LAND FOR SALE

3 BHK new duplex penthouse for sale - Inland Scion, opposite unity hospital. Total Area **3,400 sq.ft** including private terrace of **990 sq.ft.** Two car parks. Sale price **Rs.1,68,00,000.00.**

5 BHK new apartment for sale at Fern hill, Nanthoor, Mangalore. Total area **4,320 sq.ft.** 14 th Floor. 3 Car park. Sale price **Rs.2,89,000.00**

Land for sale at Kulshekar, Mangalore. 13 Acres, Suitable for Grated community, Land development, Land aggregation, School, Medical Collage and Hospital, Resort, Club. Rate **Rs.1,30,000.00 per cents.** Converted land comes under Neermarga Panchayat. Land located next to Sagar Hills apartments, Saripalla.

Serious buyers contact **90080 66866**


### 2014-15ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣ

## ಬಂಧಿತರಿಂದ ಲಿಖಿತ ಹೇಳಿಕೆ ದಾಖಲು

ಬೆಂಗಳೂರು, ಸೆ.27: 2014-15ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಶಿಕ್ಷಣ ಇಲಾಖೆಯ ನಿರ್ದೇಶಕರು ಸೇರಿದಂತೆ ಆರು ಮಂದಿ ವಿಚಾರಣೆ ನಡೆಸಿರುವ ಸಿಐಡಿ ಅಧಿಕಾರಿಗಳು, ಅವರಿಂದ ಲಿಖಿತ ಹೇಳಿಕೆ ದಾಖಲು ಮಾಡಿಕೊಂಡಿದ್ದಾರೆ.

ಬಂಧಿತರ ಪ್ರಮುಖವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕ ಎಂ.ಪಿ.ಮಾದೇಗೌಡ, ಸಮಗ್ರ ಶಿಕ್ಷಣ ಅಭಿಯಾನ ನಿರ್ದೇಶಕಿ ಗೀತಾ, ನಿವೃತ್ತ ಜಂಟಿ ನಿರ್ದೇಶಕರಾದ ಡಿ.ಕೆ. ಶಿವಕುಮಾರ್, ಕೆ.ರತ್ನಯ್ಯ, ಜಿ.ಆರ್.ಬಸವರಾಜ್ ಹಾಗೂ ಕಂಪ್ಯೂಟರ್ ಪ್ರೋಗಾಮರ್ ನರಸಿಂಹರಾವ್ ಅವರನ್ನು ವಿಚಾರಣೆ ನಡೆಸಲಾಗುತ್ತಿದೆ. ಬಂಧಿತರ ಮೇಲಿನ ಆರೋಪಗಳಿಗೆ ಸಂಬಂಧಿಸಿ ಈಗಾಗಲೇ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಆರೋಪಿಗಳನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಿ, ಲಿಖಿತ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಿಐಡಿ ಅಧಿಕಾರಿವೊಬ್ಬರು ಮಾಹಿತಿ ನೀಡಿದರು.

**ಏನಿದು ಪ್ರಕರಣ?:** 2012-13ನೇ ಮತ್ತು 2014-15ನೇ ಸಾಲಿನಲ್ಲಿ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರತ್ಯೇಕ ಎರಡು ಪ್ರಕರಣಗಳು ದಾಖಲಾಗಿತ್ತು. ಈ ಸಂಬಂಧ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, 15 ಶಿಕ್ಷಕರು ಮತ್ತು ಎಫ್‌ಡಿಎ ಪ್ರಸಾದ್ ಎಂಬಾತನ್ನು ಬಂಧಿಸಿತ್ತು.

ಆನಂತರ, ಹೆಚ್ಚಿನ ತನಿಖೆ ಸಲುವಾಗಿ ಪ್ರಸಾದ್‌ನನ್ನು ಕಸ್ಟಡಿಗೆ ಪಡೆದು ಪೊಲೀಸರು, ತೀವ್ರ ವಿಚಾರಣೆಗೆ ಒಳಪಡಿಸಿದಾಗ ಅಕ್ರಮ ನೇಮಕಾತಿ ಇಡೀ ರಾಜ್ಯದಲ್ಲಿ ನಡೆದಿರುವುದು ಬೆಳಕಿಗೆ ಬಂದಿತ್ತು. ಪ್ರತೀ ಅಭ್ಯರ್ಥಿಯಿಂದ 10 ರಿಂದ 15 ಲಕ್ಷ ರೂ. ಪಡೆದು ನೌಕರಿ ಕೊಡಿಸುವುದು ಬೆಳಕಿಗೆ ಬಂದಿತ್ತು.

## 15 ಸಾವಿರ ಶಿಕ್ಷಕರ ನೇಮಕಾತಿ: ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಸೆ.27: ರಾಜ್ಯ ಸರಕಾರವು ಹೊರಡಿಸಿದ್ದ 15 ಸಾವಿರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ 1:2 ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ಸಿದ್ಧಗೊಂಡಿದ್ದು, ಬೆಂಗಳೂರು ವಿಭಾಗದ ಪಟ್ಟಿಯನ್ನು ಮಂಗಳವಾರ ಪ್ರಕಟಿಸಿದೆ.

ಬೆಳಗಾವಿ, ಮೈಸೂರು ಮತ್ತು ಕಲಬುರಗಿ ವಿಭಾಗದ ಪಟ್ಟಿಯನ್ನು ಕ್ರಮವಾಗಿ ಬುಧವಾರ ಮತ್ತು ಗುರುವಾರ ಸಂಜೆ ನಂತರ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಟ್ವೀಟ್ ಮಾಡಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು ಮಾರ್ಚ್ ಮತ್ತು ಎಪ್ರಿಲ್ ತಿಂಗಳಲ್ಲಿ ಶಿಕ್ಷಕರ ನೇಮಕಾತಿಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸಲು ಅವಕಾಶ ನೀಡಿತ್ತು. ಮೇ 21 ಮತ್ತು 22 ರಂದು ಶಿಕ್ಷಕರ ನೇಮಕಾತಿಗಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸುಮಾರು 1,00,683 ಅಭ್ಯರ್ಥಿಗಳು ಹಾಜರಾಗಿದ್ದರು. ಆ.17ರಂದು ಅಂಕಗಳನ್ನು ಇಲಾಖೆಯ ವೆಬ್‌ಸೈಟ್ https//schooleducation.kar.nic.inನಲ್ಲಿ ಪ್ರಕಟಿಸಲಾಗಿತ್ತು.

ವೈಯಕ್ತಿಕ ವಿವವರಗಳ ತಿದ್ದುಪಡಿಗಾಗಿ ಆ.18ರಿಂದ ಆ.24ರವರೆಗೆ ದೃಢೀಕೃತ ದಾಖಲೆಗಳೊಂದಿಗೆ ಖುದ್ದಾಗಿ ಕಚೇರಿಗೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅದರಂತೆ ಈಗ 1:2 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿ, ದಾಖಲಾತಿ ಪರಿಶೀಲನೆ ನಡೆಸಲಾಗುತ್ತಿದೆ. ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು ಹಾಗೂ ನೇಮಕಾತಿ ಪ್ರಾಧಿಕಾರ ಕಚೇರಿಯಲ್ಲಿ ತಮ್ಮ ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ತಿಳಿಸಿದೆ. ವೇಳಾಪಟ್ಟಿ ಸೆ.30ರಂದು ಪ್ರಕಟಿಸಲಾಗುವುದು ಎಂದು ಪ್ರಕಟನೆ ತಿಳಿಸಿದೆ.

> ಉತ್ತರಪತ್ರಿಕೆಗಳಲ್ಲಿ ತಮ್ಮ ವೈಯಕ್ತಿಕ ಗುರುತುಗಳನ್ನು ಬಹಿರಂಗಪಡಿಸಿ ಪರೀಕ್ಷಾ ನಿಯಮಗಳನ್ನು ಉಲ್ಲಂಘಿಸಿದ ಹಾಗೂ ಇನ್ನಿತರ ಕಾರಣಗಳಿಗಾಗಿ 60 ಅಭ್ಯರ್ಥಿಗಳನ್ನು 1:2 ಅನುಪಾತ ಪಟ್ಟಿಗೆ ಪರಿಗಣಿಸದೆ ಕೈಬಿಡಲಾಗಿದೆ.


ವಾರ್ತಾಭಾರತಿ ಡಿಜಿಟಲ್ ಚಾನಲ್




ಇನ್ನೂ ಹತ್ತು ಹಲವು ವಿಶೇಷ ವೀಡಿಯೊಗಳಿಗಾಗಿ ವಾರ್ತಾಭಾರತಿ ಡಿಜಿಟಲ್ ಚಾನಲ್ ವೀಕ್ಷಿಸಿ.
youtube.com/varthabharatinews
ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಾರ್ಯಕ್ರಮ ವೀಕ್ಷಿಸಿ
ನೀವು ಇನ್ನೂ ಯೂಟ್ಯೂಬ್‌ನಲ್ಲಿ ವಾರ್ತಾಭಾರತಿ ಚಾನಲ್ SUBSCRIBE ಮಾಡಿಲ್ಲದಿದ್ದರೆ ಇಂದೇ SUBSCRIBE ಹಾಗೂ ಐಕನ್ ಒತ್ತಿ.
varthabharati


Printed, Published and Owned by Abdussalam Puthige, The Community Media Trust, Mangaluru. Printed at The Newsline Printers Bangalore No.356, 9th Cross, 1st Main, 1st Stage, Peenya Industrial Area, Bengaluru 560058. Published at No. 4/1, 2nd Floor, Shamsuddin Memorial Building, Hameed Shah Compound, Cubbonpet Main Road, Bengaluru 560002. Editor: Abdussalam Puthige. Tel: 080 22102676/78 Email: bengaluru@varthabharati.in **Posted at Bangalore PSO Bangalore-26.**

Cyan Magenta Yellow Black